ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 18 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 92 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 18 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 92 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತ ದುರಂತ

ಕೆಎಸ್‌ಸಿಎ, ಆರ್‌ಸಿಬಿ ವಿರುದ್ಧ ಕ್ರಿಮಿನಲ್ ಕೇಸ್

- ಸಚಿವ ಸಂಪುಟ ಸಭೆ ನಿರ್ಧಾರ
- ನ್ಯಾ. ಮೈಕೆಲ್ ಕುನ್ಹಾ ವರದಿ ಆಧರಿಸಿ ತೀರ್ಮಾನ
- ಗ್ರೇಟರ್ ಬೆಂಗಳೂರು ಅಡಿ ಐದು ಪಾಲಿಕೆಗಳ ರಚನೆಗೂ ನಿರ್ಣಯ
- ಮೈಸೂರು ವಿವಿಯಲ್ಲಿ 10 ಕೋಟಿ ವೆಚ್ಚದಲ್ಲಿ ಡಾ. ಅಂಬೇಡ್ಕರ್ ಸಂವಿಧಾನ ಪೀಠ
- 20 ಕೋಟಿ ವೆಚ್ಚದಲ್ಲಿ ಮಳೆ ಮಾಪನ ಕೇಂದ್ರಗಳ ಉಪಕರಣ ಹೊಸದಾಗಿ ಅಳವಡಿಕೆ



ಬೆಂಗಳೂರು, ಜು.17(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸಚಿವ ಸಂಪುಟ ಸಭೆ ಇಂದಿಲ್ಲಿ ಒಪ್ಪಿಗೆ ನೀಡಿದೆ.

ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ನೇತೃತ್ವದ ಆಯೋಗ ನೀಡಿದ ವರದಿ ಆಧರಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಜೂನ್ 4ರಂದು ಸಂಭವಿಸಿದ ಕಾಲ್ತುಳಿತ ಘಟನೆಗೆ ಕಾರಣ ಯಾರು ಎಂಬ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ರಾಜ್ಯ ಸರ್ಕಾರ ಮೈಕೆಲ್ ಕುನ್ಹಾ ಆಯೋಗ ನೇಮಿಸಿತ್ತು. ಆರ್‌ಸಿಬಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದು ಹಾಗೂ ಪೂರ್ವ ಸಿದ್ಧತೆ ಇಲ್ಲದೇ ಕಾರ್ಯಕ್ರಮ ಆಯೋಜನೆ ಮಾಡಿರುವುದೇ ದುರ್ಘಟನೆಗೆ ಕಾರಣ ಎಂದಿದೆ.

ಕಾಲ್ತುಳಿತ ಘಟನೆಯಲ್ಲಿ 11 ಮಂದಿ ಕ್ರೀಡಾಭಿಮಾನಿಗಳು ಮೃತಪಟ್ಟು, ಸುಮಾರು 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಗ್ರೇಟರ್ ಬೆಂಗಳೂರು ಅಡಿ ಐದು ನಗರಪಾಲಿಕೆಗಳ ರಚನೆಗೂ ಸಭೆ ಒಪ್ಪಿಗೆ ನೀಡಿದೆ ಎಂದರು. ಬೃಹತ್ ಬೆಂಗಳೂರು ■11ನೇ ಪುಟಕ್ಕೆ

ಪೊಲೀಸ್ ಅಧಿಕಾರಿಗಳು ಆರ್‌ಸಿಬಿ ಸೇವಕರಂತೆ ವರ್ತಿಸಿದ್ದರು

ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಸಲ್ಲಿಸಿದ ವರದಿಯಲ್ಲಿ ಉಲ್ಲೇಖ

ಬೆಂಗಳೂರು, ಜು.17– 11 ಜನರ ಸಾವಿಗೆ ಕಾರಣವಾದ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತನ್ನ ವರದಿ ಸಲ್ಲಿಕೆ ಮಾಡಿದೆ. ಪೊಲೀಸ್ ಅಧಿಕಾರಿಗಳು ಆರ್‌ಸಿಬಿ ಸೇವಕರಂತೆ ವರ್ತಿಸಿದ್ದರು ಎಂದಿರುವ ಸರ್ಕಾರ, ಐಪಿಎಸ್ ಅಧಿಕಾರಿಗಳ ಅಮಾನತುಗೊಳಿಸಿರುವುದನ್ನು ಸಮರ್ಥಿಸಿಕೊಂಡಿದೆ. ಐಪಿಎಲ್ ವಿಜಯೋತ್ಸವದ ಸಿದ್ಧತೆಗಳ ಸಮಯದಲ್ಲಿ ಅಧಿಕಾರಿಗಳು ಆರ್‌ಸಿಬಿ ಸೇವಕರು ಎಂಬಂತೆ ವರ್ತಿಸಿದ್ದಾರೆ ಎಂದು ವಾದಿಸಿದ್ದು, ಸಾರ್ವಜನಿಕ ಮುಜುಗರಕ್ಕೆ ಕಾರಣವಾಯಿತು ಎಂದು ಹೇಳಿದೆ. ಅಂತಿಮ ಐಪಿಎಲ್ ಪಂದ್ಯ ನಡೆಯುವ ಮೊದಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಮ್ಮ ■11ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯ ಚಾಮುಂಡೇಶ್ವರಿ ವರ್ಧಂತಿ ಉತ್ಸವ

- ರಾಜವಂಶಸ್ಥರಿಂದ ಚಿನ್ನದ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಚಾಲನೆ
- ಭಕ್ತಿಯ ನೆಲೆಯಲ್ಲಿ 'ಭದ್ರತೆ ಕೋಟೆ'ಯಿಂದ ಬೆಟ್ಟದ ಭಕ್ತ ಸಮೂಹ





ಚಾಮುಂಡಿಬೆಟ್ಟದಲ್ಲಿ ನಡೆದ ಚಾಮುಂಡೇಶ್ವರಿ ವರ್ಧಂತಿ ಉತ್ಸವದಲ್ಲಿ ನೆರೆದಿದ್ದ ಭಕ್ತ ಸಾಗರ. ಬಲಚಿತ್ರದಲ್ಲಿ ಅಲಂಕೃತ ಚಾಮುಂಡೇಶ್ವರಿ ತಾಯಿಯನ್ನು ಕಾಣಬಹುದು.

ಮೈಸೂರು, ಜು.17(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ನಾಡದೇವಿ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ ಗುರುವಾರ ಸಾಂಪ್ರದಾಯಿಕ ಪೂಜೆಯೊಂದಿಗೆ ವಿಜೃಂಭಣೆಯಿಂದ ಜರುಗಿತು.

ಪೊಲೀಸರ ಭದ್ರತೆ ಹಾಗೂ ಬ್ಯಾರಿಕೇಡ್ ಭದ್ರ ಕೋಟೆಯಿಂದ ಬೇಸರಗೊಂಡವರಂತೆ! ವರ್ಧಂತಿ ಮಹೋತ್ಸವದಲ್ಲಿ ಭಕ್ತರ ಕೊರತೆ ಎದ್ದು ಕಂಡುಬಂತು. ಸಂಪ್ರದಾಯದಂತೆ ವಿವಿಧ ಪೂಜೆ ನೆರವೇರಿಸಿದ ಬಳಿಕ ಚಿನ್ನದ ಅಡ್ಡಪಲ್ಲಕ್ಕಿಯಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಮೆರವಣಿಗೆಯಲ್ಲಿ ಕೊಂಡೊಯ್ದು ಪರಂಪರೆ ಮೆರೆಸಲಾಯಿತು.

ಆಷಾಢ ಮಾಸದ ಕೃಷ್ಣ ಪಕ್ಷದ ಅಷ್ಟಮಿಯ ರೇವತಿ ನಕ್ಷತ್ರದ ದಿನದಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವ(ಜನ್ಮದಿನ) ಆಚರಿಸುವ ಪದ್ಧತಿಯಿದ್ದು, ಶಕ್ತಿದೇವತೆ ಚಾಮುಂಡೇಶ್ವರಿ ಅಮ್ಮನವರ ಜನ್ಮದಿನದ ಕಾರ್ಯಕ್ರಮವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ನಾನಾ ಹೂವುಗಳಿಂದ ಅಲಂಕಾರಗೊಂಡಿದ್ದ ಬೆಟ್ಟದ ಚಾಮುಂಡೇಶ್ವರಿ ದೇವಾಲಯ ವರ್ಧಂತಿ ಮಹೋತ್ಸವದ ಮೆರುಗು ಹೆಚ್ಚಿಸಿತ್ತು.

ವಿಶೇಷ ಪೂಜೆ: ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ನಾಡದೇವಿಯ ಉತ್ಸವಮೂರ್ತಿಗೆ ಮುಂಜಾನೆಯಿಂದಲೇ ಪ್ರಧಾನ ಆಗಮಿಕ ಡಾ.ಎನ್. ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಉತ್ಸವ ಮೂರ್ತಿಗೆ ಅಭ್ಯಂಜನ(ಎಣ್ಣೆಸ್ನಾನ), ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ, ತ್ರಿಪದಿ, ಅಷ್ಟೋತ್ತರ ಪೂಜೆ ನೆರವೇರಿಸಿದ ಬಳಿಕ ಮಂಗಳಾರತಿ ಬೆಳಗ್ಗೆ 8 ಗಂಟೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಯಿತು.

ಅಡ್ಡ ಪಲ್ಲಕ್ಕಿ ಉತ್ಸವ: ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಬೆಳಗ್ಗೆ 10.30ಕ್ಕೆ ಚಿನ್ನದ ಅಡ್ಡ ಪಲ್ಲಕ್ಕಿಯಲ್ಲಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಮೆರವಣಿಗೆ ■10ನೇ ಪುಟಕ್ಕೆ

ಇಂದು ಕೊನೆಯ ಆಷಾಢ ಶುಕ್ರವಾರ

ಮೈಸೂರು, ಜು.17– ಆಷಾಢ ಮಾಸದ ಕೊನೆ ಶುಕ್ರವಾರದ ವಿಶೇಷ ಪೂಜೆಗೆ ಚಾಮುಂಡೇಶ್ವರಿ ದೇವಸ್ಥಾನ ಸಿಂಗಾರಗೊಂಡಿದೆ.

ಇಂದು ವರ್ಧಂತಿ ಹಾಗೂ ಕಳೆದ ಮೂರು ಶುಕ್ರವಾರಗಳಂದು ಲಕ್ಷಾಂತರ ಭಕ್ತರು ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದಿದ್ದು, ಕೊನೆ ಶುಕ್ರವಾರವೂ ಅಪಾರ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆಯೊಂದಿಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಂದಿನಂತೆ ಲಲಿತ ಮಹಲ್ ಬಳಿಯ ಮೈದಾನದಿಂದ ಬೆಳಗ್ಗೆ 5ರಿಂದ ರಾತ್ರಿ 8 ಗಂಟೆವರೆಗೂ ಉಚಿತ ಸಾರಿಗೆ ಬಸ್ ವ್ಯವಸ್ಥೆ ಇರಲಿದ್ದು, ನಗರ ಬಸ್ ನಿಲ್ದಾಣದಿಂದಲೂ ಬಸ್‌ಗಳು ಸಂಚರಿಸಲಿವೆ. ಮೆಟ್ಟಿಲುಗಳ ಮೂಲಕ ಸಹಸ್ರಾರು ಭಕ್ತರು ಬೆಟ್ಟವೇರಿ ತಾಯಿಯ ದರ್ಶನ ಪಡೆಯುವುದರಿಂದ ಸೂಕ್ತ ಬಂದೋಬಸ್ತ್ ಮಾಡಿಕೊಳ್ಳಲಾಗಿದೆ.

ಮೈಸೂರು ಭಾರತದ 3ನೇ ಸ್ವಚ್ಛ ನಗರ

3 ರಿಂದ 10 ಲಕ್ಷ ಜನಸಂಖ್ಯೆಯುಳ್ಳ ನಗರ ವಿಭಾಗದಲ್ಲಿ ನೋಯ್ಡಾ, ಚಂಡೀಗಢದ ನಂತರದ ಸ್ಥಾನ ಸಾಂಸ್ಕೃತಿಕ ನಗರಿಗೆ

ಮೈಸೂರು,ಜು.17(ಎಂಟಿವೈ)– ಕೇಂದ್ರ ಸರ್ಕಾರ ನಡೆಸಿದ 2024–25ನೇ ಸಾಲಿನ 'ಸ್ವಚ್ಛ ಸರ್ವೇಕ್ಷಣೆ'ಯಲ್ಲಿ ಮೈಸೂರು ನಗರಕ್ಕೆ ಮೂರನೇ ಸ್ಥಾನ ಸಂದಿದೆ.

ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದಿಂದ ಐದು ವಿಭಾಗದಲ್ಲಿ ನಡೆದ ಸ್ವಚ್ಛ ಸರ್ವೇಕ್ಷಣೆಯಲ್ಲಿ 3ರಿಂದ 10 ಲಕ್ಷ ಜನಸಂಖ್ಯೆಯಿರುವ 'ಸೂಪರ್ ಸ್ವಚ್ಛ ಲೀಗ್ ಸಿಟಿ' ವಿಭಾಗದಲ್ಲಿ ನೋಯ್ಡಾ ಪ್ರಥಮ, ಚಂಡಿಗಢ್ ದ್ವಿತೀಯ, ಮೈಸೂರು ತೃತೀಯ, ಉಜ್ಜಯಿನಿ ನಾಲ್ಕನೇ ಸ್ಥಾನ, ಗಾಂಧಿನಗರ ಹಾಗೂ ಗುಂಟೂರು ಕ್ರಮವಾಗಿ ಐದು ಮತ್ತು ಆರನೇ ಸ್ಥಾನ ಪಡೆದುಕೊಂಡಿವೆ.

ಕಳೆದ ಬಾರಿಯ ಸ್ವಚ್ಛ ಸರ್ವೇಕ್ಷಣೆ ಸ್ಪರ್ಧೆಯಲ್ಲಿ ಮೈಸೂರಿಗೆ 23ನೇ ಸ್ಥಾನ ಲಭಿಸಿತ್ತು. ಆದರೆ, ಈ ಬಾರಿ ಪಾಲಿಕೆ ಸ್ವಚ್ಛತಾ ಸಿಬ್ಬಂದಿಗಳ ಪರಿಶ್ರಮದಿಂದಾಗಿ ಮೈಸೂರು ನಗರ 3ನೇ ಸ್ವಚ್ಛ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಪ್ರಶಸ್ತಿ ಸ್ವೀಕಾರ: ನವದೆಹಲಿಯ ವಿಜ್ಞಾನ ಭವನದಲ್ಲಿ ಇಂದು ಬೆಳಗ್ಗೆ ನಡೆದ ಸ್ವಚ್ಛ ಸರ್ವೇಕ್ಷಣಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಕರ್ನಾಟಕ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಹಾಗೂ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ. ವೆಂಕಟೇಶ್, ಎಇಇಗಳಾದ ಧನುಶ್, ಮೃತ್ಯುಂಜಯ, ಆರೋಗ್ಯ ನಿರೀಕ್ಷಕರಾದ ಮೈತ್ರಿ, ಮಹದೇವಮ್ಮ ಮತ್ತಿತರರಿದ್ದರು.

ಇಂದೋರ್‌ಗೆ ಸತತ 8ನೇ ಬಾರಿ ಕ್ಲೀನ್ ಸಿಟಿ ಹೆಗ್ಗಳಿಕೆ



ನವದೆಹಲಿಯ ವಿಜ್ಞಾನ ಭವನದಲ್ಲಿ ಗುರುವಾರ ಬೆಳಗ್ಗೆ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಕರ್ನಾಟಕ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಪ್ರಶಸ್ತಿ ಸ್ವೀಕರಿಸಿದರು.

ಇಂದೋರ್‌ಗೆ ಮತ್ತೆ ಗರಿ: ಸ್ವಚ್ಛ ನಗರ ಸ್ಪರ್ಧೆಯ ಪ್ರಮುಖ ವಿಭಾಗವಾದ 10 ಲಕ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆಯಿರುವ ನಗರಗಳ ವಿಭಾಗದಲ್ಲಿ ಮಧ್ಯಪ್ರದೇಶದ ಇಂಧೋರ್ ಮತ್ತೆ ಪ್ರಥಮ ಸ್ಥಾನ ಪಡೆಯುವ ಮೂಲಕ 'ದೇಶದ ಸ್ವಚ್ಛ ನಗರ' ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಮೂಲಕ ಸತತ 8ನೇ ಬಾರಿ ಅಗ್ರಸ್ಥಾನ ದಕ್ಕಿಸಿಕೊಂಡಿದೆ. ಸೂರತ್ ದ್ವಿತೀಯ, ನವಿಮುಂಬೈ ಮೂರನೇ ಸ್ಥಾನ ಹಾಗೂ ವಿಜಯವಾಡ ನಾಲ್ಕನೇ ಸ್ವಚ್ಛನಗರ ಎಂಬ ಕೀರ್ತಿಗೆ ಪಾತ್ರವಾಗಿವೆ.

3 ರಿಂದ 10 ಲಕ್ಷ ಜನಸಂಖ್ಯೆಯಿರುವ ನಗರ: ಸ್ವಚ್ಛ ಸರ್ವೇಕ್ಷಣೆಯಲ್ಲಿ 3ರಿಂದ 10 ಲಕ್ಷ ಜನಸಂಖ್ಯೆಯಿರುವ ಸೂಪರ್ ಸ್ವಚ್ಛ ಲೀಗ್ ಸಿಟಿ ವಿಭಾಗದಲ್ಲಿ ನೋಯ್ಡಾ ಪ್ರಥಮ, ಚಂಡಿಗಢ್ ದ್ವಿತೀಯ, ಮೈಸೂರು ತೃತೀಯ, ಉಜ್ಜಯಿನಿ ನಾಲ್ಕನೇ ಸ್ಥಾನ, ಗಾಂಧಿನಗರ ಹಾಗೂ ಗುಂಟೂರು ಕ್ರಮವಾಗಿ ಐದು ಮತ್ತು ಆರನೇ ಸ್ಥಾನ ಪಡೆದುಕೊಂಡಿದೆ.

50 ಸಾವಿರದಿಂದ 3 ಲಕ್ಷ: ದೇಶದಲ್ಲಿ 50 ಸಾವಿರದಿಂದ 3 ಲಕ್ಷ ಜನಸಂಖ್ಯೆ ಹೊಂದಿರುವ ನಗರಗಳ ವಿಭಾಗದಲ್ಲಿ ನವದೆಹಲಿಯ ■10ನೇ ಪುಟಕ್ಕೆ

ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರಿ ಭೂಕುಸಿತ: ಸಂಚಾರ ಬಂದ್



ಮಂಗಳೂರು, ಜು.17– ಭಾರಿ ಮಳೆಯ ಪರಿಣಾಮ ದಕ್ಷಿಣ ಕನ್ನಡದ ಕಡಬ ತಾಲೂಕಿನ ರಾಷ್ಟ್ರೀಯ ಹೆದ್ದಾರಿ–75 ರಲ್ಲಿ ಭಾರಿ ಭೂಕುಸಿತ ಸಂಭವಿಸಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಮತ್ತು ಮಂಗಳೂರು ನಡುವಿನ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ.

ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಭೂಕುಸಿತ ಸಂಭವಿಸಿದ್ದು, ಸ್ಥಳದಲ್ಲಿ ಅಧಿಕಾರಿಗಳು ಮಣ್ಣು ತೆರವು ಕಾರ್ಯಾಚರಣೆಯನ್ನು ಆರಂಭಿಸಿದ್ದಾರೆ.

ಭೂಕುಸಿತ ಪರಿಣಾಮ ಮಂಗಳೂರು–ಬೆಂಗಳೂರು, ಬೆಂಗಳೂರು–ಮಂಗಳೂರು ಸಾಗುವ ಲಾರಿ, ಬಸ್, ಟ್ರಕ್‌ಗಳ ಸಂಚಾರ ಸಂಪೂರ್ಣ ಬಂದ್ ಆಗಿದ್ದು, ■11ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ : ನನ್ನ ತಂದೆ ಮಹಾನ್ ಧೈರ್ಯಶಾಲಿ ಕಣೋ... ಒಂದು ಸಲ ಸಿಂಹದ ಬೋನಿನೊಳಗೆ ಹೋಗಿದ್ರು.

ತಿಮ್ಮ : ಹೌದಾ... ಅವರು ಹೊರಗೆ ಬರಬೇಕಾದರೆ ಜನ ತುಂಬಾ ಚಪ್ಪಾಳೆ ಹೊಡೆದಿರಬೇಕಲ್ವಾ

ಗುಂಡ : ಅಲ್ಲೇ ನೀನು ತಪ್ಪು ತಿಳಿದುಕೊಂಡಿದ್ದು. ನಾನು ಎಲ್ಲಿ ಹೇಳ್ದೆ ಅವ್ರು ಬೋನಿನಿಂದ ಹೊರಗೆ ಬಂದ್ರು ಅಂತ!

ಮೈಸೂರು ಮಿತ್ರ

ಶುಕ್ರವಾರ, 18 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೆಲಸವಿಲ್ಲದೆ ಸುಮ್ಮನೆ ಕುಳಿತವನ ಭುಜದ ಮೇಲೆ 'ಶನಿ'ಯು ಬಂದು ಕೂಡುತ್ತಾನೆ. – ಬೀಚಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎತ್ತು ಏರಿಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು.

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

■ ಸಹೃದಯ ಧೀಮಂತ ಪತ್ರಕರ್ತನಿಗೆ ನಮನ



ಮಾನ್ಯರೇ,

ನಾನು ತೊಂಬತ್ತರ ದಶಕದಲ್ಲಿ ಪತ್ರಿಕೆಗೆ ಲೇಖನಗಳನ್ನು ಬರೆಯಲಾರಂಭಿಸಿದಾಗ ಅದನ್ನು ಮೊದಲು ಗುರುತಿಸಿ 'ಮೈಸೂರು ಮಿತ್ರ' ಪತ್ರಿಕೆಯ ಭಾನುವಾರದ ಪುರವಣಿಯಲ್ಲಿ ಲೇಖನ ಬರೆಯುವಂತೆ ಪ್ರೋತ್ಸಾಹಿಸಿ, ಬರೆದಿದ್ದನ್ನು ಪತ್ರಿಕೆಯಲ್ಲಿ ಪ್ರಕಟವಾಗುವಂತೆ ನೋಡಿಕೊಂಡವರು ಸಂಪಾದಕರೂ ,ನನ್ನ ಮಾರ್ಗದರ್ಶಕರೂ ಆಗಿದ್ದ ಕೆ.ಬಿ.ಗಣಪತಿ ಅವರು ಎಂದು ಹೇಳಿಕೊಳ್ಳಲು ಖುಷಿಯಾಗುತ್ತದೆ.

ನಿಮ್ಮಲ್ಲಿ ಬರೆಯುವ ಶಕ್ತಿ ಇದೆ. ಸಾಹಿತ್ಯ ಮತ್ತು ಭಾಷೆಯ ಹಿಡಿತ ಇದೆ. ಅದನ್ನು ಮುಂದುವರಿಸಿ ಎಂದು ಹಲವಾರು ಲೇಖನಗಳನ್ನು ಅವರು ಬರೆಸಿದರು. ಅಲ್ಲದೆ ಕೆ.ಆರ್.ಪೇಟೆಯಿಂದ ಪತ್ರಿಕೆಗೆ ವರದಿ ಕಳುಹಿಸುವ ಕಾರ್ಯಕ್ಕೆ ನನ್ನನ್ನು ನಿಯೋಜಿಸಿದರಲ್ಲದೆ ಬಮನಾ ಎಂದು ಶಾರ್ಟ್ ನೇಮ್‌ನಲ್ಲಿ ಸುದ್ದಿ ಪ್ರಕಟಿಸಿ ಜನರಿಗೆ ಪರಿಚಯವಾಗುವಂತೆ ಮಾಡಿದರು.

ಸಂಪಾದಕರಾಗಿದ್ದ ಗಣಪತಿ ಅವರು ತಾವು ಮಾತ್ರ ಬೆಳೆಯಲಿಲ್ಲ. ತಾಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ನನ್ನಂತಹವರನ್ನು ಗುರುತಿಸಿ ಅವರು ಪತ್ರಿಕೆಯ ಏಜೆಂಟರಾಗುವ ಜೊತೆಗೆ ವರದಿಗಾರರಾಗಿ ಬೆಳೆಯುವಂತೆ ನೋಡಿಕೊಂಡರು.

ಸದಾ ಕ್ರಿಯಾಶೀಲ ವ್ಯಕ್ತಿತ್ವ ಅವರದು. ಅವರ 'ಮೈಸೂರು ಮಿತ್ರ'ದ 'ಭೂ ಮಂತ್ರ,' 'ಸ್ಟಾರ್ ಆಫ್ ಮೈಸೂರ್'ನ 'ಅಬ್ರಕಡಬ್ರಾ' ಅತ್ಯುತ್ತಮ ಸಂಪಾದಕೀಯ ಲೇಖನ ಮಾತ್ರವಲ್ಲ ಸಾಹಿತ್ಯಾತ್ಮಕ ಬರವಣಿಗೆ ಆಗಿದ್ದವಲ್ಲದೆ ಹೊಸ ಪತ್ರಕರ್ತರಿಗೆ, ಕಿರಿಯ ಲೇಖಕರಿಗೆ ಮಾರ್ಗದರ್ಶಕವಾಗಿದ್ದವು. ಅದೇ ರೀತಿ 'ಸ್ಟಾರ್ ಆಫ್ ಮೈಸೂರ್' ಜನಪ್ರಿಯವಾಗಲು ಅದರಲ್ಲಿ ಬಳಸುತ್ತಿದ್ದ ಸರಳ ಇಂಗ್ಲೀಷ್ ಪದಗಳು ಮತ್ತು ವಾಕ್ಯಗಳು ಕಾರಣ. ಅದರಲ್ಲಿ ಕೆಬಿಜಿ ಅವರ ಹೊಣೆಗಾರಿಕೆ ದೊಡ್ಡದು. ಪ್ರತಿ ಬಾರಿ ಕಚೇರಿಗೆ ಹೋದಾಗ ಕಂಡಾಗಲೆಲ್ಲಾ 'ಏನ್ರೀ ಬಮನಾ' ಎಂದು ಪ್ರೀತಿಯಿಂದ ಮಾತಿಗೆ ಪೀಠಿಕೆ ಹಾಕುತ್ತಿದ್ದರು.

'ಮೈಸೂರು ಮಿತ್ರ' ಪತ್ರಿಕೆಗೆ 25 ವರ್ಷ ತುಂಬಿದಾಗ ನನ್ನ ಬಹುತೇಕ ಬರವಣಿಗೆಗಳನ್ನು ಅವರು ಗುರುತಿಸಿ ಅಭಿನಂದಿಸಿದ್ದರು. ತಮ್ಮ ಜೀವಿತದ ಉದ್ದಕ್ಕೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ಮೈಸೂರು ನಗರ, ಚಾಮರಾಜನಗರ, ಮೈಸೂರು ಜಿಲ್ಲೆ, ಹಾಸನ, ಮಂಡ್ಯ ಮತ್ತು ಕೊಡಗು ಜಿಲ್ಲೆಗಳಲ್ಲಿ ಮನೆ ಮನೆಯ ಮಾತಾಗುವಂತೆ ಮಾಡಿದ ಅವರ ನಿಧನ ಪತ್ರಿಕೋದ್ಯಮಕ್ಕೆ ಮತ್ತು ನನ್ನಂತಹವರಿಗೆ ತುಂಬಲಾರದ ನಷ್ಟ, ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ. **– ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್.ಪೇಟೆ.**

■ ಕೆಬಿಜಿ ನೆನಪು ನಿರಂತರ, ಅಜರಾಮರ

ಮಾನ್ಯರೆ,

ಡಾ.ಕೆ.ಬಿ. ಗಣಪತಿಯವರ ಸರಳತೆ ಆದರ್ಶ ನಡೆ ನುಡಿ, ವ್ಯಕ್ತಿತ್ವ ಇತರರಿಗೆ ಅನುಕರಣೀಯ. ಪತ್ರಿಕೋದ್ಯಮದಲ್ಲಿ ದಿಗ್ಗಜರಾಗಿದ್ದ ಇವರ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಓದುಗರ ಅಚ್ಚು ಮೆಚ್ಚಿನ ದಿನಪತ್ರಿಕೆಗಳಾಗಿವೆ. ಪ್ರತಿದಿನ ಅತ್ಯುತ್ತಮ ಉಪಯುಕ್ತ ಮಾಹಿತಿ ನೀಡುವ ಇವರ ಪತ್ರಿಕೆಗಳನ್ನು ನಾನು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಓದುತ್ತೇನೆ. ಹಲವಾರು ವಿಚಾರಗಳನ್ನು ಇವರ ಪತ್ರಿಕೆಗಳಿಂದ ಓದಿ ತಿಳಿದುಕೊಳ್ಳುವುದೇ ಒಂದು ಖುಷಿ. ಇವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ ಹಾಗೂ ಇವರ ಕುಟುಂಬ ವರ್ಗ ಮತ್ತು ಆತ್ಮೀಯರೆಲ್ಲರಿಗೂ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥನೆ.

ಭಾವನಾತ್ಮಕವಾಗಿ ಚುಟುಕಾಗಿ ಹೇಳಬೇಕೆಂದರೆ

ಕೆ. ಕೆಚ್ಚೆದೆಯ ವೀರರಾಗಿ
ಬಿ. ಬೀಗುಬಿನ್ನಾಣಗಳಿಲ್ಲದೆ
ಗ. ಗರ್ವರಹಿತರಾಗಿ
ಣ. ನಗನಾಣ್ಯಗಳ ಆಮಿಷಕ್ಕೆ ಒಳಗಾಗದೆ
ಪ. ಪರಿಸರ ಪ್ರೇಮಿಯಾಗಿ ಸಮಾಜವನ್ನು ನಿರಂತರವಾಗಿ
ತಿ. ತಿದ್ದುತ್ತಿದ್ದ ಎಲ್ಲರ ಆತ್ಮೀಯರಾಗಿ
ಸಾಮಾಜಿಕ ಸೇವೆ ಮಾಡುತ್ತಿದ್ದ ಇವರ ನೆನಪು ನಿರಂತರ, ಅಜರಾಮರ

–ಜಿ.ರವಿಶಂಕರ್, ಉಮ್ಮತ್ತೂರು, ನಂಜನಗೂಡು ತಾ.

■ ಸರ್ವರಿಗೂ ಮಿತ್ರ ಡಾ. ಕೆ.ಬಿ. ಗಣಪತಿ

ಮಾನ್ಯರೆ,


ಡಾ. ಕೆ.ಬಿ. ಗಣಪತಿ ಪತ್ರಿಕೋದ್ಯಮದಲ್ಲಿ ಹೆಸರಾಂತ ವ್ಯಕ್ತಿ. ಅವರು ಪ್ರಮುಖ ಕನ್ನಡ ಪತ್ರಿಕೆಯ 'ಮೈಸೂರು ಮಿತ್ರ' ಸ್ಥಾಪಕರಾಗಿ, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಐದು ದಶಕಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದ ವ್ಯಕ್ತಿ. ತಮ್ಮ ಪ್ರಾಮಾಣಿಕತೆ, ಧೈರ್ಯ ಮತ್ತು ಜನಪರ ದೃಷ್ಟಿಕೋನದಿಂದ ಅವರು ಪತ್ರಿಕೋದ್ಯಮಕ್ಕೆ ವಿಶೇಷ ಆದರ್ಶ ಸ್ಥಾಪಿಸಿದರು. ಜನಸೇವೆಗಾಗಿ ಪತ್ರಿಕೋದ್ಯಮವನ್ನು ಆಯ್ದುಕೊಂಡವರು. ಮೈಸೂರಿನಲ್ಲಿ ಪ್ರಮುಖ ಕನ್ನಡ ಪತ್ರಿಕೆ ಸ್ಥಾಪಿಸಿ ಅದನ್ನು ಯಶಸ್ವಿಯಾಗಿ ನಿಭಾಯಿಸಿದರು. ಕನ್ನಡ ಪತ್ರಿಕೆ ಮಾತ್ರವಲ್ಲದೆ ಮೈಸೂರು ಜಿಲ್ಲೆಯಲ್ಲಿ ಇಂಗ್ಲಿಷ್ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಅವರದೇ ಆದ ಆವಿಷ್ಕಾರ. ಈ ಮೂಲಕ ಕನ್ನಡ ಮತ್ತು ಇಂಗ್ಲಿಷ್ ಓದುಗರ ನಡುವೆ ಭಾರಿ ಪ್ರಭಾವ ಬೀರುವ ಪತ್ರಿಕೋದ್ಯಮ ತಯಾರಿಸಿದರು. ಸಮಾಜದಲ್ಲಿ ಉಂಟಾಗುವ ಸಮಸ್ಯೆಗಳನ್ನು ಧೈರ್ಯವಾಗಿ ಓದುಗರ ಮುಂದೆ ಇಡುತ್ತಿದ್ದ ಅವರು, ಪ್ರಜೆಗಳ ಧ್ವನಿಯಾಗಿ ಕೆಲಸ ಮಾಡಿದರು. ನಿರ್ಭೀತಿಯಾಗಿ, ನಿಷ್ಪಕ್ಷಪಾತವಾಗಿ ವರದಿ ಮಾಡುವ ಗಣಪತಿಯವರ ಶೈಲಿ, ಅನೇಕ ಪತ್ರಕರ್ತರಿಗೆ ಮಾದರಿಯಾಗಿದೆ.

ಅವರ ಲೇಖನಗಳು ಸಾಮಾಜಿಕ ಬದಲಾವಣೆಗಳಿಗೆ ದಾರಿ ತೆರೆದವು. ಸರ್ಕಾರದ ನೀತಿಗಳ ವಿರುದ್ಧವೂ ಧೈರ್ಯವಾಗಿ ಬರೆಯುತ್ತಿದ್ದ ಅವರು, ಸದಾ ಸತ್ಯದ ಪರ ನಿಂತವರು. ಡಾ.ಗಣಪತಿ ಅವರು ಪತ್ರಿಕೋದ್ಯಮ ಒಂದು ಧರ್ಮವಾಗಿದೆ ಎಂಬ ತತ್ತ್ವದೊಂದಿಗೆ ಬದುಕಿದವರು.

ಇತ್ತೀಚೆಗೆ ಅವರು ನಮ್ಮನ್ನು ಅಗಲಿರುವುದು ಮೈಸೂರು ಮಾತ್ರವಲ್ಲದೇ, ಇಡೀ ಕರ್ನಾಟಕಕ್ಕೆ ತುಂಬಲಾಗದ ನಷ್ಟ ಎಂದರೆ ತಪ್ಪಾಗಲಾರದು. ತಮ್ಮ ಲೇಖನಗಳ ಮೂಲಕ ಜನರಲ್ಲಿ ರಾಜಕೀಯ, ಸಾಮಾಜಿಕ ಜಾಗೃತಿ ಉಂಟು ಮಾಡಿದ ಗಣಪತಿ ಅವರ ಹಾದಿ ಸದಾ ಹೊಸ ಪತ್ರಕರ್ತರಿಗೆ ಪ್ರೇರಣೆಯಾಗಿದೆ.

–ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.

ಮೈಸೂರಿನ ಸಾರಸ್ವತ ಲೋಕದ ಹರಿಕಾರರು ನಮ್ಮ ಕೆಬಿಜಿ ಸರ್



ಡಾ. ಕೆ.ಬಿ.ಗಣಪತಿ (ಕೆಬಿಜಿ)

> **"ನನ್ನ ಚಿಕ್ಕ ವಯಸ್ಸಿನಿಂದಲೂ, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಓದುತ್ತಾ ಅದರಲ್ಲಿ ಬರೆಯುತ್ತ, ನನ್ನಲ್ಲಿಯ ಕ್ರಿಯಾಶೀಲತೆಗೆ ಒಂದು ವೇದಿಕೆಯನ್ನು ತಂದುಕೊಟ್ಟವರು ಕೆಬಿಜಿ ಸರ್! ನನ್ನಂತಹ ಹಲವಾರು ಜನರಿಗೆ ತಮ್ಮ ಪತ್ರಿಕೆಯಲ್ಲಿ ಬರೆಯಲು ಅವಕಾಶ ಕೊಟ್ಟು ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟ ವಿಶಾಲ ಮನಸ್ಸಿನ ಅವರು ನಮ್ಮ ಈ ಮೈಸೂರಿನಲ್ಲೊಂದು ಸಾರಸ್ವತ ಲೋಕವನ್ನೇ ಹುಟ್ಟು ಹಾಕಿದರೆಂದರೆ ತಪ್ಪೇನಿಲ್ಲ!**



ಡಾ॥ ಸುಧಾ ಎಂ.ಎನ್.
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933

ನೆನ್ನೆ ಮೊನ್ನೆಯಷ್ಟೇ ನಿಮ್ಮ ಸ್ವರ ಕೇಳಿದಂತಿದೆ, ನಿಮ್ಮ ನಿಷ್ಠುರದ, ಮೊನಚು ಮಾತಿನ ನಗೆ ಚಾಟಿಯಲ್ಲಿಯೇ ಅವಿತಿದ್ದ ಸಲಹೆಗಳನ್ನು ಮತ್ತೆ ನಮಗ್ಯಾರು ಹೇಳುತ್ತಾರೆ ಎಂದೆನಿಸಿ ಮನಸ್ಸು ಖಾಲಿಯಾಗಿದೆ!

ಬಹುಶಃ ನನ್ನ ತಾಯಿ ನಮ್ಮ ಮನೆಗೆ ತರಿಸುತ್ತಿದ್ದ ವಾರ ಪತ್ರಿಕೆಗಳಾದ ಸುಧಾ, ತರಂಗ, ಪ್ರಜಾಮತ, ತುಷಾರ, ಮಲ್ಲಿಗೆಯ ಜೊತೆಗೇ ದಿನಪತ್ರಿಕೆಯೊಂದು ಸೇರ್ಪಡೆಯಾಗಿದ್ದೆಂದರೆ ಬಹುಶಃ ಅದು ನಮ್ಮ ಹೆಮ್ಮೆಯ 'ಮೈಸೂರು ಮಿತ್ರ'! ಬಹುಶಃ ನಾನು ದ್ವಿತೀಯ ಪಿಯುಸಿ ಓದುತ್ತಿದ್ದಾಗಿನಿಂದಲೂ 'ಮೈಸೂರು ಮಿತ್ರ' ಓದುವ ಕ್ರಮ, ಕ್ರಮೇಣ ಬಹುಶಃ ಆಯುರ್ವೇದ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ನಮ್ಮ ಮನೆಗೆ ಸೇರ್ಪಡೆಯಾದ ಪ್ರಥಮ ಇಂಗ್ಲೀಷ್ ಪತ್ರಿಕೆಯೆಂದರೆ 'ಸ್ಟಾರ್ ಆಫ್ ಮೈಸೂರು' ಈ ಪತ್ರಿಕೆಯನ್ನು ತರಿಸುತ್ತಾರಂತೆ ಎನ್ನುವುದೇ ಒಂಥರಾ ಹೆಮ್ಮೆಯ ವಿಷಯವಾಗಿತ್ತು ಎಂದರೆ ಅತಿಶಯೋಕ್ತಿಯೇನಲ್ಲ! ಹಾಗಿತ್ತು ಈ ಪತ್ರಿಕೆಯ ಖದರ್ !

ಓದುವುದರ ಜೊತೆಗೇ ಬರೆಯುವ ಹವ್ಯಾಸವಿದ್ದ ನನ್ನಂತಹ ಜನಸಾಮಾನ್ಯರಿಗೂ ಒಂದು ವೇದಿಕೆ ಕಲ್ಪಿಸಿಕೊಟ್ಟಿದ್ದೇ ನಮ್ಮ ಕೆಬಿಜಿ ಸರ್ ಮತ್ತು ಅವರ 'ಮೈಸೂರು ಮಿತ್ರ'!? ನಾನು ನನ್ನ ವೈದ್ಯಕೀಯ ವ್ಯಾಸಂಗ ಮುಗಿಸಿ, 2000ರ ನಂತರ 'ಮೈಸೂರು ಮಿತ್ರ'ನಿಗೆ ಅಂಜಿಕೆಯಿಂದಲೇ ನನ್ನ ಕೈ ಬರಹದಲ್ಲಿಯೇ ವೈದ್ಯಕೀಯ ಲೇಖನಗಳನ್ನು ಕಳಿಸಿದಾಗ ಪ್ರಕಟಿಸಿ, ನನ್ನಲ್ಲಿದ್ದ ಪ್ರತಿಭೆಯನ್ನು ಮೊದಲು ಗುರುತಿಸಿದವರೇ ಕೆಬಿಜಿ ಸರ್.

ಮುಂದೆ ಬರಬರುತ್ತಾ ಸುಮಾರು 2002ರಿಂದ 2006–2007ರವರೆಗೂ ಪ್ರತೀ ಭಾನುವಾರವೂ 'ಮೈಸೂರು ಮಿತ್ರ'ನಲ್ಲಿ ಒಂದು ಚಿಕ್ಕ ಲೇಖನವನ್ನಾದರೂ ಬರೆಯುವ ಅವಕಾಶವನ್ನು ಶ್ರೀಯುತರು ನನಗೆ ಕಲ್ಪಿಸಿಕೊಟ್ಟರು! ಆ ಸಮಯದಲ್ಲಿ ನಾನು ಏನಾದರೂ ತಪ್ಪಾಗಿ ಬರೆದಲ್ಲಿ ನನ್ನನ್ನು ತಮ್ಮ ಎಂದಿನ ಅದೇ ಮೊನಚು ಹಾಸ್ಯಮಿಶ್ರಿತ ನಗೆ ಚಾಟಿಯಿಂದಲೇ ಬೈಯ್ದು ತಿದ್ದಿದವರೂ ಅವರೇ ಎಂದರೆ ತಪ್ಪಾಗಲಾರದು!

ಅವರೆಂದೂ ನನ್ನನ್ನು ಅವರಿಗಿಂತ ಚಿಕ್ಕವಯಸ್ಸಿನವಳೆಂಬ ಉತ್ಪ್ರೇಕ್ಷೆ ಇಲ್ಲದೇ ಮಾತನಾಡಿಸುತ್ತಿದ್ದರು. ಅದೇ ಅವರ ವಿಶಿಷ್ಟ ವ್ಯಕ್ತಿತ್ವವೂ ಹೌದು! ಅವರ ಜೊತೆಯಲ್ಲಿದ್ದವರೊಂದಿಗೆ ಯಾವುದೇ ವಯಸ್ಸು, ಸ್ಥಾನಮಾನ, ಯಾವುದನ್ನೂ ಲೆಕ್ಕಿಸದೇ ವಿಚಾರ ವಿನಿಮಯ ಮಾಡುತ್ತಿದ್ದರು. ಅವರೊಂದಿಗೆ ನಾನು ನಡೆಸಿದ ಹಲವಾರು ಸಂಭಾಷಣೆಗಳು ಬರೀ ಪತ್ರಿಕೋದ್ಯಮ ಅಥವಾ ನಮ್ಮ ಯಾವುದೇ ವೈದ್ಯ ಪದ್ಧತಿಯಂತಹ ರೊಟೀನ್ (routine) ವಿಷಯಗಳಷ್ಟೇ ಅಲ್ಲದೇ ಸಮಾಜದ ಬೇರೆ ಬೇರೆ ವಿಷಯಗಳು, ಸಾಹಿತ್ಯ, ಸಿನಿಮಾ, ಸಂಗೀತ, ಆಧ್ಯಾತ್ಮ, ಇಂದಿನ ಶೈಕ್ಷಣಿಕ ಕ್ಷೇತ್ರ, ನಿತ್ಯ ಜೀವನದ ಸಂಗತಿಗಳು, ರಾಜಕೀಯ ಹೀಗೇ ಎಲ್ಲ ವಿಷಯಗಳನ್ನು ಮುಕ್ತವಾಗಿ ಸಂಭಾಷಿಸುತ್ತ ನಮ್ಮೆಲ್ಲರ ಜ್ಞಾನವನ್ನು ಒರೆಗೆ ಹಚ್ಚುವ ಗುರುವಾಗಿದ್ದರು. ಇಲ್ಲಿ ನಮ್ಮ ನಡುವೆ ಯಾವುದೇ ವೃತ್ತಿ, ವಯಸ್ಸು, ಜ್ಞಾನ, ಸ್ಟೇಟಸ್‌ನ ಪರಿಧಿಯೇ ಇಲ್ಲದೇ ಸಮಾಧಾನಚಿತ್ತರಾಗಿ ಕೇಳುವ, ತಪ್ಪಿದ್ದರೆ ತಿದ್ದುವ ಔದಾರ್ಯತೆ, ಹೊಸ ಹೊಸ ವಿಷಯಗಳನ್ನು ತಿಳಿಯುವ ಕುತೂಹಲವಿದ್ದ ವಿಶೇಷ ವ್ಯಕ್ತಿತ್ವ ಅವರದಾಗಿತ್ತು!

ನನಗೇ ಅವರೊಂದು ಫೋನ್ ಮಾಡಿ ಅವರ ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಲೇಖನದ ಬಗ್ಗೆ ಅವರ ಅನಿಸಿಕೆಯನ್ನು ಕೇಳುವುದೇ ಒಂದು ಖುಷಿಯ ಸಂಗತಿಯಾಗಿತ್ತು! ಚೆನ್ನಾಗಿ ಬರೆದಿದ್ದೀಯಾ, ಇನ್ನು ಸ್ವಲ್ಪ ಈ ರೀತಿಯಾಗಿ ನಮ್ಮಂತಹ common manಗೆ ಅರ್ಥೈಸುವಂತೆ ಬರೆಯಬಹುದಿತ್ತು ಎಂದು ತಮ್ಮ ಜೀವನಾನುಭವದ ಮೂಲಕ ನಮ್ಮನ್ನು ತಿದ್ದುತ್ತಿದ್ದರು! ಇತ್ತೀಚೆಗೆ ಇದೇ ಮಾರ್ಚ್ 26ರಂದು ಬಿಡುಗಡೆಯಾದ ನನ್ನ ಮತ್ತು ಮೈಸೂರಿನ ಹಿರಿಯ ವಕೀಲರಾದ ಶ್ರೀ ಓ.ಶಾಮ್‌ಭಟ್ ರವರ 'ಅಗಸ್ತ್ಯ ದರ್ಶನ' ಮತ್ತು 'Agastya The Unifier' ಗ್ರಂಥಗಳ ಪರಾಮರ್ಶೆ, ಬಿಡುಗಡೆಗೆ ಅವರು ನಮ್ಮೊಂದಿಗೆ ಸ್ಪಂದಿಸಿದ ರೀತಿಯನ್ನು ನಾನೆಂದೂ ಜೀವಮಾನದಲ್ಲಿ ಮರೆಯಲಾರೆ! ನಮ್ಮ ಪುಸ್ತಕದ ಪ್ರತೀ ಅಧ್ಯಾಯದ ಬಗ್ಗೆಯೂ ಟಿಪ್ಪಣಿ ಮಾಡಿಕೊಂಡು ಅವರು ಆಯಾ ವಿಷಯಗಳ ಬಗ್ಗೆ ನಮ್ಮಲ್ಲಿ ಚರ್ಚಿಸಿ, ವಿಷಯಗಳ ಬಗ್ಗೆ ಖಚಿತಪಡಿಸಿಕೊಳ್ಳಲು ತೋರಿಸುತ್ತಿದ್ದ ಆಸಕ್ತಿ ಮತ್ತು ನಮ್ಮಿಬ್ಬರ ನಡುವಿನ ಸಂಭಾಷಣೆಗಳು ಬಹುಶಃ ನನ್ನ ವೃತ್ತಿ ಮತ್ತು ಬರವಣಿಗೆಗೆ ಯಾರೂ ನೀಡಿರದ ಮಾರ್ಗದರ್ಶನವೆಂದರೆ ತಪ್ಪಾಗಲಾರದು! ಕೊನೆಗೆ ನಮ್ಮ ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ವೇದಿಕೆಯಲ್ಲಿ ನಮ್ಮ ಗುರು ಅಗಸ್ತ್ಯರಂತಹ ಋಷಿ ಮುನಿಗಳ ಬಗ್ಗೆ, ಭಾರತೀಯ ಸಂಸ್ಕೃತಿಯ ಬಗ್ಗೆ ಹೇಳಿದ ವಿಚಾರಗಳು, ಹಿತನುಡಿಗಳು ಅವರ ಅಗಾಧ ಪಾಂಡಿತ್ಯಕ್ಕೆ ಸಾಕ್ಷಿಯಾಗಿ ನಮ್ಮನ್ನಷ್ಟೇ ಅಲ್ಲದೇ ನೆರೆದ ಸಭಿಕರಲ್ಲಿಯೂ ಹಾಗೆಯೇ ವೇದಿಕೆಯ ಮೇಲಿದ್ದ ಇತರ ಗಣ್ಯರಲ್ಲಿಯೂ ಸಂಚಲನ ಮೂಡಿಸಿತೆಂದರೆ ತಪ್ಪಾಗಲಾರದು!

ನನ್ನ ಚಿಕ್ಕ ವಯಸ್ಸಿನಿಂದಲೂ, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಓದುತ್ತಾ ಅದರಲ್ಲಿ ಬರೆಯುತ್ತ, ನನ್ನಲ್ಲಿಯ ಕ್ರಿಯಾಶೀಲತೆಗೆ ಒಂದು ವೇದಿಕೆಯನ್ನೂ ತಂದುಕೊಟ್ಟವರು KBG Sir! ನನ್ನಂತಹ ಹಲವಾರು ಜನರಿಗೆ ತಮ್ಮ ಪತ್ರಿಕೆಯಲ್ಲಿ ಬರೆಯಲು ಅವಕಾಶ ಕೊಟ್ಟು ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟ ವಿಶಾಲ ಮನಸ್ಸಿನ ಅವರು ನಮ್ಮ ಈ ಮೈಸೂರಿನಲ್ಲೊಂದು ಸಾರಸ್ವತ ಲೋಕವನ್ನೇ ಹುಟ್ಟು ಹಾಕಿದರೆಂದರೆ ತಪ್ಪೇನಿಲ್ಲ!

ಮೈಸೂರಿನಲ್ಲಿದ್ದ Intellectual cream of people ಅಂತ ಏನು ಹೇಳಬಹುದು ಅಂತಹವರನ್ನೆಲ್ಲ ಮೈಸೂರಿನ ಆತ್ಮವನ್ನಾಗಿ ಕ್ರಿಯೇಟ್ ಮಾಡಿದರು. ಅವರು ಎಂತಹ ಅದ್ಭುತವಾದ visionary ಅಂದರೆ, ತಮ್ಮದೇ dignityಯನ್ನು ಕಾಪಾಡಿಕೊಂಡು ಮೈಸೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಜನತೆಗೆ, ಕರ್ನಾಟಕಕ್ಕೆ ಅಂತೆಯೇ ಇಡೀ ದೇಶಕ್ಕೇ ಮಾದರಿಯಂತೆ ತಮ್ಮ ಪತ್ರಿಕೋದ್ಯಮದ ಪ್ರಯಾಣದಲ್ಲಿ 'ಮೈಸೂರು ಮಿತ್ರ' ಮತ್ತು 'Star of Mysore' ಅನ್ನು role model ಆಗಿ ನಿಲ್ಲಿಸಿದರೆಂದರೆ ತಪ್ಪೇನಿಲ್ಲ!

ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ಇಡೀ ಕರ್ನಾಟಕಕ್ಕೆ, ದೇಶಕ್ಕೆ, ಜೀವದಾಯಿನಿಯಾದ ಕಾವೇರಿ ನದಿಯಂತೆ ನಮ್ಮ ವೀರ ಕೊಡವ ಕೆಬಿಜಿಯವರು ಜೀವದಾಯಿನಿಯಂತೆ ತನ್ನದೇ ಪತ್ರಿಕೋದ್ಯಮ ಸಂಸ್ಕೃತಿಯನ್ನು ಉಗಮಿಸಿ, ಪ್ರಚಾರಪಡಿಸಿ, ಸಾಧಿಸಿ ನಮ್ಮ ನಿಮ್ಮೆಲ್ಲರ ದೈನಂದಿನ ಬದುಕಿನಲ್ಲಿ ಅವಿನಾಭಾವದಿಂದ ಹಾಸು ಹೊಕ್ಕಿದ್ದಾರಲ್ಲವೇ?

He was the Conscious keeper of the real Mysore!
It's our KBG SIR

ನಮಸ್ತೇ



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,
ಮೊ: 98450 48051

ಸಕಾಲಿಕ

ಪಂಚಸೂತ್ರ ಪಾಲಿಸಿದರೆ ಕಾಂಗ್ರೆಸ್ ಬೀಸೋ ದೊಣ್ಣೆಯಿಂದ ಪಾರಾಗಬಹುದೇನೋಪ್ಪಾ...



ಮಲ್ಲಿಕಾರ್ಜುನ ಖರ್ಗೆ



ಸಿದ್ದರಾಮಯ್ಯ



ಡಿ.ಕೆ.ಶಿವಕುಮಾರ್



ಎಂ.ಬಿ. ಪಾಟೀಲ್



ಯು.ಟಿ. ಖಾದರ್

> **"ರಾಜ್ಯ ಕಾಂಗ್ರೆಸ್ ಸರ್ಕಾರದ ಈಗಿನ ಸ್ಥಿತಿ ಕಮಾಂಡೇ ಇಲ್ಲದ ಹಲ್ಲು ಕಿತ್ತ ಹಾವಿನಂತಿರುವ ಹೈಕಮಾಂಡ್ ಆಗಿದೆ. ಜಟಿಲ ಸಮಸ್ಯೆ ಬಗೆಹರಿಸಲು ಅವರಿಗೆ ದಾರಿಯೇ ಕಾಣುತ್ತಿಲ್ಲ. ಹೀಗಾಗಿ ತೆರೆ–ಮರೆಯಲ್ಲಿ ಕುಳಿತು ಯೋಚನಾಕ್ರಾಂತರಾಗಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಪಾಲಿಗೆ ನುಂಗಲೂ ಆಗದೇ ಉಗಳಲೂ ಆಗದ ಬಿಸಿ ತುಪ್ಪವಾಗಿದ್ದಾರೆ.**

ಈಗಿರುವ ರಾಜಕೀಯ ಜಂಜಾಟದಲ್ಲಿ ಕಾಂಗ್ರೆಸ್ ಸರ್ಕಾರ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳಬೇಕಾದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ–ಮುಖ್ಯಮಂತ್ರಿ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ–ಪ್ರದೇಶ ಕಾಂಗ್ರೆಸ್(ಕೆಪಿಸಿಸಿ) ಅಧ್ಯಕ್ಷ; ಹಾಗೆಯೇ ಹಾಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಎಂ.ಬಿ.ಪಾಟೀಲ್–ಉಪ ಮುಖ್ಯಮಂತ್ರಿಗಳು ಮತ್ತು ಯು.ಟಿ.ಖಾದರ್ ಸ್ಪೀಕರ್ ಆಗಿಯೇ ಮುಂದುವರೆದರೆ ಮಾತ್ರ ಇವರ ಸಾಮಾಜಿಕ ನ್ಯಾಯ ಪರಿಕಲ್ಪನೆ ಸಾಕ್ಷಾತ್ಕಾರವಾಗುವ ಸಾಧ್ಯತೆ ಇದೆ.

ಈ ಪಂಚ ಸೂತ್ರ ಜಾರಿಗೆ ಬಂದು, ಈ ಐವರು ಮುಖಂಡರೂ ಪಂಚ ಪಾಂಡವರಂತೆ ಒಗ್ಗಟ್ಟು, ಪರಸ್ಪರ ನಂಬಿಕೆ, ದಕ್ಷತೆ ಹಾಗೂ ಪ್ರಾಮಾಣಿಕ ಆಡಳಿತ ನೀಡಿದರೆ ಕಾಂಗ್ರೆಸ್‌ಗೆ ಉಜ್ವಲ ಭವಿಷ್ಯವಿದೆ.

ರಾಜ್ಯ ಸರ್ಕಾರದಲ್ಲಿ ಹೆಚ್ಚು ಕಮ್ಮಿ ಹಲವಾರು ಪ್ರಮುಖ ಖಾತೆಗಳನ್ನು ನಿರ್ವಹಿಸಿರುವ ಹೆಗ್ಗಳಿಕೆ ಮಲ್ಲಿಕಾರ್ಜುನ ಖರ್ಗೆ ಅವರದ್ದು. ಜತೆಗೆ ಸಂಸತ್ತಿನ ಎರಡೂ ಸದನಗಳ ವಿರೋಧ ಪಕ್ಷದ ನಾಯಕರಾಗಿ, ಎಐಸಿಸಿ ಅಧ್ಯಕ್ಷರಾಗಿ ಅವರ ಕಾರ್ಯದಕ್ಷತೆ, ಸಮಚಿತ್ತತೆ ಜನ ಮೆಚ್ಚುವಂತದ್ದು. ಅಲ್ಲದೆ, ಇಷ್ಟು ಸುದೀರ್ಘ ಕಾಲ ಒಂದಲ್ಲಾ ಒಂದು ಅಧಿಕಾರದಲ್ಲಿದ್ದರೂ 'ಕಪ್ಪು ಚುಕ್ಕೆ' ಇಲ್ಲದ ಸರಳ–ಸಜ್ಜನ ವ್ಯಕ್ತಿಯಾಗಿ ಜನಮನ ಗೆದ್ದಿದ್ದಾರೆ. ರಾಜ್ಯ ಕಾಂಗ್ರೆಸ್‌ನ ಪ್ರಸ್ತುತ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುವ ಧೈರ್ಯ ಅವರಲ್ಲಿ ಎದ್ದು ಕಾಣುತ್ತಿದೆ.

ಅಪಾರ ಅನುಭವ ಇರುವ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿಗಳಾಗಿ, ಅಷ್ಟೇ ಸುದೀರ್ಘ ರಾಜಕೀಯ ಸ್ಥಿತಿಗತಿ ಬಲ್ಲ ಸಿದ್ದರಾಮಯ್ಯ ಕೆಪಿಸಿಸಿ ಅಧ್ಯಕ್ಷರಾಗಿ, ಉಳಿದ ಡಿ.ಕೆ.ಶಿವಕುಮಾರ್ ಹಾಗೂ ಎಂ.ಬಿ. ಪಾಟೀಲ್, ಡಿಸಿಎಂಗಳು ಹಾಗೂ ಯು.ಟಿ.ಖಾದರ್ ಸ್ಪೀಕರ್ ಆಗಿ ಹೆಗಲು ಕೊಟ್ಟು ಪಕ್ಷದ ರಥ ಎಳೆದರೆ ಈಗಿನ ಜಟಿಲ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾ ಗುತ್ತದೆ. ಅಲ್ಪಸಂಖ್ಯಾತ ಸಮುದಾಯದ ಹಾಲಿ ಸ್ಪೀಕರ್ ಯು.ಟಿ. ಖಾದರ್ ಕೂಡ ಸಜ್ಜನ. ಹೀಗೆ ಐವರು ಪಕ್ಷದ ಆಶಯಕ್ಕೆ ಭಂಗ ಬಾರದಂತೆ ನಡೆದು ಕೊಂಡರೆ ಜನರಿಗೆ ನೆಮ್ಮದಿ. ಒಳ ಜಗಳ ಹಾಗೂ ಇತ್ತೀಚೆಗೆ ಅಧಿಕಾರಕ್ಕಾಗಿ ನಡೆಯುತ್ತಿರುವ ಕಿತ್ತಾಟಗಳು ಈಗ ಪಕ್ಷದ ಭವಿಷ್ಯಕ್ಕೆ ಕಂಟಕ ಪ್ರಾಯವಾಗಿವೆ. ಕೇವಲ ಶಾಸಕರ ಅಪಾರ ಬೆಂಬಲ ಇದೆಯೆಂದು ಬೀಗುತ್ತ ಕುಳಿತರೆ ಗಂಡಾಂತರದ ಸುಳಿಗೆ ಸಿಕ್ಕಿ ಮುಳುಗುತ್ತಿರುವ ಹಡಗಿನ ಸ್ಥಿತಿ ಎದುರಾಗುವುದು ನಿಶ್ಚಿತ.

ಖರ್ಗೆ ಸಿಎಂ ಆದರೆ ದಲಿತರ ಬಹು ವರ್ಷದ ಕನಸು ನನಸಾಗುತ್ತದೆ. ಅಲ್ಲದೆ ಖರ್ಗೆ ಹಿರಿತನಕ್ಕೆ ತಕ್ಕ ಫಲವೂ ಸಿಗುತ್ತದೆ. ಕೆಲ ಜನ ಹಾಗೂ ಮುಖ್ಯಮಂತ್ರಿಗಾದಿ ಆಕಾಂಕ್ಷಿಗಳ ಆಸೆಗೆ ಭಂಗ ಬರಬಹುದು. ಅಲ್ಲದೆ ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿ ಆಟಕ್ಕೆ ಅಂಪೈರ್ ಆಗಿ ಬಂದವರೇ ಮುಖ್ಯಮಂತ್ರಿ ಆದರೆಂಬ ಟೀಕೆಗಳೂ ಬರಬಹುದು. ಆದರೆ ಈಗಿನ ಸ್ಥಿತಿಯಲ್ಲಿ ಸರ್ಕಾರ ಹಾಗೂ ಪಕ್ಷದ ಅಳಿವು–ಉಳಿವು ಮುಖ್ಯ ಅಲ್ಲವೆ?

ಡಿ.ಕೆ.ಶಿವಕುಮಾರ್ ಒಮ್ಮೆ ರಾಜ್ಯದ ಮುಖ್ಯಮಂತ್ರಿ ಆಗಲಿ ಎಂಬುದು ರಾಜ್ಯದ ಬಹುಸಂಖ್ಯಾ ಸ್ವಾಮೀಜಿಗಳ, ಜನರ ಅಭಿಪ್ರಾಯ. ಅವರಿಗೆ ಹಣಬಲ, ತೋಳ್ಬಲ, ಜಾತಿ ಬೆಂಬಲ, ಛಲದ ಜೊತೆಗೆ ಶಿವನ ಹಾಗೂ ಅಜ್ಜಯ್ಯನ ಆಶೀರ್ವಾದ ಎಲ್ಲವೂ ಇದೆ. ಆದರೆ, ಅದೆಲ್ಲಕ್ಕಿಂತ ಮಿಗಿಲಾಗಿ ಅಡ್ಡಗಾಲು ಹಾಕುವವರ ಸಂಖ್ಯೆಯೇ ಹೆಚ್ಚಿದೆ. ಅದರಂತೆ ಉತ್ತರ ಕರ್ನಾಟಕ ಭಾಗದಲ್ಲಿ ಎಂ.ಬಿ. ಪಾಟೀಲ್‌ಗೆ ಜನಪ್ರಿಯತೆ, ದಕ್ಷತೆ ಜತೆಗೆ ಹಣ ಮತ್ತು ಜಾತಿ ಬೆಂಬಲವಿದೆ. ಹೀಗಾಗಿ ಇವರಿಬ್ಬರ ಭವಿಷ್ಯ ಭವ್ಯವಾದಂತಿದೆ.

ಈ ನಡುವೆ ಕೆಪಿಸಿಸಿಯ ಮಾಜಿ ಅಧ್ಯಕ್ಷರು, ಮಾಜಿ ಡಿಸಿಎಂ ಹಾಗೂ ಹಾಲಿ ಹೋಮ್ ಮಿನಿಸ್ಟರ್ ಆಗಿರುವ ಡಾ.ಜಿ.ಪರ ಮೇಶ್ವರ್‌ಗೆ ಅವರು ಮುಖ್ಯಮಂತ್ರಿ ಆಗುವ ಆಸೆ ಅನಂತ ದೂರದಲ್ಲಿದೆ. ಅಲ್ಲದೆ, ಅವರು ಸರ್ಕಾರ ಹಾಗೂ ಪಕ್ಷದಲ್ಲಿ ಆಟ ಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಈಗಿನ ಸ್ಥಿತಿ ಕಮಾಂಡೇ ಇಲ್ಲದ ಹಲ್ಲು ಕಿತ್ತ ಹಾವಿನಂತಿರುವ ಹೈಕಮಾಂಡ್ ಆಗಿದೆ. ಜಟಿಲ ಸಮಸ್ಯೆ ಬಗೆ ಹರಿಸಲು ಅವರಿಗೆ ದಾರಿಯೇ ಕಾಣುತ್ತಿಲ್ಲ. ಹೀಗಾಗಿ ತೆರೆಮರೆಯಲ್ಲಿ ಕುಳಿತು ಯೋಚನಾಕ್ರಾಂತರಾಗಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಪಾಲಿಗೆ ನುಂಗಲೂ ಆಗದೇ ಉಗಳಲೂ ಆಗದ ಬಿಸಿ ತುಪ್ಪವಾಗಿದ್ದಾರೆ.

ರಾಜ್ಯ ಕಾಂಗ್ರೆಸ್‌ನ ಅಳಿವು–ಉಳಿವೂ ತ್ರಿಮೂರ್ತಿಗಳಾದ ತಾಯಿ ಮಕ್ಕಳ 'ಕೈ'ಯಲ್ಲಿದೆ. ಪಂಚಸೂತ್ರ ಹೈಕಮಾಂಡ್‌ಗೆ ಒಪ್ಪಿಗೆ ಆಗದಿದ್ದರೆ ಒಳ್ಳೆ ಪರಿಹಾರ ಮಾರ್ಗ ತೋರಿಸಲಿ. ರಾಜ್ಯದ ಜನತೆ ನವಂಬರ್ ಕ್ರಾಂತಿಗಾಗಿ ಕಾಯದೆ ವಿಧಿ ಇಲ್ಲ. ಒಟ್ಟಾರೆ ದಿನೇದಿನೆ ರಾಜ್ಯದ ಅಭಿವೃದ್ಧಿ ಮಕಾಡೆ ಮಲಗಿಕೊಂಡಿದೆ. ಅಧೋಗತಿ ಹಾಗೂ ಅರಾಜಕತೆಯತ್ತ ರಾಜ್ಯದ ಸ್ಥಿತಿ ಸಾಗುತ್ತಿದೆ. ಬರ–ನೆರೆ–ಬೆಲೆ ಏರಿಕೆ ಇವುಗಳ ಬಗ್ಗೆ ಕಿಂಚಿತ್ತೂ ಚಿಂತೆ ಇಲ್ಲದ ಭಂಡ ಸರ್ಕಾರ ಎನ್ನದೆ ವಿಧಿ ಇಲ್ಲ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶುಕ್ರವಾರ 18 ಜುಲೈ 2025

ಮೈಸೂರು ಭಾಗದ ಒಟ್ಟು ಸರಕು ಸಾಗಣೆಯಲ್ಲಿ

ಶೇ.4.4ರಷ್ಟು ಮಾತ್ರ ರೈಲ್ವೆಯಲ್ಲಿ ಸಾಗಾಣಿಕೆ

●ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಮುದಿತ್ ಮಿತ್ತಲ್ ಮಾಹಿತಿ ●ರೈಲು ಆಧಾರಿತ ಸರಕು ಸಾಗಣೆ, ಪಾರ್ಸಲ್ ಸೇವೆ ಕುರಿತ ಕಾರ್ಯಕ್ರಮ

ಮೈಸೂರು,ಜು.17(ಪಿಎಂ)– ಮೈಸೂರು ಭಾಗದ ಒಟ್ಟು ಸರಕು ಸಾಗಣೆಯಲ್ಲಿ ಕೇವಲ ಶೇ.4.4ರಷ್ಟು ಮಾತ್ರ ಪ್ರಸ್ತುತ ರೈಲ್ವೆ ಮೂಲಕ ಸಾಗಾಣಿಕೆಯಾಗುತ್ತಿದೆ ಎಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರ್‌ಎಂ) ಮುದಿತ್ ಮಿತ್ತಲ್ ಹೇಳಿದರು.

ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಂಸಿಸಿಐ) ಸಭಾಂಗಣದಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗ ಮತ್ತು ಎಂಸಿಸಿಐ ಜಂಟಿ ಆಶ್ರಯದಲ್ಲಿ 'ರೈಲು ಆಧಾರಿತ ಸರಕು ಸಾಗಣೆ, ಪಾರ್ಸಲ್ ಸೇವೆಗಳು' ಕುರಿತು ಗುರುವಾರ ಹಮ್ಮಿಕೊಂಡಿದ್ದ ವಾಣಿಜ್ಯೋದ್ಯಮಿಗಳು ಹಾಗೂ ರಫ್ತುದಾರರ ಜೊತೆಗಿನ ಸಂವಾದ ಸಭೆಯಲ್ಲಿ ಅವರು ಮಾತನಾಡಿದರು.

ಸರಕುಗಳನ್ನು ರಸ್ತೆ ಮೂಲಕ ಸಾಗಾಣಿಕೆ ಮಾಡುವುದಕ್ಕೆ ಹೋಲಿಸಿದರೆ ರೈಲ್ವೆಯಲ್ಲಿ ವೆಚ್ಚ ಕಡಿಮೆಯಾಗಲಿದೆ. ಹಾಗಾಗಿ ರೈಲ್ವೆ ಬಳಸಿಕೊಂಡರೆ, ವಾಣಿಜ್ಯೋದ್ಯಮಿಗಳು ಹಣ ಉಳಿಸಬಹುದು. ಸರಕು ಸಾಗಣೆ ಸಂಬಂಧವೂ ರೈಲ್ವೆಯಲ್ಲಿ ತರಬೇತಿ ಪಡೆದ ಮಾನವ ಸಂಪನ್ಮೂಲ ಇದ್ದು, ಸರಕು ಸಾಗಣಿಕೆಗೆ ಪೂರಕವಾಗಿ ವಿವಿಧ ಪ್ರಕಾರದ ವ್ಯಾಗನ್‌ಗಳ ಸೌಲಭ್ಯ ಕೂಡ ನಮ್ಮಲ್ಲಿ ಈಗ ಲಭ್ಯವಿದೆ. ನಿಮ್ಮ ಆಯ್ಕೆಗೆ ಅನುಗುಣವಾಗಿ ವ್ಯಾಗನ್‌ಗಳು ಲಭ್ಯವಾಗಲಿವೆ ಎಂದು ತಿಳಿಸಿದರು.

ಈಗ ನಮ್ಮಲ್ಲಿ ಲೋಡ್ ಮಾಡಲು ಬಳಸುತ್ತಿರುವ ಆಟೋಗಳು, ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳ ಜೊತೆಗೆ ವಿಶೇಷ ರೀತಿಯಲ್ಲಿ ವ್ಯಾಗನ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಹಾಗಾಗಿ ನೀವು ರೈಲ್ವೆ ಮೂಲಕ ಸರಕು ಸಾಗಿಸಲು ಮುಂದೆ ಬಂದರೆ ಉತ್ತಮ ಸೇವೆ ಕಲ್ಪಿಸಲು ನಾವು ಬದ್ಧವಾಗಿದ್ದೇವೆ ಎಂದು ಭರವಸೆ ನೀಡಿದರು.



ಮೈಸೂರಿನ ಎಂಸಿಸಿಐ ಸಭಾಂಗಣದಲ್ಲಿ ಗುರುವಾರ ನಡೆದ ಸಂವಾದದಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಮುದಿತ್ ಮಿತ್ತಲ್ (ಎಡದಿಂದ 3ನೇಯವರು) ಮಾತನಾಡಿದರು.

ಸರಕು ಸಾಗಾಣಿಕೆ ಸೌಲಭ್ಯ ಪಡೆಯಲು ಉದ್ಯಮಿಗಳು ಆನ್‌ಲೈನ್ ಮೂಲಕವೂ ಬುಕ್ ಮಾಡಬಹುದು. ಅದಕ್ಕಾಗಿಯೇ ಸಾಫ್ಟ್‌ವೇರ್ ಸಹ ಅಭಿವೃದ್ಧಿಪಡಿಸಲಾಗಿದೆ. ಆನ್‌ಲೈನ್ ಸೌಲಭ್ಯ ಬಳಸಿಕೊಂಡು ನೀವಿದ್ದಲ್ಲಿಯೇ ಬುಕ್ ಮಾಡಬಹುದು. ನಿಮಗೆ ಅನುಕೂಲ ಕಲ್ಪಿಸುವ ಮೂಲಕ ರೈಲ್ವೆಗೂ ವಹಿವಾಟು ದೊರೆಯಲು ಸಾಧ್ಯವಿರುವ ಎಲ್ಲದನ್ನೂ ಮಾಡಲು ಸಿದ್ಧವಿದ್ದೇವೆ. ಈ ನಿಟ್ಟಿನಲ್ಲಿ ಉದ್ಯಮಿಗಳ ಸಲಹೆಗಳಿದ್ದರೆ ಅವನ್ನು ಸ್ವೀಕರಿಸಲೂ ನಾವು ಸಿದ್ಧರಿದ್ದೇವೆ. ಎಲ್ಲರ ಸಹಕಾರದಿಂದ ಮೈಸೂರು ಭಾಗದಲ್ಲಿ ಈ ಸೇವೆ ಬಳಸುವವರ ಸಂಖ್ಯೆ ಹೆಚ್ಚಿದರೆ, ಇನ್ನಷ್ಟು ಪ್ರಗತಿ ಸಾಧಿಸಲು ಸಾಧ್ಯ ಎಂದರು.

ಸಣ್ಣ ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುಬ್ರಹ್ಮಣ್ಯ ಮಾತನಾಡಿ, ಮೈಸೂರು ಮತ್ತು ಬೆಂಗಳೂರು ನಡುವೆ ಸಂಚರಿಸಲು ಫಸ್ಟ್ ಕ್ಲಾಸ್ ಸೀಸನ್ ಟಿಕೆಟ್ ಕೊಡಲಾಗುತ್ತಿತ್ತು. ಆದರೆ ಅದನ್ನು ಸ್ಥಗಿತಗೊಳಿಸಲಾಗಿದೆ. ಈ ಸೌಲಭ್ಯ ಇಂದಿಗೂ ಬಾಂಬೆ ಮತ್ತು ಪುಣೆ ನಡುವೆ ಸಂಚರಿಸಲು ಲಭ್ಯವಿದೆ. ಇದನ್ನು ಪರಿಶೀಲಿಸಬೇಕು. ಜೊತೆಗೆ ಕಾರ್ಮಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಮೇಟಗಳ್ಳಿ ಬಳಿ ನಿಲುಗಡೆ ನೀಡಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಆರ್‌ಎಂ ಅವರು, ಸೀಸನ್ ಟಿಕೆಟ್ ಇಲ್ಲಿ ಸ್ಥಗಿತಗೊಳಿಸಿರುವುದು ಕೇಂದ್ರ ಸರ್ಕಾರ ಕ್ರಮವಾಗಿದೆ. ನಿಲ್ದಾಣವನ್ನು ಬಿಟ್ಟ ರೈಲನ್ನು ಒಂದು ನಿಮಿಷ ನಿಲ್ಲಿಸಿದರೆ, ಹದಿನೈದು ನಿಮಿಷ ನಷ್ಟವಾಗುತ್ತದೆ. ಹೀಗಾಗಿ ಅಲ್ಲಿ ನಿಲ್ಲಿಸುವುದು ಅಸಾಧ್ಯ. ಇದನ್ನು ಪ್ರಯಾಣಿಕರೂ ಅರ್ಥ ಮಾಡಿಕೊಳ್ಳಬೇಕು ಎಂದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಮಂಗಳೂರು ಕಡೆಗೆ ಮೈಸೂರಿನಿಂದ ಪ್ರಯಾಣಿಸಲು ಹೆಚ್ಚುವರಿ ರೈಲುಗಳನ್ನು ನಿಯೋಜಿಸಬೇಕು. ಜೊತೆಗೆ ಮೈಸೂರು ರೈಲ್ವೆ ನಿಲ್ದಾಣದಲ್ಲಿ ವಾಹನ ಪಾರ್ಕಿಂಗ್ ಸಮಸ್ಯೆ ಇದ್ದು, ಇದನ್ನು ನಿವಾರಿಸಬೇಕು. ಅಲ್ಲದೆ, ಪಾರ್ಕಿಂಗ್ ಸಂಬಂಧ ಹೆಚ್ಚುವರಿ ಶುಲ್ಕ ಪಡೆಯಲಾಗುತ್ತಿದೆ. ಈ ಸಂಬಂಧ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಎಂಆರ್, ಮಂಗಳೂರು ಭಾಗದಲ್ಲಿ ಘಟ್ಟವಾದ ಭೂ ಪ್ರದೇಶವಿರುವ ಕಾರಣ ಹೆಚ್ಚುವರಿ ರೈಲ್ವೆ ಸೇವೆ ಕಲ್ಪಿಸುವುದು ಕಷ್ಟಸಾಧ್ಯ ಎಂದು ತಿಳಿಸಿದರು. ಪಾರ್ಕಿಂಗ್ ಶುಲ್ಕದ ಕುರಿತು ಮಾತನಾಡಿದ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ, ಶುಲ್ಕದ ಬೋರ್ಡ್ ಸಹ ಸ್ಥಳದಲ್ಲಿ ಅಳವಡಿಸಿದ್ದು, ಆ ಪ್ರಕಾರವಾಗಿ ಶುಲ್ಕ ಪಡೆಯದೇ ಇದ್ದರೆ ದೂರು ನೀಡಿದರೆ ಕ್ರಮ ವಹಿಸುತ್ತೇವೆ. ಕೇವಲ ಒಂದು ದೂರವಾಣಿ ಕರೆ ಮಾಡಿ, ಕೂಡಲೇ ಕ್ರಮ ವಹಿಸುತ್ತೇವೆ ಎಂದು ಹೇಳಿದರು.

ದೇವರಾಜ ಅರಸು ರಸ್ತೆಯ ವ್ಯಾಪಾರಸ್ಥರ ಸಂಘದ ಅಬ್ದುಲ್ ಖಾದರ್ ಮಾತನಾಡಿ, ಕೊಲ್ಕತಾ ಭಾಗಕ್ಕೆ ಮೈಸೂರಿನಿಂದ ವಾರಕ್ಕೆ ಒಂದು ಬಾರಿ ಮಾತ್ರ ರೈಲು ತೆರಳುತ್ತದೆ. ಅದರ ಸಂಖ್ಯೆ ಹೆಚ್ಚಿಸಿ ಹಾಗೂ ನಮ್ಮ ಸರಕುಗಳು ಸುರಕ್ಷಿತವೇ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಆರ್‌ಎಂ, ಬೇಡಿಕೆ ಕಡಿಮೆ ಇರುವ ಕಾರಣ ಹೆಚ್ಚು ರೈಲುಗಳನ್ನು ಈ ಮಾರ್ಗಕ್ಕೆ ನಿಯೋಜಿಸಿಲ್ಲ. ಪ್ರತಿನಿತ್ಯ ಸೇವೆ ಅಗತ್ಯ ಸಂಬಂಧ ಬೇಡಿಕೆ ಬಂದಲ್ಲಿ ಬೆಂಗಳೂರು ವಿಭಾಗದೊಂದಿಗೆ ಸಂಪರ್ಕ ಸಾಧಿಸಿ ವ್ಯವಸ್ಥೆ ಮಾಡಲಾಗುವುದು. ಸರಕುಗಳ ಮಾಹಿತಿ ಪಡೆಯಲು ಪಾರ್ಸಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಪಿಎಂಎ) ಇದೆ ಎಂದು ಮಾಹಿತಿ ನೀಡಿದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹಿರಿಯ ವಿಭಾಗೀಯ ಅಪರೇಷನ್ ವ್ಯವಸ್ಥಾಪಕಿ ಹರಿತಾ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಉಪಾಧ್ಯಕ್ಷ ಆರ್.ಆನಂದ್, ಕಾರ್ಯದರ್ಶಿ ಎ.ಕೆ.ಶಿವಾಜಿ ರಾವ್, ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಕಾರ್ಯಕಾರಿ ಸಮಿತಿ ಸದಸ್ಯ ಎಂ.ಸಿ.ಬನ್ಸಾಲಿ ಹಾಗೂ ರಫ್ತುದಾರರು, ಉದ್ಯಮಿಗಳು, ಎಂಸಿಸಿಐ ಅಧೀನದ ಸಂಘಟನೆಗಳ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಶಿಬಿರದ ಉದ್ಘಾಟನೆ

ಮೈಸೂರು,ಜು.17(ಪಿಎಂ)– ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಐಎಎಸ್, ಕೆಎಎಸ್ ಮತ್ತು ಇತರ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಏರ್ಪಡಿಸಿರುವ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವನ್ನು ಜು.18ರಂದು ಆಯೋಜಿಸಲಾಗಿದೆ.

ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಅಂದು ಸಂಜೆ 6ಕ್ಕೆ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಉದ್ಘಾಟಿಸುವರು. 2024ನೇ ಸಾಲಿನಲ್ಲಿ ಐಎಎಸ್ ಪರೀಕ್ಷೆಯಲ್ಲಿ ಆಯ್ಕೆಯಾದ ಎ.ಸಿ.ಪ್ರೀತಿ ಶಿಬಿರಾರ್ಥಿಗಳಿಗೆ ಪರೀಕ್ಷಾ ಸಿದ್ಧತೆ ಕುರಿತು ಮಾರ್ಗದರ್ಶನ ನೀಡುವರು.

ಹಿರಿಯ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಹೆಚ್.ಎಂ.ರಾಜಶೇಖರ್ ಶುಭಹಾರೈಸುವರು. ಅಖಿಲ ಭಾರತ ಸಹಕಾರ ಮಹಾಮಂಡಲದ ನಿರ್ದೇಶಕ ವೈ.ಎನ್.ಶಂಕರೇಗೌಡ ಅಧ್ಯಕ್ಷತೆ ವಹಿಸುವರು. ಆಸಕ್ತರು ಪ್ರವೇಶಾತಿ ಪಡೆಯಲು ಅವಕಾಶವಿದೆ. ವಿವರಗಳಿಗೆ ಮೊ.ಸಂ. 9448117455, 8296788251 ಅನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಡುವಾರಹಳ್ಳಿಯಲ್ಲಿ ಅದ್ಧೂರಿ ಚಾಮುಂಡೇಶ್ವರಿ ಉತ್ಸವ



ಮೈಸೂರಿನ ಪಡುವಾರಹಳ್ಳಿಯಲ್ಲಿ ಚಾಮುಂಡೇಶ್ವರಿ ಉತ್ಸವಮೂರ್ತಿ ಮೆರವಣಿಗೆ ಅದ್ಧೂರಿಯಾಗಿ ನೆರವೇರಿತು

ಮೈಸೂರು ಜು.17(ವಿವಿಹೆಚ್)– ನಾಡ ಅಧಿದೇವತೆ ಶ್ರೀಚಾಮುಂಡೇಶ್ವರಿ ದೇವಿಯ ವರ್ಧಂತಿ ಉತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಪಡುವಾರಹಳ್ಳಿಯಲ್ಲಿ ಚಾಮುಂಡೇಶ್ವರಿ ಉತ್ಸವಮೂರ್ತಿ ಮೆರವಣಿಗೆ ಅದ್ಧೂರಿಯಾಗಿ ನೆರವೇರಿತು. ತಾಯಿಯ ಉತ್ಸವ ಮೂರ್ತಿಗೆ ವಿವಿಧ ಬಗೆಯ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ದೇವಿಯ ದರ್ಶನ ಪಡೆದ ಅಪಾರ ಭಕ್ತ ಸಮೂಹ ಪುನೀತವಾಯಿತು.

ಜಾನಪದ ಕಲಾತಂಡಗಳಾದ ವೀರಗಾಸೆ, ಡೋಲು ವಾದ್ಯ, ಬ್ಯಾಂಡ್‌ಸೆಟ್, ಕಲಾ ತಂಡಗಳು ಉತ್ಸವದಲ್ಲಿ ಭಾಗವಹಿಸುವ ಮೂಲಕ ಉತ್ಸವ ಮೂರ್ತಿ ಮೆರವಣಿಗೆಯ ಮೆರುಗು ಹೆಚ್ಚಿಸಿತು.

ಪಡುವಾರಹಳ್ಳಿಯ (ವಿನಾಯಕನಗರ) ಶ್ರೀ ಚಕ್ರ ಸಮೇತ ಸರ್ವಶಕ್ತ್ಯಾತ್ಮಿಕ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿ ಮೆರವಣಿಗೆಗೆ ಬಾಳೆದಿಂಡನ್ನು ಕತ್ತರಿಸುವ ಮೂಲಕ ಶಾಸ್ತ್ರೋಕ್ತವಾಗಿ ಚಾಲನೆ ನೀಡಿದ ನಂತರ ಉತ್ಸವಮೂರ್ತಿ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಾಗಿತು. ದೇವಿಯ ಮೆರವಣಿಗೆ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತ ಸಮೂಹ ಸೇರಿತ್ತು.

ಆ ದಿನ ಬೆಳಗ್ಗೆ ಚಾಮುಂಡೇಶ್ವರಿ ದೇವಿಗೆ ಬ್ರಾಹ್ಮೀ ಮುಹೂರ್ತದಲ್ಲಿ ಪಂಚಾಮೃತ ಅಭಿಷೇಕ, ದುರ್ಗಾ ಹೋಮ, ಮಹಾ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ ಪೂಜಾ ಕೈಂಕರ್ಯಗಳು ನಡೆದವು. ದೇವಾಲಯ ನಿರ್ಮಾಣವಾಗಿ 25 ವರ್ಷಗಳು ಸಂದ ಸಂಭ್ರಮದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಭಾಗವಹಿಸಿ, ದೇವಾಲಯದ ಬೆಳ್ಳಿ ಕವಚಧಾರಣೆ ಕಾರ್ಯಕ್ರಮ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್ ಗೌಡ, ಇಂದು ನಾಡದೇವತೆ ಚಾಮುಂಡೇಶ್ವರಿ ದೇವಿಯ ವರ್ಧಂತ್ಯುತ್ಸವ ದಿನವಾಗಿದ್ದು, ಮೈಸೂರಿನ ವಿವಿಧೆಡೆ ದೇವಿಯ ಮೂರ್ತಿ ಪ್ರತಿಷ್ಠಾಪನೆ ಮಾಡಿ ಸಂಭ್ರಮಿಸುತ್ತಾರೆ. ಪಡುವಾರಹಳ್ಳಿಯಲ್ಲಿ ದೇವಿಯ ಪ್ರತಿಷ್ಠಾಪನೆ ಮಾಡಿ 25 ವರ್ಷಗಳೇ ಕಳೆದಿವೆ. ಪ್ರತಿವರ್ಷದಂತೆ ಈ ವರ್ಷವೂ ಅನ್ನಸಂತರ್ಪಣೆ ಸೇರಿದಂತೆ ವಿವಿಧ ಸೇವಾ ಕಾರ್ಯಗಳನ್ನು ಟ್ರಸ್ಟ್ ಮಾಡುತ್ತಾ ಬರುತ್ತಿರುವುದು ಶ್ಲಾಘನೀಯ. ಈ ಸತ್ಕಾರ್ಯ ಹೀಗೆ ಮುಂದುವರೆಯಲಿ ಎಂದರು.

ಬಳಿಕ ಮಧ್ಯಾಹ್ನದ ವೇಳೆಗೆ ದೇವಿ ದರ್ಶನಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಪ್ರಸಾದ ಸ್ವೀಕರಿಸಿದ ಭಕ್ತರು ದೇವರ ಕೃಪೆಗೆ ಪಾತ್ರರಾದರು.

ನಾಗರಾಜು (ನಾಗಣ್ಣ), ಪೈಲ್ವಾನ್ ನಾಗರಾಜು, ಸಿದ್ದಪ್ಪ, ಕುಮಾರ್, ಹೇಮಂತ್, ಗಣೇಶ್, ಪ್ರಧಾನ ಅರ್ಚಕರಾದ ನಾಗರಾಜ್ ಶರ್ಮಾ, ಪುರುಷೋತ್ತಮ್, ರಾಜು, ನಾಗೇಶ್, ಸೇವಾಟ್ರಸ್ಟ್‌ನ ಸದಸ್ಯರು, ವಿನಾಯಕ ನಗರದ ಹಿರಿಯ ಮುಖಂಡರು, ಭಕ್ತ ಸಮೂಹ ಉತ್ಸವದಲ್ಲಿ ಭಾಗವಹಿಸಿದ್ದರು.

ಕಬಿನಿ ಜಲಾಶಯದಿಂದ ಹೆಚ್ಚಿನ ನೀರು ಬಿಡುಗಡೆ

ನದಿ ತಟದ ಜನರಿಗೆ ಮುನ್ನೆಚ್ಚರಿಕೆ

ಮೈಸೂರು, ಜು.17– ಕಬಿನಿ ಜಲಾಶಯದಿಂದ ಅಧಿಕ ಪ್ರಮಾಣದ ನೀರನ್ನು ನದಿಗೆ ಹರಿಬಿಟ್ಟಿರುವ ಕಾರಣ ನದಿ ಪಾತ್ರದ ಜನ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಕಾವೇರಿ ನೀರಾವರಿ ನಿಗಮ ಮುನ್ನೆಚ್ಚರಿಕೆ ನೀಡಿದೆ. ಕಬಿನಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿದ್ದು, ಜಲಾಶಯ ಪ್ರಸ್ತುತ ಭರ್ತಿಯಾಗುವ ಹಂತದಲ್ಲಿದೆ. ಇಂದು ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ 20 ಸಾವಿರ ಕ್ಯೂಸೆಕ್‌ಗಿಂತ ಹೆಚ್ಚಿದ್ದು, 25ರಿಂದ 35 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಹೊರ ಹರಿವಿನ ಪ್ರಮಾಣ ಯಾವುದೇ ಕ್ಷಣದಲ್ಲಿ ಇನ್ನೂ ಹೆಚ್ಚಾಗಬಹುದು. ಆದ್ದರಿಂದ ಕಬಿನಿ ನದಿ ಪಾತ್ರದಲ್ಲಿರುವ ಮತ್ತು ನದಿ ದಂಡೆಯಲ್ಲಿ ವಾಸಿಸುತ್ತಿರುವ ಜನ, ತಮ್ಮ ಆಸ್ತಿ–ಪಾಸ್ತಿ, ಜಾನುವಾರ ರಕ್ಷಣೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ನಿಗಮದ ಕಬಿನಿ ಜಲಾಶಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕೆ.ಆರ್.ಉಷಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಹರೀಶ್ ಗೌಡರಿಗೆ ಸನ್ಮಾನ



ಪಡುವಾರಹಳ್ಳಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸೇವಾ ಟ್ರಸ್ಟ್ ವತಿಯಿಂದ ಶಾಸಕ ಹರೀಶ್‌ಗೌಡರಿಗೆ ಸನ್ಮಾನಿಸಲಾಯಿತು. ಈ ವೇಳೆ ಜೆಡಿಎಸ್ ಯುವ ಮುಖಂಡ ಮದನ್ ಮಾದೇಶ್, ಕಂಟ್ರಾಕ್ಟರ್ ನಾಗಣ್ಣ, ಹೇಮಂತ್, ಆಟೋ ಕುಮಾರ್, ಪೈಲ್ವಾನ್ ನಾಗರಾಜ್, ಗಣೇಶ್, ಮೆಲ್ಲಹಳ್ಳಿ ಕುಮಾರ್, ಪ್ರವೀಣ್, ಸಿದ್ದಪ್ಪ ಉಪಸ್ಥಿತರಿದ್ದರು.

ಅಕ್ಷರ ಬ್ರಹ್ಮ ಕೆಬಿಜಿ ನಿಷ್ಠಾವಂತ ಪತ್ರಕರ್ತರು

ಮಾಜಿ ಮೇಯರ್ ಆರ್.ಲಿಂಗಪ್ಪ ಸಂತಾಪ



ಮೈಸೂರು,ಜು.17(ಪಿಎಂ)– 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರ (ಕೆಬಿಜಿ) ನಿಧನದಿಂದ ಪತ್ರಿಕಾರಂಗಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಮಾಜಿ ಮೇಯರ್ ಆರ್.ಲಿಂಗಪ್ಪ ಸಂತಾಪ ಸೂಚಿಸಿದ್ದಾರೆ.



ಆರ್.ಲಿಂಗಪ್ಪ

ಅಕ್ಷರ ಬ್ರಹ್ಮ ಕೆಬಿಜಿಯವರು ತಮ್ಮ ಸುದೀರ್ಘ ಪತ್ರಿಕೋದ್ಯಮ ಜೀವನದಲ್ಲಿ ಎಂದಿಗೂ ವ್ಯವಸ್ಥೆಯೊಂದಿಗೆ ರಾಜಿಯಾಗದೇ ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿದ್ದ ನಿಷ್ಠಾವಂತ ಪತ್ರಕರ್ತರು. ನಾನು ಮೈಸೂರಿನ ಮೇಯರ್ ಆಗಿದ್ದ ದಿನಗಳಲ್ಲಿ ಮೈಸೂರು ಅಭಿವೃದ್ಧಿಯ ಬಗ್ಗೆ ಅವರೊಂದಿಗೆ ಹಲವು ಬಾರಿ ಚರ್ಚೆ ನಡೆಸಿದ್ದ ನೆನಪು ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಅವರ 'ಭೂಮಂತ್ರ' ಅಂಕಣ ಅತ್ಯಂತ ಪ್ರಭಾವಶಾಲಿಯಾಗಿತ್ತು. ಯುವ ರಾಜಕಾರಣಿಗಳನ್ನು ಅವರು ಉತ್ತೇಜಿಸುತ್ತಿದ್ದ ಪರಿಯಂತೂ ಅದ್ಭುತ.

ನಮ್ಮ ನಾಡು–ನುಡಿಯೊಂದಿಗೆ ಅವರಿಗಿದ್ದ ಒಡನಾಟ ಅವರ ಅಂಕಣ, ಲೇಖನಗಳಲ್ಲಿ ಮಾರ್ದನಿಸುತ್ತಿತ್ತು. ನೂರಾರು ಯುವ ಪತ್ರಕರ್ತರನ್ನು ಪತ್ರಿಕಾರಂಗಕ್ಕೆ ಕೊಡುಗೆಯಾಗಿ ನೀಡಿದ ಕೆಬಿಜಿಯವರು ಇಂದು ನಮ್ಮೊಂದಿಗಿಲ್ಲ ಎನ್ನುವುದನ್ನು ನಂಬುವುದೂ ಅಸಾಧ್ಯ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ರೌಡಿಶೀಟರ್ ಹತ್ಯೆ ಪ್ರಕರಣ

ಬಿಜೆಪಿ ಶಾಸಕ ಬೈರತಿ ಬಸವರಾಜ್ ಸೇರಿ ಮತ್ತಿತರರ ಕೋಕಾ ಕಾಯಿದೆಯಡಿ ವಶಕ್ಕೆ ಪಡೆಯುವ ಸಾಧ್ಯತೆ

ಬೆಂಗಳೂರು, ಜು.17(ಕೆಎಂಶಿ)–ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲ ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ, ಹಾಲಿ ಬಿಜೆಪಿ ಶಾಸಕ ಬೈರತಿ ಬಸವರಾಜು ಹಾಗೂ ಮತ್ತಿತರ ಆರೋಪಿಗಳನ್ನು ಕೋಕಾ ಕಾಯಿದೆ ಅಡಿ ವಶಕ್ಕೆ ಪಡೆದು ವಿಚಾರಣೆ ನಡೆಸಲು ಪೊಲೀಸರು ಮುಂದಾಗಿದ್ದಾರೆ.



ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೈರತಿ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಆರೋಪಿಗಳು ಕ್ರಿಮಿನಲ್ ಹಿನ್ನೆಲೆ ಉಳ್ಳವರ ಜೊತೆಗೆ ಸಂಘಟಿತರಾಗಿ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಕೋಕಾ ಕಾಯಿದೆ ಅಡಿ ತನಿಖೆಗೊಳಪಡಿಸಲು ಪೊಲೀಸರು ನಿರ್ಧರಿಸಿದ್ದಾರೆ. ಕೋಕಾ ಕಾಯಿದೆ ಅಡಿ ಬಂಧಿಸಲ್ಪಡುವ ಆರೋಪಿಗೆ ಕನಿಷ್ಠ ಒಂದು ವರ್ಷದವರೆಗೆ ಜಾಮೀನು ದೊರೆಯುವುದಿಲ್ಲ, ಪೊಲೀಸರು ವಿಚಾರಣೆ ನಡೆಸಲು 30 ದಿನಗಳ ಕಾಲಾವಕಾಶ ಇರುತ್ತದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏನೂ ಕೆಲಸ ಮಾಡದೇ ಸಾಧನಾ ಸಮಾವೇಶ; ಸಿದ್ದರಾಮಯ್ಯನವರಿಗೆ ಶಹಭಾಸ್ ಹೇಳಲೇಬೇಕು...!

ಮಾಜಿ ಸಂಸದ ಪ್ರತಾಪ್ ಸಿಂಹ ಲೇವಡಿ

ಮೈಸೂರು, ಜು.17(ಎಂಟಿವೈ)– ಅಧಿಕಾರಕ್ಕೆ ಬಂದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಏನೂ ಕೆಲಸ ಮಾಡದೇ ಇದ್ದರೂ ಸಾಧನಾ ಸಮಾವೇಶ ಮಾಡುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಲೇವಡಿ ಮಾಡಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡು ಕಾಲು ವರ್ಷವಾಗಿದೆ. ಸಿದ್ದರಾಮಯ್ಯ ಸರ್ಕಾರ ಏನೂ ಸಾಧನೆ ಮಾಡಿಲ್ಲ. ಆದರೂ ಭಂಡ ಧೈರ್ಯದಲ್ಲಿ ಸಮಾವೇಶ ಮಾಡುತ್ತಿದ್ದಾರೆ. ಅದಕ್ಕಾಗಿ ಸಿದ್ದರಾಮಯ್ಯ ಅವರಿಗೆ ಶಹಬ್ಬಾಸ್ ಹೇಳಲೇಬೇಕು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಿಗಬೇಕಾದ ಸ್ಥಾನವನ್ನು ತನ್ನಲ್ಲೇ ಸಿದ್ದರಾಮಯ್ಯ ಉಳಿಸಿಕೊಂಡಿದ್ದಾರೆ. ಡಿಕೆಶಿ ವಿರುದ್ಧ ತುಮಕೂರಿನಲ್ಲಿ ರಾಜಣ್ಣ, ಬೆಳಗಾವಿಯಲ್ಲಿ ಜಾರಕಿಹೊಳಿ ಅವರನ್ನು ಎತ್ತಿಕಟ್ಟಿ ತಮ್ಮ ಸ್ಥಾನ ಉಳಿಸಿಕೊಂಡಿದ್ದಾರೆ. ಇದೇ ಅವರ ಸಾಧನೆ ಎಂದರು.



ಸಿಗಂದೂರು ಸೇತುವೆ ಉದ್ಘಾಟನೆಯಲ್ಲಿ ಶಿಷ್ಟಾಚಾರ ವಿಚಾರ ಮಾತನಾಡುವ ಕಾಂಗ್ರೆಸ್ ನಾಯಕರು ಈ ಹಿಂದೆ ಮೈಸೂರು ರಿಂಗ್ ರೋಡ್ ಉದ್ಘಾಟನೆ ಸಮಯದಲ್ಲಿ ದೆಹಲಿಯಲ್ಲಿ ಸದನ ನಡೆಯುತ್ತಿತ್ತು. ಹಾಗಿದ್ದರೂ ರಿಂಗ್ ರಸ್ತೆ ಉದ್ಘಾಟಿಸಿದ್ದರು. ಇವರೆಲ್ಲ ಶಿಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಸೇತುವೆ ಉದ್ಘಾಟನೆ ಕುರಿತಂತೆ ಸಂಸದ ರಾಘವೇಂದ್ರ ಸಿಎಂಗೆ ಆಹ್ವಾನ ನೀಡಿದ್ದರು. ಕೇಂದ್ರ ಸರ್ಕಾರ ಪತ್ರ ಬರೆದಿತ್ತು. ಸಿಎಂ ಸಿದ್ದರಾಮಯ್ಯ ಬೆಂಗಳೂರಿಂದ ಮೈಸೂರಿಗೆ ಹೆಲಿಕಾಪ್ಟರ್‌ನಲ್ಲಿ ಹೋಗ್ತಾರೆ. ಮೈಸೂರಿನಿಂದ ಕೆ.ಆರ್.ನಗರಕ್ಕೂ ಹೆಲಿಕಾಪ್ಟರ್‌ನಲ್ಲಿ ಹೋಗಿದ್ದಾರೆ. ಸಿಗಂದೂರಿಗೆ ಹೋಗಲು ಮಾತ್ರ ಆಗಲ್ಲ ಅಲ್ವಾ? ಸೇತುವೆ ವಿಚಾರಕ್ಕೆ ಮಾಜಿ ಸಿಎಂ ಯಡಿಯೂರಪ್ಪ ಸಾಕಷ್ಟು ಶ್ರಮ ಹಾಕಿದ್ದಾರೆ. ಸಂಸದ ರಾಘವೇಂದ್ರ ಓಡಾಡಿ ಸೇತುವೆ ಪೂರ್ಣ ಆಗುವಂತೆ ನೋಡಿಕೊಂಡರು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಚಾಮುಂಡಿಬೆಟ್ಟಕ್ಕೆ ಬಂದು ಮಂಗಳಾರತಿ ತೆಗೆದುಕೊಂಡಿಲ್ಲ. ಶಾಸಕ ತನ್ವೀರ್ ಸೇಠ್ ಅಂತಹವರು ಮಂಗಳಾರತಿ ತೆಗೆದುಕೊಂಡು ಕುಂಕುಮ ಇಟ್ಟುಕೊಳ್ಳುತ್ತಾರೆ. ಮಹದೇವಪ್ಪ ಅವರಿಗೆ ಶಿಷ್ಟಾಚಾರದ ಬಗ್ಗೆ ಏನು ಗೊತ್ತಿದೆ. ಜಿಲ್ಲಾ ಮಂತ್ರಿಯಾಗಿ ಕೆಡಿಪಿ ಸಭೆ ಮಾಡಿಲ್ಲ. ಯಾವುದೇ ಸ್ಥಳಕ್ಕೆ ಭೇಟಿ ನೀಡಿ ಜನರ ಸಮಸ್ಯೆ ಕೇಳಿಲ್ಲ. ಸಿಎಂ ಜೊತೆ ಬಂದು, ಹೋಗುತ್ತಾರೆ. ಇದು ಮಹದೇವಪ್ಪ ಅವರ ಸಾಧನೆ ಎಂದು ಕಿಡಿಕಾರಿದರು.

ನನ್ನ ವಿರುದ್ಧ ಟೀಕೆ ಮಾಡಿರುವ ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಸಂತೋಷ್ ಲಾಡ್ ನನ್ನ ವಿರುದ್ಧ ಮಾಡಿರುವ ವೈಯಕ್ತಿಕ, ಪೊಲಿಟಿಕಲ್ ಹೇಳಿಕೆಗಳೆರಡಕ್ಕೂ ಬಡ್ಡಿ ಸಮೇತ ಮುಂದಿನ ವಾರ ಉತ್ತರ ಕೊಡುತ್ತೇನೆ. ನಿಮ್ಮ ಬಂಡವಾಳ ಬಯಲು ಮಾಡುತ್ತೇನೆ ಎಂದರು.

ಮೈಸೂರು ಮಿತ್ರ ಶುಕ್ರವಾರ 18 ಜುಲೈ 2025

ಶಾಸಕ ಕೆ.ಹರೀಶ್‌ಗೌಡ ಹುಟ್ಟುಹಬ್ಬ ಪ್ರಯುಕ್ತ

ಜು.24ರಂದು ಉದ್ಯೋಗ ಮೇಳ, ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜು.17(ಜಿಎ)–ನಗರ ಕಾಂಗ್ರೆಸ್ ಸಮಿತಿಯಿಂದ ಶಾಸಕ ಕೆ.ಹರೀಶ್‌ಗೌಡರ ಜನ್ಮದಿನದ ಪ್ರಯುಕ್ತ ಜೆ.ಕೆ.ಮೈದಾನದಲ್ಲಿ ಜು.24 ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 3ರವರೆಗೆ ಉದ್ಯೋಗ ಮೇಳ, ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.



ಕೆ.ಹರೀಶ್‌ಗೌಡ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಚಾಮರಾಜ ಕ್ಷೇತ್ರ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಈ ವಿಷಯ ತಿಳಿಸಿ, ಉದ್ಯೋಗ ಮೇಳದಲ್ಲಿ 70ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, 18ರಿಂದ 35 ವರ್ಷ ವಯೋಮಾನದ ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವಿವರೆಗೆ ವ್ಯಾಸಾಂಗ ಮಾಡಿದವರು ಸ್ವವಿವರದ 10 ಪ್ರತಿಗಳೊಂದಿಗೆ ನೇರವಾಗಿ ಅಥವಾ ನೋಂದಣಿಯೊಂದಿಗೆ ಭಾಗವಹಿಸಬಹುದು ಎಂದು ತಿಳಿಸಿದರು.

ಆರೋಗ್ಯ ಶಿಬಿರದಲ್ಲಿ 40ಕ್ಕೂ ಹೆಚ್ಚು ಖಾಸಗಿ ಆಸ್ಪತ್ರೆಗಳು ಭಾಗವಹಿಸಲಿವೆ. ರಕ್ತದಾನ ಶಿಬಿರವೂ ನಡೆಯಲಿದ್ದು, ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರ ವಿತರಣೆ, ತಳ್ಳುವ ಗಾಡಿ, ಆಯುರ್ವೇದ ಗಿಡಗಳ ವಿತರಣೆ ಮಾಡಲಾಗುವುದು. ಮಾಹಿತಿಗೆ ಮೊ.ಸಂ. 76769 67671ರ ಮೂಲಕ ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ರಮೇಶ್ ರಾಯಪ್ಪ, ದಿ ಮೈಸೂರು ಕೊಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಯೋಗೇಶ್, ಮೈಸೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯ ಮಹದೇಶ್, ಚಾಮರಾಜ ಕ್ಷೇತ್ರ ಆಶ್ರಯ ಸಮಿತಿ ಅಧ್ಯಕ್ಷ ಅನಂತ ನಾರಾಯಣ ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ನುವಾ ಬೈ ಮೈನ್ ಡೈಮಂಡ್ಸ್ ಬಿಡುಗಡೆ



ಮೈಸೂರಿನ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ನುವಾ ಬೈ ಮೈನ್ ಡೈಮಂಡ್ಸ್ ಅನ್ನು ಗುರುವಾರ ರೂಪದರ್ಶಿಗಳಾದ ಪುಣ್ಯ, ನಿಶ್ಚಿತಾ, ಸಿಂಚನಾ ಇತರರು ಬಿಡುಗಡೆಗೊಳಿಸಿದರು.

ಮೈಸೂರು,ಜು.17–ಪ್ರಸಿದ್ಧ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಹೊಸ ಅತ್ಯುತ್ತಮ ನೈಸರ್ಗಿಕ ವಜ್ರಾಭರಣ ಸಂಕಲನವಾಹಕ ನುವಾ ಬೈ ಮೈನ್ ಡೈಮಂಡ್ಸ್ ಅನ್ನು ರೂಪದರ್ಶಿಗಳಾದ ಮಿಸ್ ಪುಣ್ಯ, ಮಿಸ್ ನಿಶ್ಚಿತಾ, ಮಿಸ್ ಸಿಂಚನಾ. ದಕ್ಷಿಣ ವಲಯ ಮುಖ್ಯಸ್ಥ ಶರಫುದ್ದೀನ್, ಸಹಾಯಕ ಮುಖ್ಯಸ್ಥ ಮುಹಮ್ಮದ್ ಅನ್ವಾಜ್ ಬಿಡುಗಡೆ ಮಾಡಿದರು.

ಅಮೂರ್ತ ಮಾದರಿಗಳು ಮತ್ತು ಆಧುನಿಕ ರೂಪಗಳಿಂದ ಪ್ರೇರಿತವಾದ ಈ ಸಂಗ್ರಹವು ಈಗ ಕನಿಷ್ಠ ಐಷಾರಾಮಿಯನ್ನು ತೋರಿಸುವ ಅದ್ಭುತ ವಿನ್ಯಾಸಗಳ ಶ್ರೇಣಿಯನ್ನು ತರುತ್ತದೆ. ಅಮೂರ್ತ ಛಾಯಾವಳಿಗಳು ಸಮಕಾಲೀನ ಅಂಚುಗಳನ್ನು ಹೊಡೆಯುವುದರೊಂದಿಗೆ, ಪ್ರತಿಯೊಂದು ತುಣುಕು ನಿರ್ಭೀತ ಅಭಿವ್ಯಕ್ತಿಗೆ ಒಂದು ಮೆಚ್ಚುಗೆಯಾಗಿದೆ. ಬಾಲಿವುಡ್ ಬಿಂಬ ಮತ್ತು ಬ್ರಾಂಡ್ ರಾಯಭಾರಿ ಕರೀನಾ ಕಪೂರ್ ಖಾನ್ ಅವರನ್ನು ಒಳಗೊಂಡ ಇತ್ತೀಚಿನ ನುವಾ ಸಂಗ್ರಹಕ್ಕಾಗಿ ವಿಶೇಷ ಅಭಿಯಾನವನ್ನು ಪ್ರಾರಂಭಿಸುವುದರೊಂದಿಗೆ, ಮಲಬಾರ್ ಗೋಲ್ಡ್ & ಡೈಮಂಡ್ಸ್ ಆಧುನಿಕ ಮಹಿಳೆಯರ ಸೊಬಗು, ದಿಟ್ಟ ವ್ಯಕ್ತಿತ್ವ, ಬಹುಮುಖತೆ, ಶಕ್ತಿ ಮತ್ತು ಅನುಗ್ರಹವನ್ನು ಆಚರಿಸುತ್ತದೆ. ಈ ಅಭಿಯಾನವು ಮಹಿಳೆಯರನ್ನು ಈ ಅದ್ಭುತ ಸಂಗ್ರಹದೊಂದಿಗೆ ಹೆಚ್ಚು ಕಾಂತಿ ಹೊರ ಹೊಮ್ಮಲು ಪ್ರೋತ್ಸಾಹಿಸುತ್ತದೆ.

ಮಂಡ್ಯ ಜೈಲಿನಲ್ಲಿ ವಿಚಾರಣಾಧೀನ ಕೈದಿ ಸಾವು: ಅಧಿಕಾರಿಗಳ ನಿರ್ಲಕ್ಷ್ಯ ಕಾರಣ

ಮೃತನ ಸಹೋದರ ಆರೋಪ

ಮೈಸೂರು, ಜು.17(ಜಿಎ)–ಮಾದಕ ವಸ್ತು ಮತ್ತು ಅಮಲು ಪದಾರ್ಥ ನಿಯಂತ್ರಣ ಪ್ರಕರಣದಲ್ಲಿ ಮಂಡ್ಯ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ತಮ್ಮ ಸಹೋದರ ಇರ್ಷಾದ್ ಜು.3 ರಂದು ತೀವ್ರ ಅನಾರೋಗ್ಯದಿಂದ ಸಾವಿಗೀಡಾಗಿದ್ದಾರೆ. ಇವರ ಸಾವಿಗೆ ಜೈಲು ಅಧಿಕಾರಿಗಳು ಹಾಗೂ ಅವರಿಗೆ ಚಿಕಿತ್ಸೆ ನೀಡಿದ ವೈದ್ಯರ ನಿರ್ಲಕ್ಷ್ಯ ಕಾರಣವಾಗಿದೆ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನೌಷಾದ್ ಹುಸೇನ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ನಗರದ ಸಾತಗಳ್ಳಿ ನಿವಾಸಿಯಾಗಿದ್ದು, ತಮ್ಮ ಸಹೋದರ ಮಾದಕ ವಸ್ತು ಹೊಂದಿಲ್ಲದಿದ್ದರೂ ತಪ್ಪು ಮಾಹಿತಿ ಆಧಾರದ ಮೇಲೆ ಬಂಧಿಸಿ ಮಂಡ್ಯ ಕಾರಾಗೃಹದಲ್ಲಿ ಇರಿಸಲಾಗಿತ್ತು. ಕಾರಾಗೃಹ ಪ್ರವೇಶ ವೇಳೆ ಆರೋಗ್ಯದಿಂದಲೇ ಇದ್ದರು. ಬಳಿಕ ಜು.2ರಂದು ಜ್ವರ ಬಂದಿತ್ತೆಂದು ಹೇಳಲಾಗಿದೆ. ಈ ವೇಳೆ ಜೈಲು ಅಧಿಕಾರಿಗಳು ಚಿಕಿತ್ಸೆ ಕೊಡಿಸಿಲ್ಲ. ಇದಕ್ಕೂ ಮೊದಲು ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದರೂ, ಜಾಮೀನುದಾರರನ್ನು ಒದಗಿಸಲು ಸಾಧ್ಯವಾಗದೇ ಕುಟುಂಬದವರು ಕೊನೆಗೂ ಒದಗಿಸಿದ್ದು, ಬಿಡುಗಡೆ ಮುನ್ನಾ ದಿನವೇ ಅನಾರೋಗ್ಯಕ್ಕೆ ಒಳಗಾದರು ಎಂದರು.

ಮಂಡ್ಯ ಕಾರಾಗೃಹ ಅಧಿಕಾರಿಗಳು ಮೈಸೂರಿನ ಜಿಲ್ಲಾಸ್ಪತ್ರೆಗೆ ತರುವಲ್ಲಿ ವಿಳಂಬ ಮಾಡಿದರು. ಜೊತೆಗೆ ಜಿಲ್ಲಾಸ್ಪತ್ರೆ ಅಧಿಕಾರಿಗಳು ಸಕಾಲದಲ್ಲಿ ಚಿಕಿತ್ಸೆ ನೀಡದ ಹಿನ್ನೆಲೆ ಬಹು ಅಂಗಾಂಗ ವೈಫಲ್ಯದಿಂದ ಸಾವಿಗೀಡಾದರು. ಇವರ ಕುಟುಂಬ ಈಗ ನಿರ್ಗತಿಕವಾಗಿದ್ದು, ಸರ್ಕಾರ ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಹೋದರನ ಕುಟುಂಬಕ್ಕೆ ಪರಿಹಾರ ಒದಗಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್ ಸಂಘಟನೆ ಪದಾಧಿಕಾರಿಗಳಾದ ಸಿಂಧುವಳ್ಳಿ ಅಕ್ಬರ್, ಅಮೀನ್ ಸೇಠ್, ಅಲ್ತಾಫ್ ಅಹಮದ್ ಉಪಸ್ಥಿತರಿದ್ದರು.


ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ....



ಮೈಸೂರು ತಾಲೂಕು ಜಯಪುರದ ದೇವಮ್ಮ ಪಟೇಲ್ ಚಿಕ್ಕ ಅಂಕೇಗೌಡ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಘಟಕದ ವತಿಯಿಂದ ಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ದೇವಿಗೆ ಪೂಜೆ ಸಲ್ಲಿಸಿ, ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ಘಟಕ ಪ್ರಧಾನ ಕಾರ್ಯದರ್ಶಿ ಹೇಮಂತ್‌ಕುಮಾರ್, ಪ್ರಜ್ವಲ್, ಅಭಿ, ಕಿರಣ್‌ಕುಮಾರ್ ಉಪಸ್ಥಿತರಿದ್ದರು.

ನಿಧನ

ಮುಷ್ತಾಕ್ ಅಹಮದ್ ಅಶ್ರಫಿ



ಮೈಸೂರು,ಜು.17–ಮೈಸೂರಿನ ಅಜೀಜ್ ಸೇಠ್ ನಗರದ ನಿವಾಸಿ ಮುಷ್ತಾಕ್ ಅಹಮದ್ ಅಶ್ರಫಿ (78) ಬುಧವಾರ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗದಲ್ಲಿರುವ ಮುಸ್ಲಿಮರ ಸ್ಮಶಾನ ಗೇಟ್ ನಂ.1ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಿಯಮ್ಮ



ಮೈಸೂರಿನ ಮಾನಂದವಾಡಿ ರಸ್ತೆ ಮಹದೇವಪುರ ಬಿ–ಬ್ಲಾಕ್ ನಿವಾಸಿ, ದಿವಂಗತ ಶಿವರಾಮ ಶೆಟ್ಟಿ ಅವರ ಪತ್ನಿ ಮರಿಯಮ್ಮ(85) ಅವರು ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ನಾಳೆ (ಶುಕ್ರವಾರ) ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ 57ನೇ ಸಂಸ್ಥಾಪನಾ ದಿನಾಚರಣೆ

ಭಾಷಾ ಸೂತ್ರದ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆ ದೂರ ಮಾಡಿ

● ಭಾಷಾ ತಜ್ಞ ಪ್ರೊ.ಪಣಿಕ್ಕರ್ ಸಲಹೆ ● ಎನ್‌ಇಪಿ, ಭಾಷಾ ಸೂತ್ರದ ಬಗ್ಗೆ ಕೆಲವರಿಗೆ ಅರಿವಿಲ್ಲ ● ಅವಕಾಶವಾದಿಗಳಿಂದ ಸಮಾಜವನ್ನು ಪಾರು ಮಾಡಿ ● ಸೂಕ್ತ ರೀತಿಯಲ್ಲಿ ಕೃತಕ ಬುದ್ಧಿಮತ್ತೆ ಬಳಸಿಕೊಳ್ಳಿ

ಮೈಸೂರು, ಜು.17(ಬಿಎಲ್‌ಯು)–ಭಾಷಾ ಸೂತ್ರ ಅಳವಡಿಸಿಕೊಳ್ಳುವ ಬಗ್ಗೆ ದಕ್ಷಿಣ ರಾಜ್ಯಗಳು ಮಾತ್ರವಲ್ಲದೆ ಮಹಾರಾಷ್ಟ್ರ ಮತ್ತು ಪಂಜಾಬ್ ರಾಜ್ಯಗಳಿಂದಲೂ ಹಲವು ಸಂದೇಹಗಳು ಎದುರಾಗಿವೆ. ಭಾಷಾ ಸೂತ್ರದ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆ ದೂರ ಮಾಡಿ, ಸಂಕುಚಿತ ಮತ್ತು ಅವಕಾಶವಾದಿಗಳ ಶೋಷಣೆಯಿಂದ ಸಮಾಜವನ್ನು ಪಾರು ಮಾಡಬೇಕು ಎಂದು ಕೇರಳದ ತಿರುವಂತಪುರಂನ ಅಂತರರಾಷ್ಟ್ರೀಯ ದ್ರಾವಿಡ ಭಾಷಾ ವಿಜ್ಞಾನ ಕೇಂದ್ರದ ನಿರ್ದೇಶಕ ಪ್ರೊ.ಪಣಿಕ್ಕರ್ ಸಲಹೆ ನೀಡಿದರು.

ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಇಂದು ಸಂಸ್ಥೆಯ 57ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾಷೆಯ ವಿಚಾರ ಸೂಕ್ಷ್ಮವಾಗಿದ್ದು, ಕಾಳಜಿಯ ಅಗತ್ಯವಿದೆ. ಆದರೆ ಕೆಲವರಿಗೆ ರಾಷ್ಟ್ರೀಯ ಶಿಕ್ಷಣ ನೀತಿ–2020 ಮತ್ತು ಭಾಷಾ ಸೂತ್ರದ ಬಗ್ಗೆ ಅರಿವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭಾಷಾ ಸೂತ್ರದ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆ ದೂರ ಮಾಡಬೇಕು. ಸಂಕುಚಿತವಾದಿಗಳ ಮತ್ತು ಅವಕಾಶವಾದಿಗಳ ಶೋಷಣೆಯಿಂದ ಪಾರು ಮಾಡಬೇಕು. ಈ ಹಿನ್ನೆಲೆ ಭಾರತೀಯ ಭಾಷಾ ಸಂಸ್ಥಾನ ತುರ್ತಾಗಿ ಪ್ರವೇಶಿಸಿ ಪರಿಹಾರ ರೂಪಿಸಬೇಕು ಎಂದು ಸಲಹೆಯಿತ್ತರು.

ದೇಶದ ಪ್ರತಿಯೊಂದು ಭಾಷೆಯನ್ನು ಮೌಲ್ಯೀಕರಣಗೊಳಿಸಬೇಕು, ಗೌರವಿಸಬೇಕು, ರಕ್ಷಿಸಬೇಕು. ಭಾಷಾ ಸೂತ್ರಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿ ಹದಗೆಡಲು ಬಿಡದೆ ಪರಿಹಾರ ರೂಪಿಸಬೇಕು ಎಂದು ಪ್ರೊ.ಪಣಿಕ್ಕರ್ ಹೇಳಿದರು.



ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಗುರುವಾರ ನಡೆದ ಸಂಸ್ಥೆಯ 57ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಕೇರಳದ ತಿರುವಂತಪುರಂನ ಅಂತರರಾಷ್ಟ್ರೀಯ ದ್ರಾವಿಡ ಭಾಷಾ ವಿಜ್ಞಾನ ಕೇಂದ್ರದ ನಿರ್ದೇಶಕ ಪ್ರೊ.ಪಣಿಕ್ಕರ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಭಾರತೀಯ ಭಾಷಾ ಸಂಸ್ಥಾನ ಸ್ಥಾಪನೆಯಾದ ಆರಂಭದಲ್ಲೇ ಹಲವು ಕಠಿಣ ಸವಾಲುಗಳನ್ನು ಎದುರಿಸಬೇಕಾಯಿತು. ಈಗಲೂ ಭಾಷೆಗೆ ಸಂಬಂಧಿಸಿದಂತೆ ಅನೇಕ ಸವಾಲು ಎದುರಿಸುತ್ತಿದೆ. ಈ ಮೂಲಕ ಸೂಕ್ಷ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಮುನ್ನಡೆಯುತ್ತಾ ದೇಶಕ್ಕೆ ಸೇವೆ ಸಲ್ಲಿಸುತ್ತಿದೆ ಎಂದು ಹೇಳಿದರು.

ಭಾರತೀಯ ಭಾಷಾ ಸಂಸ್ಥಾನವು ದೇಶದ ಅಧಿಕೃತ ಭಾಷೆಗಳತ್ತ ಮಾತ್ರ ಗಮನ ಹರಿಸದೆ ಎಲ್ಲಾ ಭಾಷೆಗಳ ಅಭಿವೃದ್ಧಿಯಲ್ಲಿ ತನ್ನದ ಆದ ಪ್ರಮುಖ ಪಾತ್ರ ವಹಿಸಿದೆ. ಭಾರತದ ವಿವಿಧ ಪ್ರದೇಶಗಳಲ್ಲಿರುವ ಎಲ್ಲಾ ಭಾಷೆಗಳ ಬಗ್ಗೆ ಅಧ್ಯಯನ ಮಾಡಿದೆ. ಈ ಮೂಲಕ ರಾಷ್ಟ್ರೀಯ ಏಕೀಕರಣ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು.

ಭಾಷೆಗಳ ರಕ್ಷಣೆ ಮತ್ತು ದಾಖಲೀಕರಣದಲ್ಲಿ ಭಾರತೀಯ ಭಾಷಾ ಸಂಸ್ಥೆ ಸ್ಮರಣೀಯ ಕಾರ್ಯ ಮಾಡಿದೆ. ಹತ್ತು ಸಾವಿರಕ್ಕೂ ಹೆಚ್ಚು ಭಾಷಿಕರನ್ನು ಒಳಗೊಂಡಂತೆ ಅಧ್ಯಯನ ಮಾಡಿದೆ. ಅಲ್ಲದೆ ವ್ಯಾಕರಣ ಮತ್ತು ನಿಘಂಟುಗಳನ್ನು ಸಿದ್ಧಪಡಿಸಿದೆ. ಬುಡಕಟ್ಟು ವಿದ್ಯಾರ್ಥಿಗಳು ತಮ್ಮ ಆರಂಭಿಕ ಶಿಕ್ಷಣವನ್ನು ಅವರ ಮಾತೃ ಭಾಷೆಯಲ್ಲೆ ಪಡೆಯಲು ಪಠ್ಯ ತಯಾರಿಸಿದೆ ಎಂದರು.

ಇದೇ ವೇಳೆ ಮಾತನಾಡಿದ ಭಾರತೀಯ ಭಾಷಾ ಸಂಸ್ಥಾನದ ವಿಶ್ರಾಂತ ನಿರ್ದೇಶಕ ಪ್ರೊ.ಉದಯ ನಾರಾಯಣ ಸಿಂಗ್, ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಭಾಷೆಗಳ ಅಧ್ಯಯನಕ್ಕೆ ಬಹುಪಯೋಗಿಯಾಗಿದೆ. ನವೀನ ತಂತ್ರಜ್ಞಾನ ಪರಿಚಯವಾಗಿರುವ ಈ ಸಂದರ್ಭದಲ್ಲಿ ನಾವು ಯಾವ ಹಂತದಲ್ಲಿ, ಯಾವ ರೀತಿಯ ತೀರ್ಮಾನ ಕೈಗೊಳ್ಳಬೇಕು ಎಂದು ನಿರ್ಧರಿಸುವ ಪರಿಸ್ಥಿತಿ ಎದುರಾಗಿದೆ. ಈ ನಿಟ್ಟಿನಲ್ಲಿ ಎಚ್ಚರಿಕೆ ಹೆಜ್ಜೆ ಇಟ್ಟು ಮುಂದೆ ಏನು ಮಾಡಬೇಕು ಎಂದು ಈಗಲೇ ಗಂಭೀರ ಚಿಂತನೆ ಮಾಡಬೇಕು ಎಂದು ಸಲಹೆ ನೀಡಿದರು.

ಭಾಷೆಗಳು ಹಾಗೂ ಭಾಷೆಗಳ ಅನುವಾದ ಸಂಬಂಧ ಆಧುನಿಕ ಮಾಹಿತಿ ತಂತ್ರಜ್ಞಾನದಿಂದ ಬಹಳಷ್ಟು ವಿವರ ಲಭ್ಯವಾಗಲಿದೆ. ಕೃತಕ ಬುದ್ಧಿಮತ್ತೆ ಬಳಸಿಕೊಂಡು ಕೆಲವು ಸಮಸ್ಯೆಗಳನ್ನು ಶೀಘ್ರ ಬಗೆಹರಿಸಿಕೊಳ್ಳಬಹುದು ಎಂದು ಪ್ರೊ.ಉದಯ ನಾರಾಯಣ ಸಿಂಗ್ ಅಭಿಪ್ರಾಯಪಟ್ಟರು.

ಪುಣೆಯ ಡೆಕ್ಕನ್ ಕಾಲೇಜು ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆಯ ಕುಲಪತಿ ಪ್ರೊ.ಪ್ರಸಾದ್ ಜೋಷಿ, ಭಾರತೀಯ ಭಾಷಾ ಸಂಸ್ಥಾನದ ನಿವೃತ್ತ ನಿರ್ದೇಶಕರಾದ ಪ್ರೊ.ರಾಜೇಶ್ ಸಚ್‌ದೇವ, ಪ್ರೊ.ಸಿ.ಜಿ.ವೆಂಕಟೇಶ್ ಮೂರ್ತಿ, ಹಾಲಿ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> “ತಾಂತ್ರಿಕ ನಾವೀನ್ಯತೆ ಹಾಗೂ ಕೃತಕ ಬುದ್ಧಿಮತ್ತೆ(ಎಐ)ಯಿಂದ ಅನೇಕ ಜಟಿಲ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದು. ಎಐನಿಂದ ವಿಜ್ಞಾನ ಪದಗಳ ನಿಘಂಟುಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಸುಲಭವಾಗಿ ಸಿದ್ಧಪಡಿಸಬಹುದು. ಇದನ್ನು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ ಸದ್ಬಳಕೆ ಮಾಡಿಕೊಳ್ಳಬೇಕು. ಕೃತಕ ಬುದ್ಧಿಮತ್ತೆಯಿಂದ ಭಾರತದಲ್ಲಿ ಅಸ್ತಿತ್ವದಲ್ಲಿರುವ ಭಾಷೆಗಳ ಪಠ್ಯ ಪುಸ್ತಕ ಮತ್ತು ಲೇಖನಗಳನ್ನು ಅನುವಾದ ಮಾಡಬಹುದು. ಅಲ್ಲದೆ ವಿದೇಶಿ ಭಾಷೆಗಳನ್ನು ಭಾರತೀಯ ಭಾಷೆಗಳಿಗೆ ಕೂಡ ಅನುವಾದಿಸಬಹುದು. ಆದರೆ ಇದಕ್ಕೆ ಅಗತ್ಯವಾಗಿರುವ ವ್ಯವಸ್ಥೆಯನ್ನು ಭಾರತೀಯ ಭಾಷಾ ಸಂಸ್ಥಾನ ಕಲ್ಪಿಸಬೇಕು. –ಪ್ರೊ. ಪಣಿಕ್ಕರ್



ಚಾಮುಂಡೇಶ್ವರಿ ವರ್ಧಂತಿ...

ಮೈಸೂರು ತಾಲೂಕು ಜಯಪುರ ಹೋಬಳಿ ಮಾವಿನಹಳ್ಳಿಯಲ್ಲಿ ಚಾಮುಂಡೇಶ್ವರಿ ವರ್ಧಂತಿ ಆಚರಿಸಿ ಪ್ರಸಾದ ವಿನಿಯೋಗಿಸಲಾಯಿತು. ಈ ವೇಳೆ ಮಂಡಿ ಮೊಹಲ್ಲಾ ಗುಣಶೇಖರ್, ಶಿವಣ್ಣೆಗೌಡ, ನಾಗ, ನಂದೀಶ್, ಜಯಪುರ ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕರಾದ ಅಭಿಷೇಕ್, ಯೋಗಾನಂದ, ನಾಗೇಶ್, ಪ್ರಭು, ಹರೀಶ್ ಉಪಸ್ಥಿತರಿದ್ದರು.

ಸಿದ್ಧ ಸಮಾಧಿ ಯೋಗ ಶಿಬಿರ; ಉಚಿತ ಪರಿಚಯ ಕಾರ್ಯಕ್ರಮ

ಮೈಸೂರು, ಜು.17– ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ಜು.20ರಂದು ಸಂಜೆ 6 ಗಂಟೆಗೆ ಸಿದ್ಧ ಸಮಾಧಿ ಯೋಗ ಶಿಬಿರದ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜು.21ರಿಂದ 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭವಾಗಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಮೊ. ಸಂಖ್ಯೆ 9448458050, 8618762110 ಅನ್ನು ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.07.2025 ಶುಕ್ರವಾರ, ಮಳೆ ನಕ್ಷತ್ರ: ಪುನರ್ವಸು, 6.07.2025ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾ ಭ್ಯಾಸ ತರಗತಿ, ಬೆಳಗ್ಗೆ 9ರಿಂದ ವೆರಿಕೋಸ್ ವೇನ್ಸ್, ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾ ಬಿಟಿಕ್ ರೆಟಿನೋಪತಿ, ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಮತ್ತು ಅನ್ಯನರ ಸಂಬಂಧಿ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘ:** ವಿಶ್ವಬ್ರಹ್ಮ ಕ್ರಿಕೆಟ್ ಟೂರ್ನಮೆಂಟ್, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಒಡೆಯರ್, ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ನಟಿ ಭವ್ಯಾ, ನೂತನ ಡಿಸಿಪಿ ಬಿಂದುಮಣಿ ಆರ್.ಎನ್., ಸಂಘದ ಗೌರವಾಧ್ಯಕ್ಷ ರವಿಪ್ರಕಾಶ್, ಅಧ್ಯಕ್ಷ ಗೋಲ್ಡನ್ ಟಿ.ಸುರೇಶ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಶೋಭ ಹೆಚ್.ಪಿ., ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಸ್ಥಳ: ವಿ.ವಿ.ಮೈದಾನ, ಬೆಳಗ್ಗೆ 10ರಿಂದ.

■ **ಅರಸು ಮಂಡಳಿ ಸಂಘ :** ಶಿ ಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ವರ್ಧಂತ್ಯೋತ್ಸವ, ಜಯಚಾಮರಾಜ ವೃತ್ತಕ್ಕೆ ತೆರಳಿ ಅವರ ಪುತ್ಥಳಿಗೆ ಮಾಲಾರ್ಪಣೆ, ಸ್ಥಳ: ಸಂಘದ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ನಗರ ಯುವ ಕಾಂಗ್ರೆಸ್ ಸಮಿತಿ:** ಮೈಸೂರು ನಗರ ಯುವ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷ ಸೈಯದ್ ಅಬ್ರಾರ್ ಹಾಗೂ ಸಮಿತಿ ಪದಾಧಿಕಾರಿಗಳ ಪದಗ್ರಹಣ ಯುವಶಕ್ತಿ ಪ್ರತಿಜ್ಞೆ ಕಾರ್ಯಕ್ರಮ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಸತೀಶ್ ಜಾರಕಿಹೊಳಿ, ಭೈರತಿ ಸುರೇಶ್, ಶಾಸಕ ತನ್ವೀರ್ ಸೇಠ್, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಬಿ.ಜೆ. ವಿಜಯಕುಮಾರ್, ಶಾಸಕ ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆ. ಲಕ್ಷ್ಮಣ್, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ. ಬಾಬು ಜಗಜೀವನ್‌ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ ಡಾ. ಬಾಬು ಜಗಜೀವನರಾಮ್‌ರವರ ಕೊಡುಗೆಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ, ಶಾಸಕರಾದ ಕೆ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಅಧ್ಯಕ್ಷ ಡಾ.ರೂಪಕಲಾ ಎಂ.ಶಶಿಧರ್, ಪ್ರಧಾನ ಭಾಷಣ: ಪ್ರಾಧ್ಯಾಪಕ ಪ್ರೊ.ಆರ್.ತಿಮ್ಮರಾಯಪ್ಪ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು: ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಸ್ಥಳ: ಘಟಿಕೋತ್ಸವ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಪ್ರಥಮ ಬಿ.ಎ. ಮತ್ತು ಬಿ.ಕಾಂ. ವಿದ್ಯಾರ್ಥಿನಿಯರಿಗೆ ಅಭಿವಿನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಲ್ಯಾನ್ಸಿ ಡಿಸೋಜಾ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಆಷಾಢ ಶುಕ್ರವಾರಗಳ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, ವಿಶೇಷ ಪೂಜೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಶ್ರೀ ರಾಜರಾಜೇಶ್ವರೀ ಅಲಂಕಾರ, ಸಂಜೆ 6.30ಕ್ಕೆ ವಿದ್ವಾನ್ ಡಾ. ಸಿ.ಎ. ಶ್ರೀಧರ್ ಮತ್ತು ವಿದ್ವಾನ್ ಸಿ.ಎನ್. ಕೇಶವಚಂದ್ರ ಅವರಿಂದ ದ್ವಂದ್ವ ವೇಣು ವಾದನ, ವಿದ್ವಾನ್ ಜಿ.ಎಸ್. ರಾಮಾನುಜಂ– ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ಶ್ರೀ ಶಾರದಾ ಪೀಠಂ, ಮೈಸೂರು ಶಾಖೆ, ವಿದ್ಯಾರಣ್ಯಪುರಂ.

■ **ಅಭಿನವ ಶಂಕರಾಲಯ, ಶಂಕರ ಮಠ, ಫೋರ್ಟ್ ಮೊಹಲ್ಲಾ :** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವ, ಬೆಳಗ್ಗೆ 10ಕ್ಕೆ ಶ್ರೀ ನವಚಂಡಿಕಾ ಹೋಮ, 12ಕ್ಕೆ ಪೂರ್ಣಾಹುತಿ, 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5ಕ್ಕೆ 108 ಮಾತೆಯರಿಂದ ಲಲಿತಾ ಸಹಸ್ರನಾಮ ಕುಂಕುಮಾರ್ಚನೆ, ಸಂಜೆ 6.30 ರಿಂದ ಮ್ಯಾಂಡೊಲಿನ್ ಮತ್ತು ವಯೋಲಿನ್ ಜುಗಲ್‌ಬಂದಿ, ವಿದ್ವಾನ್ ರಕ್ಷಿತ್ ಪ್ರಸಾದ್ ಮತ್ತು ರತ್ನತೇಜ ಹಾಗೂ ವೃಂದದವರಿಂದ, ರಾತ್ರಿ 9.30ಕ್ಕೆ ಪ್ರಾಕಾರೋತ್ಸವ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಸ್ಥಳ: ಅಭಿನವ ಶಂಕರಾಲಯ.

■ **ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಆಷಾಢಮಾಸದ ಕೊನೆಯ ಶುಕ್ರವಾರದ ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಚಾಮುಂಡಿ ಪಾದದ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದ (ಅನ್ನದಾಸೋಹ) ವಿನಿಯೋಗ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ.ಎಂ.ಎನ್.ಚಿಕ್ಕಮಾದು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಸದಾಶಿವ ಪಾಟೀಲ್, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ಸ್ಥೂಲಕಾಯದವರನ್ನು ಕಾಡುವ ಶ್ವಾಸಕೋಶದ ತೊಂದರೆಗಳು, ಪರಿಹಾರ ಮತ್ತು ಚಿಕಿತ್ಸೆ ಕುರಿತು ಶ್ವಾಸಕೋಶ ತಜ್ಞರಾದ ಡಾ. ಆರ್.ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ ಮತ್ತು ಫೆಬ್ರೈಲ್ ಸೀಜರ್ಸ್ ಅಂದರೆ ಅತಿಯಾದ ಜ್ವರದಿಂದ ಕಾಣಿಸಿಕೊಳ್ಳುವ ಫಿಟ್ಸ್ ಕುರಿತು ಮೈಸೂರಿನ ಮಕ್ಕಳ ನರರೋಗ ತಜ್ಞರಾದ ಡಾ.ಅನುಷಾರಾಜ್ ಕೆ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಲ್.ಅರ್ಚನ –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, ಸಖೀ ಸಾಹಿತ್ಯ–ಮಹಿಳಾ ಬರಹಗಾರ ರೊಂದಿಗೆ ಮಾತುಕತೆ, ಭಾಗವಹಿಸುತ್ತಾರೆ–ಡಾ. ಶೈಲಾ ಹೆಚ್.ಎಲ್., ಪ್ರಸ್ತುತಿ–ನೇತ್ರಾ ಕೆ., 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಹಲೋಕೃಷಿರಂಗ –ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಕೃಷಿ ಹಾಗೂ ತೋಟಗಾರಿಕಾ ಬೆಳೆಗಳಲ್ಲಿ ಪೋಷಕಾಂಶಗಳ ಮಹತ್ವ, ಭಾಗವಹಿಸುತ್ತಾರೆ–ಬೆಂಗಳೂರಿನ ಗಾಂಧಿ ಕೃಷಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಬಿ.ಬೋರಯ್ಯ, 7.20 ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, ಸಂಸ್ಕೃತ ಚಿತ್ರಮಂಜರಿ, ಪ್ರಸ್ತುತಿ–ದಿವಾಕರ ಹೆಗಡೆ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ತತ್ವಸಂಚಾರ, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಜನಪರ ಸಾಹಿತ್ಯ ಪರಿಷತ್ತು:** ಪತ್ರಿಕಾ ದಿನಾಚರಣೆ, ಉದ್ಘಾಟನೆ: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಪ್ರಾಂಶುಪಾಲೆ ಪ್ರೊ.ಎನ್.ಭಾರತಿ, ಪ್ರಾಸ್ತಾವಿಕ ಭಾಷಣ: ಮುಕ್ತ ವಿವಿ ಸಹ ಪ್ರಾಧ್ಯಾಪಕ ಡಾ.ಪಿ.ಮಣಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ ರಾಜ್ಯ ಕನ್ನಡ ಮಿತ್ರ ಪ್ರಶಸ್ತಿ, ಪ್ರಶಸ್ತಿ ಪ್ರದಾನ: ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಮಂಜುನಾಥ್, ಅಭಿನಂದನಾ ಭಾಷಣ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಪರಿಷತ್ತಿನ ಗೌರವಾಧ್ಯಕ್ಷ ಡಾ.ಡಿ.ರವಿ, ಪ್ರಧಾನ ಕಾರ್ಯದರ್ಶಿ ಡಾ.ವೆಂಕಟೇಶ್ ಕಬ್ಬಾಳ್, ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ಬೆಂಗಳೂರು ವಿದ್ಯಾ ನೆಕ್ಸ್ಟ್ ಟ್ಯುಟೋರಿಯಲ್ಸ್ ನಿರ್ದೇಶಕಿ ಸಂಧ್ಯಾರಾವ್, ಡಾ.ವಿನೋದಾ, ಮಾರುತಿ ಪ್ರಸನ್ನ, ಸ್ಥಳ: ಎಂಎಂಕೆ–ಎಸ್‌ಡಿಎಂ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಪಬ್ಲಿಕ್ ವೆಲ್‌ಫೇರ್ ಟ್ರಸ್ಟ್ :** 7ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಪೂಜಾ ಮಹೋತ್ಸವ, ಕೇರಳದ ಹರಿಶ್ರೀ ಕಲಾಸಮಿತಿ ತಂಡದವರಿಂದ ಥಾಯಮ್ ಮತ್ತು ಚಂಡೇಮೇಳ, ಗೋಕುಲಂ ಪ್ರಮುಖ ಬೀದಿಗಳಲ್ಲಿ ಅಮ್ಮನವರ ಮೆರವಣಿಗೆ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ, ಸಂಜೆ 5ಕ್ಕೆ.

■ **ಯೇಸುವಿನ ಪವಿತ್ರ ಹೃದಯದ ದೇವಾಲಯ:** ವಾರ್ಷಿಕ ಮಹೋತ್ಸವ, ಸಂಜೆ 5.30ಕ್ಕೆ ವಿಶೇಷ ಪ್ರಬೋಧನೆಯ ಬಲಿಪೂಜೆ–ಆರಾಧನೆ, ವಂ. ಗುರು ಥೋಮಸ್ ಬಾರೋಸ್, ಸ್ಥಳ: ಯೇಸುವಿನ ಪವಿತ್ರ ಹೃದಯದ ದೇವಾಲಯ, ಯಾದವಗಿರಿ.

■ **ನೃತ್ಯ ವಿದ್ಯಾಪೀಠ, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್:** ದಾಸ ಸ್ಮರಣೆ, ಧರ್ಮಬೋಧನೆ ಮಾಲಿಕೆ–10, ಪ್ರವಚನಕಾರರು: ನಿವೃತ್ತ ಕನ್ನಡ ಪ್ರಾಚಾರ್ಯ ಡಾ. ಕೆ. ಅನಂತರಾಮು, ಮುಖ್ಯ ಅತಿಥಿಗಳು: ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ವರ್ಣ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರಾದ ಶ್ರೀಮತಿ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ವ್ಯಸ್ಥಾಪಕರಾದ ಶ್ರೀಮತಿ ಜಿ.ಕೆ. ಕಮಲ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 5.45ಕ್ಕೆ.

■ **ಶ್ರೀರಂಗಪಟ್ಟಣದ ಯಕ್ಷ ಕೌಮುದೀ ಟ್ರಸ್ಟ್, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ಕಲಾಸುರುಚಿ ಮೈಸೂರು, ಗಾನಭಾರತೀ ಮೈಸೂರು ಮತ್ತು ಸಿದ್ಧಿವಿನಾಯಕ ಸ್ವಾಮಿ ದೇವಸ್ಥಾನ ಮೈಸೂರು :** ತಾಳಮದ್ದಳೆ ಪ್ರದರ್ಶನ, ಸೌಗಂಧಿಕಾ ಹರಣ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ.


■ **ಶ್ರೀ ಕೃಷ್ಣ ಗಾನಸಭಾ:** ಶ್ರೀ ಜಯಚಾಮರಾಜ ಒಡೆಯರ್‌ರ 106ನೇ ಜಯಂತ್ಯುತ್ಸವ, ಮುಖ್ಯ ಅತಿಥಿಗಳು: ಕಪ್ಪಡಿ–ಹೊನ್ನಾಯಕನಹಳ್ಳಿ ಕ್ಷೇತ್ರಗಳ ಮಠಾಧಿಪತಿ ಶ್ರೀ ವರ್ಚಸ್ವಿ ಸಿದ್ಧಲಿಂಗರಾಜೇ ಅರಸ್, ಅಧ್ಯಕ್ಷತೆ: ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರ್‌ರಾಜೇ ಅರಸು, ವಿದ್ವಾನ್ ಮಾನಸ ನಯನ ಅವರಿಂದ ಗಾಯನ, ವಿದ್ವಾನ್ ಶಿವಶಂಕರಸ್ವಾಮಿ–ಮೃದಂಗ, ವಿದುಷಿ ಸಿ.ವಿ.ಶ್ರುತಿ–ಪಿಟೀಲು, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಲೋಕಕಲ್ಯಾಣಕ್ಕಾಗಿ ಶ್ರೀಮದ್ ಭಾಗವತ್ ಪ್ರವಚನ, ವಿದ್ವಾನ್ ಶ್ರೀ ಗಣೇಶ್ ಶರ್ಮಾ (ಮೈಸೂರು) ಅವರಿಂದ. ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ರಿಂದ.

ರಾಜಕೀಯವಾಗಿ ಸಂಕಷ್ಟ ಬಂದಾಗಲೆಲ್ಲಾ ಸಿದ್ದರಾಮಯ್ಯ ಸಾಧನಾ ಸಮಾವೇಶ ಮಾಡ್ತಾರೆ

ಮೈಸೂರಲ್ಲಿ ನಾಳೆ ನಡೆಯುವ ಸಾಧನಾ ಸಮಾವೇಶದ ಬಗ್ಗೆ ವಿಶ್ವನಾಥ್ ಟೀಕೆ

●ರಾಹುಲ್ ಗಾಂಧಿಗೆ ನ್ಯಾಯ ಯೋಧ ಬಿರುದು ನೀಡಿರುವ ಬಗ್ಗೆ ಲೇವಡಿ ●ನಾಲ್ಕೈದು ಹಿಂದುಳಿದ ವರ್ಗದ ಹೆಸರು ಬಿಟ್ಟು ಬೇರೆ ಗೊತ್ತಿಲ್ಲ ●ಬಿಜೆಪಿ ಕೆಳ ಸಮುದಾಯಕ್ಕೆ ರಾಜಕೀಯ ಅಧಿಕಾರ ನೀಡಿದೆ



ಹೆಚ್.ವಿಶ್ವನಾಥ್

ಮೈಸೂರು, ಜು.17(ಬಿಎಲ್‌ಯು)– ರಾಜಕೀಯವಾಗಿ ಸಂಕಷ್ಟ ಬಂದಾಗಲೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಧನಾ ಸಮಾವೇಶ ಮಾಡುತ್ತಾ ಬಂದಿದ್ದಾರೆ ಎಂದು, ಜುಲೈ 19 ರಂದು ಮೈಸೂರಿನಲ್ಲಿ ನಡೆಯುತ್ತಿರುವ ಸರ್ಕಾರದ ಸಾಧನಾ ಸಮಾವೇಶವನ್ನು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಟೀಕಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರ ಹಂಚಿಕೆಯ ಸೂತ್ರದಂತೆ ಈಗ ಮುಖ್ಯಮಂತ್ರಿ ಸ್ಥಾನ ಹೋಗುತ್ತದೆ ಎಂದು ಅರಿತಿರುವ ಸಿದ್ದರಾಮಯ್ಯ ಅವರು ತವರು ಜಿಲ್ಲೆಯಲ್ಲಿ ಈಗ ಸಾಧನಾ ಸಮಾವೇಶ ಆಯೋಜಿಸಿದ್ದಾರೆ ಎಂದು ಆರೋಪಿಸಿದರು.

ನಿನ್ನೆ ನಡೆದ ಎಐಸಿಸಿ ಹಿಂದುಳಿದ ವರ್ಗಗಳ ಸಲಹಾ ಸಮಿತಿ ಸಭೆಯಲ್ಲಿ ರಾಹುಲ್ ಗಾಂಧಿಗೆ ನ್ಯಾಯ ಯೋಧ ಎಂಬ ಬಿರುದು ನೀಡಿದ್ದಾರೆ. ಮುಖ್ಯಮಂತ್ರಿ ಸ್ಥಾನ ಹೋಗುತ್ತದೆ ಎಂದು ತಿಳಿದಿರುವ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಗೆ ಚಮಚಾಗಿರಿ ಮಾಡುತ್ತಿದ್ದು, ಕುರ್ಚಿ ಉಳಿಸಿಕೊಳ್ಳಲು ಇನ್ನಿಲ್ಲದ ಕಸರತ್ತುಗಳನ್ನು ನಡೆಸುತ್ತಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ನಾನು ಅಹಿಂದ ಚಾಂಪಿಯನ್ ಎಂದು ತನ್ನ ಬೆನ್ನು ತಾನೇ ತಟ್ಟಿಕೊಳ್ಳುವ ಸಿದ್ದರಾಮಯ್ಯ ಅವರು ಡಿ.ದೇವರಾಜ ಅರಸ್ ಅವರಂತೆ ಸರಿಸಮನಾದ ಆಡಳಿತ ನೀಡಿರುವುದಾಗಿ ಹೇಳುತ್ತಾರೆ. ಆದರೆ ಸಿದ್ದರಾಮಯ್ಯ ಅವರಿಗೆ ಹಿಂದುಳಿದ ವರ್ಗಗಳ ಬಗ್ಗೆ ಯಾವ ಪ್ರೀತಿ ವಿಶ್ವಾಸವೂ ಇಲ್ಲ. ಸಿದ್ದರಾಮಯ್ಯ ಅಷ್ಟೇ ಅಲ್ಲದೆ ಕಾಂಗ್ರೆಸ್ ಪಕ್ಷಕ್ಕೂ ಹಿಂದುಳಿದ ವರ್ಗಗಳ ಬಗ್ಗೆ ಪ್ರೀತಿ ವಾತ್ಸಲ್ಯವಿಲ್ಲ. ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದ ಸಂದರ್ಭದಲ್ಲಿ ಹತ್ತಾರು ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಹಿಂದುಳಿದ ವರ್ಗದ ಕಾಕೇಕರ್ ವರದಿ ಜಾರಿ ಮಾಡಲಿಲ್ಲ ಎಂದು ವಿಶ್ವನಾಥ್ ಕಿಡಿಕಾರಿದರು.

ತರುವಾಯ ಅಧಿಕಾರಕ್ಕೆ ಬಂದ ವಿ.ಪಿ.ಸಿಂಗ್ ಅವರು ಮಂಡಲ್ ಆಯೋಗದ ವರದಿಯನ್ನು ಜಾರಿ ಮಾಡಿದರು. ಹಿಂದುಳಿದವರ ಪರವಾದ ಯಾವುದಾದರೊಂದು ವರದಿಯನ್ನು ಕಾಂಗ್ರೆಸ್ ಜಾರಿ ಮಾಡಿದೆಯೇ ಎಂದು ಪ್ರಶ್ನಿಸಿದರು.

ಅಹಿಂದವನ್ನು ದ್ವಾರಕನಾಥ್ ಹುಟ್ಟು ಹಾಕಿದರು, ಜಾಲಪ್ಪ ಅದನ್ನು ಉತ್ತೇಜಿಸಿದರು. ತರುವಾಯ ಎಲ್ಲರ ಬೋರ್ಡ್ ನೆಲಕ್ಕುರುಳಿಸಿದ ಸಿದ್ದರಾಮಯ್ಯ ಅವರು ತಮ್ಮ ಬೋರ್ಡ್ ನೆಟ್ಟರು ಎಂದು ಸಿದ್ದರಾಮಯ್ಯ ವಿರುದ್ಧ ವಿಶ್ವನಾಥ್ ಅವರು ಟೀಕಾಪ್ರಹಾರ ನಡೆಸಿದರು.

ಬಿಜೆಪಿಯನ್ನು ಜಾತಿವಾದಿ ಪಕ್ಷ ಎಂದು ಟೀಕಿಸುತ್ತಾರೆ. ಆದರೆ ಬಿಜೆಪಿ ವರಿಷ್ಠರು ತೀರ ಕೆಳ ಸಮುದಾಯದವರನ್ನು ವಿಧಾನ ಪರಿಷತ್ ಹಾಗೂ ರಾಜ್ಯಸಭೆಗೆ ನಾಮಕರಣ ಮಾಡಿ ಜಾತ್ಯಾತೀತ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಆದರೆ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನವರಿಗೆ ಹಿಂದುಳಿದ ವರ್ಗಗಳ ನಾಲ್ಕೈದು ಜಾತಿ ಹೆಸರು ಬಿಟ್ಟರೆ ಬೇರೆ ವರ್ಗದವರ ಹೆಸರೇ ಗೊತ್ತಿಲ್ಲ ಎಂದು ದೂರಿದರು. ಕರ್ನಾಟಕದ 11 ವಿಶ್ವವಿದ್ಯಾನಿಲಯಗಳಲ್ಲಿ ಎಡಗೈ ಸಮುದಾಯದ ಒಬ್ಬರನ್ನು ಕುಲಪತಿಯಾಗಿ ಮಾಡಿರುವುದನ್ನು ಬಿಟ್ಟರೆ, ಹಿಂದುಳಿದ ವರ್ಗದ ಯಾರಿಗೂ ಪ್ರಾತಿನಿಧ್ಯ ನೀಡಿಲ್ಲ ಎಂದು ಹೇಳಿದರು.

ಕರ್ನಾಟಕಕ್ಕೆ ಏಳೂವರೆ ಲಕ್ಷ ಕೋಟಿ ಸಾಲದ ಹೊರೆ

ಕರ್ನಾಟಕಕ್ಕೆ ಈಗಾಗಲೇ ಏಳೂವರೆ ಲಕ್ಷ ಕೋಟಿ ಸಾಲದ ಹೊರೆ ಹೊರೆಸಿದ್ದು, ಮತ್ತೆಷ್ಟು ಸಾಲ ಮಾಡುತ್ತಾರೊ ತಿಳಿಯದು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆತಂಕ ವ್ಯಕ್ತಪಡಿಸಿದರು.

ಅವೈಜ್ಞಾನಿಕವಾದ ಗ್ಯಾರಂಟಿ ಯೋಜನೆ ಜಾರಿ ಮಾಡಿ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಕರ್ನಾಟಕದ ನೀರಾವರಿ ಯೋಜನೆಯನ್ನು ಜಾರಿ ಮಾಡಲು 12 ಸಾವಿರ ಕೋಟಿ ನೀಡುವಂತೆ ರಾಜ್ಯ ಸಚಿವರೊಬ್ಬರು ಕೇಂದ್ರ ಸರ್ಕಾರವನ್ನು ಗೋಗರೆಯುತ್ತಿದ್ದಾರೆ. ಇದು ರಾಜ್ಯದ ಆರ್ಥಿಕ ಸ್ಥಿತಿ–ಗತಿಯನ್ನು ತೋರಿಸುತ್ತದೆ ಎಂದರು.

ವಿವೇಚನೆ ಇಲ್ಲದ ಸಿದ್ದರಾಮಯ್ಯ ಕರ್ನಾಟಕವನ್ನು ಈ ಸ್ಥಿತಿಗೆ ತಂದಿದ್ದಾರೆ. ಮುಂದೆ ರಾಜ್ಯಕ್ಕೆ ಯಾವ ಗಂಡಾಂತರ ಕಾದಿದೆಯೊ ದೇವರೆ ಬಲ್ಲ.

ಸಿದ್ದರಾಮಯ್ಯ ಅವರಿಗೆ ಸಂವಿಧಾನ ಸಂರಕ್ಷಕ ಎಂಬ ಬಿರುದು ನೀಡಲು ನಿರ್ಧರಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್ ಅವರು, ಬಾಯಿಗೆ ಬಂದಂತೆ ಮಾತನಾಡುವ, ಏಕವಚನದಲ್ಲಿ ಎಲ್ಲರನ್ನು ನಿಂದಿಸುವ ಸಿದ್ದರಾಮಯ್ಯ ಸಂವಿಧಾನ ವಿರೋಧಿ ಎಂದು ಟೀಕಿಸಿದರು.

ಸಾಧನೆ ಸಮಾವೇಶವಲ್ಲ; ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

●ಮೈಸೂರಲ್ಲಿ ನಡೆಯುವ ಸಾಧನಾ ಸಮಾವೇಶ ಸಂಬಂಧ ಮೈಸೂರು ಬಿಜೆಪಿ ವ್ಯಂಗ್ಯ
●ಸಾಧನೆಯನ್ನೇ ಮಾಡದೇ ಬರೀ ಅಧಿಕಾರ ಉಳಿಸಿಕೊಳ್ಳಲು ನಡೆಸುತ್ತಿರುವ ಕಸರತ್ತು



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಗೋಷ್ಠಿಯಲ್ಲಿ ಮೈಸೂರು ನಗರ ವಕ್ತಾರ ಎಂ.ಎ.ಮೋಹನ್ ಮಾತನಾಡಿದರು. ನಗರಾಧ್ಯಕ್ಷ ಎಲ್.ನಾಗೇಂದ್ರ ಇತರರಿದ್ದರು.

> "ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾವಾಗೆಲ್ಲಾ ಸಂಕಷ್ಟ ಎದುರಾಗುತ್ತದೋ, ಅವರ ಖುರ್ಚಿಗೆ ಪೈಪೋಟಿ ಬರುತ್ತದೋ ಅವಾಗೆಲ್ಲಾ ಸಮಾವೇಶಗಳು ನಡೆಯುತ್ತವೆ. ಕಳೆದ ಮೇ ತಿಂಗಳಿಗೆ ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದೆ. ಆಗಲೇ ಮಾಡಬೇಕಿದ್ದ ಸಮಾವೇಶವನ್ನು ಈಗ ಯಾಕೆ ಮಾಡುತ್ತಿದ್ದಾರೆ. ಸಮಾವೇಶದ ಹೆಸರಿನಲ್ಲಿ ಶಕ್ತಿ ಪ್ರದರ್ಶನ ತೋರಿಸಲು ರಾಜ್ಯದ ಜನತೆಯ ತೆರಿಗೆ ಹಣವನ್ನು ಹಾಳು ಮಾಡುತ್ತಿದ್ದಾರೆ. ಸಮಾವೇಶಕ್ಕೆ ಖರ್ಚಾಗುವ ಹಣವನ್ನು ಇತರೆ ಸದುದ್ದೇಶಕ್ಕೆ ಬಳಸಬಹುದಾಗಿತ್ತು.
>
> –ಎಂ.ಎ.ಮೋಹನ್, ಬಿಜೆಪಿ ಮೈಸೂರು ನಗರ ವಕ್ತಾರ

ಮೈಸೂರು, ಜು.17(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ(ಜು.19) ಸಿದ್ದರಾಮಯ್ಯ ನೇತೃತ್ವದ 30–30 ಸಮ್ಮಿಶ್ರ ಸರ್ಕಾರ ನಡೆಸುತ್ತಿರುವುದು ಸಾಧನೆಯೇ ಇಲ್ಲದ, ಖುರ್ಚಿ ಉಳಿಸಿಕೊಳ್ಳಲು ಬರೀ ಶಕ್ತಿ ಪ್ರದರ್ಶನದ ಸಾಧನಾ ಸಮಾವೇಶ ಎಂದು ಬಿಜೆಪಿ ಮೈಸೂರು ನಗರ ವಕ್ತಾರ ಎಂ.ಎ.ಮೋಹನ್ ಲೇವಡಿ ಮಾಡಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ಸಿಎಂ, ಡಿಸಿಎಂ ಹಾಗೂ ಸ್ವಯಂಘೋಷಿತ ನಾಯಕರ ಬಣಗಳಿಂದ ರೂಪುಗೊಂಡಿರುವುದರಿಂದ ಇದೊಂದು 30–30 ಸಮ್ಮಿಶ್ರ ಸರ್ಕಾರವಾಗಿದೆ. ಈ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಖುರ್ಚಿ ಉಳಿಸಿಕೊಂಡಿರುವುದೇ ಅವರ ದೊಡ್ಡ ಸಾಧನೆಯಾಗಿದೆ. ಅವರ ಖುರ್ಚಿಗೆ ಯಾವ್ಯಾವಾಗ ಸಂಕಷ್ಟ ಎದುರಾಗುತ್ತೋ ಅವಾಗೆಲ್ಲಾ ಇಂತಹ ಸಮಾವೇಶಗಳನ್ನು ಮಾಡುತ್ತಾರೆ ಎಂದು ವ್ಯಂಗ್ಯವಾಡಿದರು.

ಅಧಿಕಾರಕ್ಕೆ ಬಂದ ಮಾರನೇ ದಿನವೇ ಪಂಚ ಗ್ಯಾರಂಟಿಗಳನ್ನು ಘೋಷಣೆ ಮಾಡಿದರೆ ಹೊರತು ಜಾರಿಗೊಳಿಸಲಿಲ್ಲ. ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಘೋಷಿಸಿ, ನಷ್ಟ ಸರಿದೂಗಿಸಲು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಿಸಿದ್ದಾರೆ. ಅನ್ನಭಾಗ್ಯ ಯೋಜನೆಯಡಿ 15 ಕೆಜಿ ಅಕ್ಕಿ ಕೊಡುತ್ತೇವೆ ಎಂದೇಳಿ ಕೇಂದ್ರ ಸರ್ಕಾರ ನೀಡಿದ ಅಕ್ಕಿಯನ್ನೇ ಕೊಡುತ್ತಿರುವುದು ಈ ಸರ್ಕಾರದ ಸಾಧನೆ ಎಂದರು.

ಹಾಗೆಯೇ ಗೃಹಲಕ್ಷ್ಮಿ ಯೋಜನೆಯಡಿ ಪ್ರತೀ ತಿಂಗಳು ಮನೆ ಯಜಮಾನಿಗೆ 2 ಸಾವಿರ ರೂ.ಗಳನ್ನು ನೀಡದೆ ತಮಗೆ ಅಗತ್ಯವಿರುವಾಗ, ಚುನಾವಣೆ ಸಂದರ್ಭಗಳಲ್ಲಿ ಹಣ ಕೊಟ್ಟು ಮತದಾರರನ್ನು ವಂಚಿಸುತ್ತಿರುವುದೇ ಇವರ ಸಾಧನೆ. 200 ಯೂನಿಟ್ ವಿದ್ಯುತ್ ನನಗೂ ಫ್ರೀ.. ನಿನಗೂ ಫ್ರೀ ಎಂದೇಳಿ, 201 ಯೂನಿಟ್ ವಿದ್ಯುತ್ ಬಳಕೆ ಮಾಡಿದವರಿಂದ ಪೂರ್ತಿ ಹಣ ವಸೂಲಿ ಮಾಡುತ್ತಿರುವುದು ಹಾಗೂ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುತ್ತಿರುವವರನ್ನು, ಗೃಹಜ್ಯೋತಿ ಯೋಜನೆಯಿಂದ ಹೊರಗಿಟ್ಟಿರುವುದೇ ಇವರ ಸಾಧನೆ. ಯಾವ ಪುರುಷಾರ್ಥಕ್ಕಾಗಿ ಈ ಸಾಧನಾ ಸಮಾವೇಶ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಯುವನಿಧಿ ಯೋಜನೆಯಡಿ ನಿರುದ್ಯೋಗಿ ಯುವಕ–ಯುವತಿಯರಿಗೆ ಸಹಾಯಧನ ನೀಡುವುದಾಗಿ ಘೋಷಿಸಿದರೆ ಹೊರತು ಯಾವೊಬ್ಬ ನಿರುದ್ಯೋಗಿಗೂ ಸಹಾಯಧನ ನೀಡಿಲ್ಲ. ಸ್ಟ್ಯಾಂಪ್ ಡ್ಯೂಟಿ ಏರಿಕೆ, ನೀರು, ಹಾಲು ಮತ್ತು ಮದ್ಯದ ದರ ಏರಿಕೆ, ಆರ್‌ಸಿಬಿ ವಿಜಯೋತ್ಸವದ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತಕ್ಕೆ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದು, ಮುಡಾ ಹಗರಣದಲ್ಲಿ ಭಾಗಿಯಾಗಿದ್ದ ಭ್ರಷ್ಟ ಅಧಿಕಾರಿಗಳಾದ ನಟೇಶ್ ಮತ್ತು ದಿನೇಶ್‌ಕುಮಾರ್ ಅವರನ್ನು ರಕ್ಷಣೆ ಮಾಡಿರುವುದೇ ಈ ರಾಜ್ಯ ಸರ್ಕಾರದ ಸಾಧನೆ ಎಂದು ಗುಡುಗಿದರು.

ಅಭಿವೃದ್ಧಿ ಹೆಸರಿನಲ್ಲಿ ಲೂಟಿ: ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ನಾನು ಶಾಸಕನಾಗಿದ್ದ ಅವಧಿಯಲ್ಲಿ ಅಭಿವೃದ್ಧಿ ಮಾಡಿರುವ ರಸ್ತೆಗಳನ್ನೇ ಕಿತ್ತುಹಾಕಿ ಮತ್ತೊಮ್ಮೆ ಅಭಿವೃದ್ಧಿ ಮಾಡಲು ಮುಂದಾಗಿದ್ದಾರೆ. ಇದರರ್ಥ ಹಣ ಲೂಟಿ ಅಲ್ಲದೇ ಮತ್ತೇನು. ಗುಂಡಿ ಬಿದ್ದಿರುವ ಎಷ್ಟೋ ರಸ್ತೆಗಳು ಇರುವಾಗ ಚೆನ್ನಾಗಿರುವ ರಸ್ತೆಗಳನ್ನು ಅಭಿವೃದ್ಧಿ ಮಾಡುವುದೇಕೆ ಎಂದು ಅನುಮಾನ ವ್ಯಕ್ತಪಡಿಸಿದರು. ಗೋಷ್ಠಿಯಲ್ಲಿ ಬಿಜೆಪಿ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಬಿ.ಎಂ. ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

ಇಂದು ಮೈಸೂರಿಗೆ ಸಿದ್ದರಾಮಯ್ಯ



ಮೈಸೂರು,ಜು.17–ಮುಖ್ಯಮಂತ್ರಿ ಸಿದ್ದರಾಮಯ್ಯ ಜು.18ರಂದು ಮೈಸೂರಿಗೆ ಭೇಟಿ ನೀಡಲಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ಮೈಸೂರು ನಗರ (ಜಿಲ್ಲಾ) ಯುವ ಕಾಂಗ್ರೆಸ್ ಸಮಿತಿಗೆ ನೂತನವಾಗಿ ಆಯ್ಕೆಗೊಂಡಿರುವ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಪ್ರತಿಜ್ಞಾವಿಧಿ ಬೋಧಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಕರ್ನಾಟಕ ಸರ್ಕಾರ ಆಡಳಿತ ತರಬೇತಿ ಸಂಸ್ಥೆ, ಮೈಸೂರು ಮತ್ತು ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ ಕರ್ನಾಟಕ ಪ್ರಾದೇಶಿಕ ಶಾಖೆ ಸಹಯೋಗದೊಂದಿಗೆ ಆಯೋಜಿಸಿರುವ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸುವುದು. ಒಟ್ಟು ಜಿಲ್ಲಾ ಉತ್ಪನ್ನವನ್ನು ಹೆಚ್ಚಿಸುವುದು ಕುರಿತು ಕೆಎಎಸ್ ತಾಲೂಕು ನೋಡಲ್ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಡಾ. ಕೆಬಿಜಿ, ಡಾ.ಸರೋಜಾದೇವಿ ಅವರಿಗೆ ಶ್ರದ್ಧಾಂಜಲಿ



ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಮತ್ತು ಹಿರಿಯ ನಟಿ ಡಾ.ಸರೋಜಾದೇವಿ ಅವರಿಗೆ ಮಿಲ್ಕ್ ಮಂಜು ನೇತೃತ್ವದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂ.ಗೂಡು ರೈಲ್ವೆ ಮೇಲ್ಸೇತುವೆಗೆ ನಾಮಕರಣ ವಿಚಾರದಲ್ಲಿ ಗೊಂದಲ ಸೃಷ್ಟಿಸುವುದು ಬೇಡ

ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ಸಂಚಾಲಕ ಭರತ್ ರಾಮಸ್ವಾಮಿ ಮನವಿ



ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಹಾಗೂ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿಗಳು ಸಮಾಲೋಚನೆ ನಡೆಸಿದರು.

ಮೈಸೂರು, ಜು.17– ನಂಜನಗೂಡು ರೈಲ್ವೆ ಮೇಲ್ಸೇತುವೆಗೆ ನಾಮಕರಣ ವಿಚಾರದಲ್ಲಿ ದಿವಂಗತ ನಾಯಕರುಗಳಾದ ವಿ.ಶ್ರೀನಿವಾಸಪ್ರಸಾದ್ ಹಾಗೂ ಆರ್.ಧ್ರುವನಾರಾಯಣ್ ಅವರ ಅಭಿಮಾನಿಗಳು ಯಾವುದೇ ಹೇಳಿಕೆ ನೀಡದಂತೆ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ಸಂಚಾಲಕ ಭರತ್ ರಾಮಸ್ವಾಮಿ ಮನವಿ ಮಾಡಿದ್ದಾರೆ.

ರೈಲ್ವೆ ಮೇಲ್ಸೇತುವೆಗೆ ಹೆಸರಿಡುವ ವಿಚಾರದಲ್ಲಿ ವಿ.ಶ್ರೀನಿವಾಸಪ್ರಸಾದ್ ಹಾಗೂ ಆರ್.ಧ್ರುವನಾರಾಯಣ್ ಅಭಿಮಾನಿಗಳು ಗೊಂದಲಕ್ಕೀಡಾಗಿರುವ ಹಿನ್ನೆಲೆಯಲ್ಲಿ ನಂಜನಗೂಡು ಶಾಸಕರೂ ಆದ ಧ್ರುವನಾರಾಯಣ್ ಅವರ ಪುತ್ರ ದರ್ಶನ್, ವಿ.ಶ್ರೀನಿವಾಸಪ್ರಸಾದ್ ಅವರ ಕುಟುಂಬದವರು ಹಾಗೂ ಅಭಿಮಾನಿಗಳೊಂದಿಗೆ ಸಮಾಲೋಚನೆ ನಡೆಸಿರುವುದಾಗಿ ಭರತ್ ರಾಮಸ್ವಾಮಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಈ ಗೊಂದಲಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರ ಪುತ್ರಿ ಶ್ರೀಮತಿ ಪ್ರತಿಮಾ ಪ್ರಸಾದ್, ವಿ.ಶ್ರೀನಿವಾಸಪ್ರಸಾದ್ ಅವರ ಅಭಿಮಾನಿ ಬಳಗದ ಅಧ್ಯಕ್ಷ ಪಿ.ನಂದಕುಮಾರ್, ಸಂಚಾಲಕನಾದ ನಾನು (ಭರತ್ ರಾಮಸ್ವಾಮಿ), ಉಪಾಧ್ಯಕ್ಷರೂ ಆದ ಮುಡಾ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್ ಹಾಗೂ ಖಜಾಂಚಿ ಶಾಂತರಾಮ್ ಶೆಟ್ಟಿ ಅವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದರು. ಪ್ರಸಾದ್ ಅವರ ಬೆಂಗಳೂರು ನಿವಾಸಕ್ಕೆ ಭೇಟಿ ನೀಡಿ, ನಮ್ಮೊಂದಿಗೆ ಮುಕ್ತವಾಗಿ ಚರ್ಚಿಸಿದ ದರ್ಶನ್ ಅವರ ನಡೆ ಅಭಿನಂದನಾರ್ಹ ಎಂದು ಹೇಳಿದ್ದಾರೆ.

ಅತ್ಯುನ್ನತ ನಾಯಕರಾಗಿದ್ದ ದಿವಂಗತ ವಿ.ಶ್ರೀನಿವಾಸಪ್ರಸಾದ್ ಹಾಗೂ ಆರ್.ಧ್ರುವನಾರಾಯಣ್ ಅವರು ಜೀವಿತಾವಧಿಯಲ್ಲಿ ಸಮಾಜಕ್ಕೆ ತಮ್ಮದೇ ಆದಂತಹ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಇವರಿಬ್ಬರೂ ನಿಜವಾದ ಜನನಾಯಕರಾಗಿ ಸೇವೆ ಸಲ್ಲಿಸುವ ಮೂಲಕ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಇವರಿಬ್ಬರಲ್ಲಿ ಯಾರ ಹೆಸರನ್ನು ರೈಲ್ವೆ ಮೇಲ್ಸೇತುವೆಗೆ ನಾಮಕರಣ ಮಾಡಬೇಕೆಂಬುದು ಸೂಕ್ಷ್ಮ ವಿಚಾರವಾಗಿದ್ದು, ಸೂಕ್ತ ಸಮಯದಲ್ಲಿ ಸರಿಯಾದ ತೀರ್ಮಾನ ಕೈಗೊಳ್ಳುವರೆಂಬ ವಿಶ್ವಾಸವಿದೆ. ಆದ್ದರಿಂದ ಈ ವಿಚಾರದಲ್ಲಿ ಗೊಂದಲಕ್ಕೀಡಾಗಿ ಯಾರೂ ಕೂಡ ಯಾವುದೇ ಹೇಳಿಕೆ ನೀಡಬಾರದು ಎಂದು ಮನವಿ ಮಾಡುವುದಾಗಿ ತಿಳಿಸಿದ್ದಾರೆ.

ಭಾರಿ ಮಳೆಗೆ ಗುಡ್ಡ ಕುಸಿತ: ಮಹಿಳೆ ಸಾವು, ಅಮರನಾಥ ಯಾತ್ರೆ ಸ್ಥಗಿತ



ಜಮ್ಮು: ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರಿ ಮಳೆಯಿಂದಾಗಿ ಅಮರನಾಥ ಯಾತ್ರೆಗೆ ತೆರಳುವ ಮಾರ್ಗದಲ್ಲಿ ಮಣ್ಣಿನ ಗುಡ್ಡ ಕುಸಿತ ಸಂಭವಿಸಿದ್ದು, ಇದರಿಂದಾಗಿ ಅಮರನಾಥ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ. ಗಂಡೇರ್ಬಾಲ್ ಜಿಲ್ಲೆಯ ಬಾಲ್ಟಾಲ್ ಯಾತ್ರೆಯ ಬಾಲ್ಟಾಲ್ ಮಾರ್ಗದಲ್ಲಿ ನೀರಿನ ಜೊತೆ ಕಲ್ಲು ಬಂಡೆಗಳು ಉರುಳಿ ಬಂದಿದ್ದರಿಂದ ಮಹಿಳೆಯೊಬ್ಬರು ಸಾವನ್ನಪ್ಪಿದ್ದು, ಇತರ ಮೂವರು ಗಾಯಗೊಂಡಿದ್ದಾರೆ.

ಸ್ಥಳದಲ್ಲಿ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳದಲ್ಲಿರುವ ಯಾತ್ರಿಗಳ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಯಾತ್ರೆಯ ಮಾರ್ಗಗಳ ದುರಸ್ತಿ ಕಾರ್ಯ ಮುಗಿಯುವವರೆಗೂ ಯಾತ್ರೆಯನ್ನು ಸ್ಥಗಿತಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ನಾಳೆಯಿಂದ 2 ದಿನ 'ಸ್ಫೂರ್ತಿ ಉತ್ಸವ'

ಮೈಸೂರು, ಜು.17(ಜಿಎ)–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆಯ ಮಹಿಳಾ ಘಟಕವಾದ ಸ್ಫೂರ್ತಿ ವತಿಯಿಂದ ಜು.19 ಮತ್ತು 20 ರಂದು ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕನ್ವೆನ್ಷನ್ ಹಾಲ್‌ನಲ್ಲಿ ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ 'ಸ್ಫೂರ್ತಿ ಉತ್ಸವ' ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷೆ ಕವಿತಾ ಗುರುರಾಜ್ ಈ ವಿಷಯ ತಿಳಿಸಿ, ಕಳೆದ 9 ವರ್ಷಗಳಿಂದ 'ಸ್ಫೂರ್ತಿ ಉತ್ಸವ' ನಡೆಸಲಾಗುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವರ್ಷದಿಂದ ವರ್ಷಕ್ಕೆ ಮಳಿಗೆಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಒಟ್ಟು 51 ಮಳಿಗೆ ಇರಲಿದ್ದು, ಇದರಲ್ಲಿ 8 ಮಳಿಗೆ ಆಹಾರದ್ದಾಗಿವೆ. ಮಹಿಳಾ ಉದ್ಯಮಿಗಳ ನಡುವೆ ಸಂಪರ್ಕ, ಉತ್ಪಾದನೆಗೆ ಉತ್ತೇಜನ ನೀಡುವ ಉದ್ದೇಶದ್ದಾಗಿದ್ದು, ಜು.19ರ ಬೆಳಗ್ಗೆ 9.30ಕ್ಕೆ ದಿಯಾ ಸಿಲ್ಕ್ ವ್ಯವಸ್ಥಾಪಕ ನಿರ್ದೇಶಕಿ ನಮ್ರತಾ ಶೆಣೈ ಉದ್ಘಾಟಿಸುವರು. ಬಿಲ್ಡರ್ಸ್ ಅಸೋಸಿಯೇಷನ್ ಮೈಸೂರು ಶಾಖೆ ಅಧ್ಯಕ್ಷ ವಿ.ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಉತ್ಸವದಲ್ಲಿ ಆಭರಣ, ಉಡುಪು, ಫ್ಯಾಷನ್ ಮತ್ತು ಸೌಂದರ್ಯ ಪರಿಕರ, ಗೃಹಾಲಂಕಾರ, ಕುಂಬಾರಿಕೆ, ಹಸಿರು ಪರಿಕಲ್ಪನೆ, ಉಡುಗೊರೆ ಕಲಾಕೃತಿ, ಆಹಾರ ಉತ್ಪನ್ನಗಳ ಮಳಿಗೆ, ದೇಸಿ ಆಟಗಳು ಇರಲಿವೆ. ಎರಡೂ ದಿನ ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ತೆರೆದಿರಲಿದ್ದು, ಉಚಿತ ಪ್ರವೇಶ ಎಂದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ರಮ್ಯಾ ಲೋಕೇಶ್, ಶಾಂತಿ ಭಾರದ್ವಾಜ್, ವೀಣಾ ಅಶೋಕ್, ರೇಖಾ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ವರ್ಧಂತ್ಯುತ್ಸವ



ಮೈಸೂರಿನ ಕೇರ್ಗಳ್ಳಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಚಾಮುಂಡೇಶ್ವರಿ ವರ್ಧಂತೋತ್ಸವವನ್ನು ಆಚರಿಸಲಾಯಿತು. ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಸವೇಗೌಡ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು, ಪ್ರಸಾದ ಸ್ವೀಕರಿಸಿದರು.

ಅರ್ಜಿ ಆಹ್ವಾನ

ಮೈಸೂರು,ಜು.17– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯವಾದಿ ವೃತ್ತಿ ಪ್ರಾಯೋಗಿಕ ತರಬೇತಿ ಕಾರ್ಯಕ್ರಮದಡಿ ಶಿಷ್ಯವೇತನಕ್ಕಾಗಿ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಕಾನೂನು ಪದವಿ ಪಡೆದ ಎರಡು ವರ್ಷದೊಳಗಾಗಿ ಅರ್ಜಿ ಸಲ್ಲಿಸಬೇಕು, ಅಭ್ಯರ್ಥಿಯ ವಯಸ್ಸು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಗರಿಷ್ಠ 40 ವರ್ಷದೊಳಗಿರಬೇಕು.

ನಿಗಮ–ಮಂಡಳಿಗಳಲ್ಲಿ ಅಲ್ಪಸಂಖ್ಯಾತ ಮುಖಂಡರಿಗೆ ಅವಕಾಶಕ್ಕೆ ಮನವಿ



ಮೈಸೂರು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಮನವಿ ಸಲ್ಲಿಸುತ್ತಿರುವುದು

ಮೈಸೂರು, ಜು.17(ಎಂಕೆ)– ಸರ್ಕಾರದ ನಿಗಮ–ಮಂಡಳಿಗಳು ಹಾಗೂ ಬೋರ್ಡ್‌ಗಳ ನೇಮಕಾತಿಯಲ್ಲಿ ಮೈಸೂರು ಗ್ರಾಮಾಂತರ ಭಾಗದ ಅಲ್ಪಸಂಖ್ಯಾತ ಮುಖಂಡರಿಗೆ ಅವಕಾಶ ನೀಡುವಂತೆ ಮೈಸೂರು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕ ಮನವಿ ಮಾಡಲಾಯಿತು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಅವರನ್ನು ಭೇಟಿ ಮಾಡಿದ ಘಟಕದ ಪದಾಧಿಕಾರಿಗಳು, ಸರ್ಕಾರದ ನಿಗಮ–ಮಂಡಳಿಗಳು ಹಾಗೂ ಬೋರ್ಡ್‌ಗಳಲ್ಲಿ ಅಲ್ಪಸಂಖ್ಯಾತ ಮುಖಂಡರಿಗೂ ಅವಕಾಶ ನೀಡುವಂತೆ ಮನವಿ ಮಾಡಿದರು.

ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷರಾದ ಮೋಸಿನ್ ಖಾನ್, ಉಪಾಧ್ಯಕ್ಷ ಅಲ್ತಾಫ್ ಪಾಷಾ, ಕೋಟೆ ಬ್ಲಾಕ್ ಅಧ್ಯಕ್ಷ ಶಫಿ, ಸರಗೂರು ಬ್ಲಾಕ್ ಅಧ್ಯಕ್ಷ ಅಮೀರ್ ಸುಹೇಲ್, ಪ್ರಧಾನ ಕಾರ್ಯದರ್ಶಿ ರಫೀಕ್ ಪಾಷಾ ಕಡಕೊಳ, ಮುಖಂಡರಾದ ಆರೀಫ್ ಪಾಷಾ, ನಾಸಿರ್ ಖಾನ್, ಅಜ್ಗರ್ ಪಾಷಾ, ಬಾಬು ಹುಲ್ಲಹಳ್ಳಿ, ಸಾಲಿಗ್ರಾಮ ಶೌಕತ್ ಪಾಷಾ, ತಹಿರಿಮ್ ಮತ್ತಿತರರಿದ್ದರು.

ಜು.20ರಂದು ವಾರ್ಷಿಕ ಮಹಾಸಭೆ

ಮೈಸೂರು, ಜು. 17–ಕೇಂದ್ರ ಸರ್ಕಾರಿ ಪಿಂಚಣಿದಾರರ ಅಸೋಸಿಯೇಷನ್‌ನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಜು.20ರಂದು ಬೆಳಗ್ಗೆ 10.30ಕ್ಕೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪಾಠಶಾಲೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಪಿ.ಎಂ.ಪರಮೇಶ್ವರಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಟ ದರ್ಶನ್‌ಗೆ ಜಾಮೀನು ನೀಡುವಾಗ ಹೈಕೋರ್ಟ್ ತನ್ನ ವಿವೇಚನೆ ಬಳಸಿಲ್ಲ

●ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಪರ್ದಿವಾಲಾ ಅಭಿಪ್ರಾಯ ●ಜು.22ಕ್ಕೆ ಅಂತಿಮ ವಿಚಾರಣೆ, ಆದೇಶ




ನವದೆಹಲಿ, ಜು.17– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದು ಶೂಟಿಂಗ್, ವಿದೇಶ ಪ್ರವಾಸದಲ್ಲಿ ಜಾಲಿ ಮೂಡ್‌ನಲ್ಲಿದ್ದ ನಟ ದರ್ಶನ್‌ಗೆ ಸುಪ್ರೀಂಕೋರ್ಟ್ ಶಾಕ್ ಕೊಟ್ಟಿದೆ. ದರ್ಶನ್‌ಗೆ ಜಾಮೀನು ನೀಡುವಾಗ ಹೈಕೋರ್ಟ್ ತನ್ನ ವಿವೇಚನೆ ಬಳಸಿಲ್ಲ ಎಂದಿರುವ ನ್ಯಾಯಮೂರ್ತಿಗಳು, ಮಂಗಳವಾರ (ಜು.22) ಅಂತಿಮ ವಿಚಾರಣೆ ನಡೆಸಿ ಅಂದೇ ಆದೇಶ ನೀಡುವುದಾಗಿ ಹೇಳಿದ್ದು, ಅಂದು ದರ್ಶನ್, ಪವಿತ್ರಾಗೌಡ ಸೇರಿ ಏಳು ಮಂದಿಯ ಭವಿಷ್ಯ ನಿರ್ಧಾರವಾಗಲಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್‌ಗೆ ಹೈಕೋರ್ಟ್ ನೀಡಿರುವ ಜಾಮೀನು ಪ್ರಶ್ನಿಸಿ ಬೆಂಗಳೂರು ಪೊಲೀಸರು ಸಲ್ಲಿಕೆ ಮಾಡಿರುವ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ನ್ಯಾ.ಪರ್ದಿವಾಲಾ ನೇತೃತ್ವದ ದ್ವಿ–ಸದಸ್ಯ ಪೀಠ ಹೈಕೋರ್ಟ್ ಆದೇಶದ ಬಗ್ಗೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ವಿಚಾರಣೆ ವೇಳೆ ಹೈಕೋರ್ಟ್ ಆದೇಶಕ್ಕೆ ನ್ಯಾ. ಪರ್ದಿವಾಲ ಅವರು, ಪ್ರಾಮಾಣಿಕವಾಗಿ ಹೇಳಬೇಕೆಂದರೆ ಹೈಕೋರ್ಟ್ ತನ್ನ ವಿವೇಚನೆಯನ್ನು ಸರಿಯಾಗಿ ಬಳಸಿಲ್ಲ ಎಂದು ನಾವು ಭಾವಿಸುತ್ತೇವೆ. ಹೈಕೋರ್ಟ್ ಆದೇಶವನ್ನು ಹೇಗೆ ನಿರ್ದೇಶಿಸಿದೆ ಎಂಬುದನ್ನು ನೀವು ನೋಡಿರಬೇಕು. ನೀವು ಏನು ಹೇಳುತ್ತೀರಿ ಎಂದು ದರ್ಶನ್ ಪರ ವಕೀಲ ಕಪಿಲ್ ಸಿಬಲ್ ಅವರನ್ನು ಪ್ರಶ್ನಿಸಿದರು.

ಇಂದು ದರ್ಶನ್ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಲು ಮುಂದಾಗಿದ್ದರು. ಈ ವೇಳೆ ಮಧ್ಯಪ್ರವೇಶ ಮಾಡಿದ ನ್ಯಾ. ಪರ್ದಿವಾಲಾ ಮಂಗಳವಾರ ಅಂತಿಮ ವಾದ ಮಂಡಿಸಿ, ಅಂದೇ ಈ ಬಗ್ಗೆ ತೀರ್ಪು ನೀಡಲಾಗುವುದು ಎಂದು ಹೇಳಿದರು. ಹೀಗಾಗಿ ಅಂದು ದರ್ಶನ್ ಜಾಮೀನು ಭವಿಷ್ಯ ನಿರ್ಧಾರವಾಗಲಿದೆ.

ಇಡಿಯಿಂದ ಮಾಲೂರು ಶಾಸಕ ಕೆ.ವೈ.ನಂಜೇಗೌಡರ 1.32 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು



ಬೆಂಗಳೂರು, ಜು.17– ಜಾರಿ ನಿರ್ದೇಶನಾಲಯ ಬೆಂಗಳೂರು ವಲಯ ಕಚೇರಿ ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹಾಗೂ ಇತರರಿಗೆ ಸೇರಿದ ಒಟ್ಟು 1.32 ಕೋಟಿ ಮೌಲ್ಯದ ಚರಾಸ್ತಿ ಹಾಗೂ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿದೆ. 2023ರ ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ಲಿಮಿಟೆಡ್ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಪಟ್ಟಿದ್ದು, ಜುಲೈ 16, 2025ರಂದು ಅಧಿಕೃತವಾಗಿ ಈ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ಇಡಿ ಅಧಿಕೃತ ಟ್ವೀಟ್‌ನಲ್ಲಿ, 'ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ. ನಂಜೇಗೌಡ ಮತ್ತು ಇತರರಿಗೆ ಸೇರಿದ 1.32 ಕೋಟಿ ಮೌಲ್ಯದ ಸ್ಥಿರ ಮತ್ತು ಚರಾಸ್ತಿಗಳನ್ನು ಮುಟ್ಟುಗೋಲು ಹಾಕಲಾಗಿದೆ' ಎಂದು ಮಾಹಿತಿ ನೀಡಲಾಗಿದೆ.

ಮೌಂಟೆಡ್ ಕಂಪನಿಯ ಕಮಾಂಡೆಂಟ್ ಶೈಲೇಂದ್ರ ಕಚೇರಿ ಬಳಿ ನಿಗೂಢ ಕಾರು!

ತನಿಖೆಗೆ ಆಗ್ರಹಿಸಿ ಪೊಲೀಸ್ ಆಯುಕ್ತರಿಗೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಪತ್ರ



ಮೈಸೂರು, ಜು.17(ಬಿಎಲ್‌ಯು)– ಮೈಸೂರಿನ ಕೆಎಆರ್‌ಪಿ ಮೌಂಟೆಡ್ ಕಂಪನಿಯ (ಪೊಲೀಸ್ ಅಶ್ವಾರೋಹಿ ದಳ) ಕಮಾಂಡೆಂಟ್ ವಿ.ಶೈಲೇಂದ್ರ ಅವರ ಕಚೇರಿ ಬಳಿ ಸದಾ ನಿಂತಿರುವ 'ನಿಗೂಢ ಕಾರು'ವಿನ ಬಗ್ಗೆ ತನಿಖೆ ನಡೆಸುವಂತೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ನಿಗೂಢ ಕಾರಿನ ಬಗ್ಗೆ ತುರ್ತಾಗಿ ತನಿಖೆ ನಡೆಸಿದರೆ ಸತ್ಯಾಂಶ ತಿಳಿಯಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೆಎ ಆರ್ ಪಿ ಮೌಂಟೆಂಡ್ ಕಂಪನಿಯ ಕಟ್ಟಡದ ಆವರಣದಲ್ಲಿ ಶೈಲೇಂದ್ರ ಅವರು ಕಾರೊಂದನ್ನು ನಿಲ್ಲಿಸಿಕೊಂಡಿರುತ್ತಾರೆ. ಒಂದು ಬಾರಿ ನಂಬರ್ ಪ್ಲೇಟ್ ತೆಗೆಯಿಸಿ ಕಾರು ಚಾಲನೆ ಮಾಡಿಕೊಂಡು ಹೊರಗೆ ಹೋಗುತ್ತಾರೆ. ಮತ್ತೆ ಕಚೇರಿಗೆ ಬರುವ ಅವರು ಕಾರಿಗೆ ನಂಬರ್ ಪ್ಲೇಟ್ ಅಳವಡಿಸಿಕೊಳ್ಳುತ್ತಾರೆ ಎಂದು ಆರೋಪಿಸಿದ್ದಾರೆ.

ಅಲ್ಲದೆ ಕಾರನ್ನು ಸ್ವಚ್ಛ ಮಾಡಲು ಪೊಲೀಸ್ ಸಿಬ್ಬಂದಿಯನ್ನು ಬಳಸಿಕೊಳ್ಳುತ್ತಿದ್ದು, ಆ ಮೂಲಕ ನಿಯಮ ಉಲ್ಲಂಘನೆ ಮಾಡಿದ್ದಾರೆ. ನಿಗೂಢ ಕಾರಿನ ಬಗ್ಗೆ ಬಹಳಷ್ಟು ಅನುಮಾನಗಳು ಇವೆ. ಈ ಹಿನ್ನೆಲೆ ಶೈಲೇಂದ್ರ ಅವರ ಬಗ್ಗೆ ತುರ್ತು ತನಿಖೆ ನಡೆಸಬೇಕು ಎಂದು ಸ್ನೇಹಮಯಿ ಕೃಷ್ಣ, ಪೊಲೀಸ್ ಆಯುಕ್ತರನ್ನು ಒತ್ತಾಯಿಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 18 ಜುಲೈ 2025

ಜಿಲ್ಲೆಯಾದ್ಯಂತ ರೆಡ್ ಅಲರ್ಟ್

ಮಡಿಕೇರಿ,ಜು.17–ಜಿಲ್ಲೆಯಾದ್ಯಂತ ವ್ಯಾಪಕ ಮಳೆ ಮುಂದುವರೆಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರದವರೆಗೆ ಜಿಲ್ಲೆಯಾದ್ಯಂತ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಈ ಅವಧಿಯಲ್ಲಿ 204 ಮಿ.ಮೀ ಅಧಿಕ ಮಳೆ ಯಾಗುವ ಸಾಧ್ಯತೆಗಳಿದ್ದು, ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

ಮಳೆ ಮಾಹಿತಿ: ಜಿಲ್ಲೆಗೆ ಜನವರಿಯಿಂದ ಜು.17ರ ಬೆಳಗಿನ 8.30ರವರೆಗೆ ಒಟ್ಟು ಸರಾಸರಿ 70 ಇಂಚು ಮಳೆಯಾಗಿದೆ. ಈ ಪೈಕಿ ಮಡಿಕೇರಿ ತಾಲೂಕಿನಲ್ಲೇ 105 ಇಂಚು ಮಳೆಯಾಗಿದ್ದರೆ, ವಿರಾಜಪೇಟೆ ತಾಲೂಕಿನಲ್ಲಿ 65, ಪೊನ್ನಂಪೇಟೆ ತಾಲೂಕಿಗೆ 68, ಸೋಮವಾರಪೇಟೆ 77 ಹಾಗೂ ಕುಶಾಲನಗರ ತಾಲೂಕಿಗೆ ಒಟ್ಟು 36 ಇಂಚು ಮಳೆಯಾಗಿದೆ.

ಇಂದೂ ಸಹ ಶಾಲಾ ಕಾಲೇಜುಗಳಿಗೆ ರಜೆ : ಜಿಲ್ಲೆಯ ಎಲ್ಲಾ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಜು.18ರಂದು ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ. ಐಟಿಐ ಪರೀಕ್ಷೆಗಳು ಎಂದಿನಂತೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಭತ್ತದ ನಾಟಿ ಮಾಡಿದ ಗ್ರಾಮಸ್ಥರು



ಮಡಿಕೇರಿ: ನಾಪೋಕ್ಲು ಹೋಬಳಿಯ ನರಿಯಂದಡ ಗ್ರಾಮ ವ್ಯಾಪ್ತಿಯಲ್ಲಿ ಭತ್ತದ ನಾಟಿ ಕಾರ್ಯ ಬಿರುಸಿನಿಂದ ಸಾಗಿದೆ. ಈ ಭಾಗದಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದ್ದು ಭತ್ತ ಬೆಳೆಯುವ ಗದ್ದೆ, ಕಾಫಿ ತೋಟಗಳಲ್ಲಿ ಕಾಡಾನೆ ಹಿಂಡುಗಳು ದಾಳಿ ನಡೆಸಿ ಅಪಾರ ಪ್ರಮಾಣದಲ್ಲಿ ನಷ್ಟ ಉಂಟು ಮಾಡುತ್ತಿವೆ. ಈ ನಡುವೆಯೇ ಇಲ್ಲಿನ ಗ್ರಾಮಸ್ಥರು ಭತ್ತದ ಗದ್ದೆಯಲ್ಲಿ ನಾಟಿ ಮಾಡಿ ಕೃಷಿ ಪ್ರೇಮ ಮೆರೆಯುತ್ತಿದ್ದಾರೆ.

ಪೊಕ್ಕುಳಂಡ್ರ ಧನೋಜ್ ಕುಮಾರ್‌ರ 4 ಎಕರೆಯ 6 ಗದ್ದೆಯಲ್ಲಿ 12 ಜನ ಹಾಡುತ್ತ, ಕುಣಿಯುತ್ತ ಬಿರುಸಿನ ಮಳೆಯ ನಡುವೆ ಭತ್ತ ನಾಟಿ ಮಾಡುವ ಮೂಲಕ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯಿಂದ ಗನ್ ಮೆನ್ ನಿಯೋಜಿಸುವುದಾಗಿ ಕಳೆದ ವರ್ಷ ಭರವಸೆ ನೀಡಿದ್ದರೂ ಅದು ಈಡೇರಿಲ್ಲ. ಆದರೂ ಈ ವರ್ಷ ಕಾಡಾನೆ ಹಾವಳಿ ನಡುವೆಯೇ ನಾಟಿ ಮಾಡಿದ್ದೇವೆ ಎಂದು ಗ್ರಾಮಸ್ಥರು ಹೇಳಿಕೊಂಡರು

ಭತ್ತದ ಕೃಷಿ ನಶಿಸುತ್ತಿದ್ದರೂ ಕೂಡ ಇಲ್ಲಿನ ರೈತರು ಇರುವ ಅಲ್ಪ ಸ್ವಲ್ಪ ಭೂಮಿಯಲ್ಲಿ ಭತ್ತ ಬೆಳೆಯುತ್ತಿದ್ದೇವೆ ಇದೂ ಬೆಳೆಯದಿದ್ದರೆ ನಮ್ಮ ಪಾಡೇನು? ಮಳೆ, ಗಾಳಿ, ಕಾಡಾನೆ ಹಾವಳಿಯನ್ನೂ ಲೆಕ್ಕಿಸದೆ ಭತ್ತದ ನಾಟಿ ಕೆಲಸ ಮಾಡಿದ್ದೇವೆ. ಅರಣ್ಯ ಇಲಾಖೆ ಇನ್ನಾದರೂ ಭತ್ತದ ನಾಟಿ ಮಾಡಿದ ಗದ್ದೆಗಳ ಕಡೆ ಕಾಡಾನೆಗಳು ಸುಳಿಯದಂತೆ ಕ್ರಮ ಕೈಗೊಳ್ಳಬೇಕು. ನಾಟಿ ತುಳಿದರೆ ಕಷ್ಟಪಟ್ಟು ಮಾಡಿದ ಬೆಳೆಗಳೆಲ್ಲ ನಾಶವಾಗಲಿದೆ. ಮುಂದಿನ ದಿನಗಳಲ್ಲಿ ಅಲ್ಪ ಸ್ವಲ್ಪ ಭತ್ತ ಬೆಳೆಯುವ ಈ ವ್ಯಾಪ್ತಿಯ ರೈತರು ಕೂಡ ಭತ್ತ ಕೃಷಿ ಮಾಡಲು ಹಿಂದೇಟು ಹಾಕಿದರೆ ಮುಂದಿನ ತಲೆಮಾರಿಗೆ ಭತ್ತದ ಕೃಷಿಯ ಬಗ್ಗೆ ಕನಿಷ್ಟ ಅರಿವು ಇಲ್ಲವಾಗುತ್ತೆ ಎಂಬುದು ಇಲ್ಲಿನ ಹಿರಿಯರ ನೋವಿನ ಮಾತಾಗಿದೆ.

ಆನೆಗಳನ್ನು ಕಾಡಿಗಟ್ಟಿದ ಸಿಬ್ಬಂದಿ

ನಿಟ್ಟುಸಿರು ಬಿಟ್ಟ ಶಾಲಾ ಮಕ್ಕಳು



ವಲಯ ಅರಣ್ಯಾಧಿಕಾರಿ ಶಿವರಾಂ ಖುದ್ದಾಗಿ ತಾವೇ ವಾಹನ ಚಾಲನೆ ಮಾಡಿಕೊಂಡು ಗುಹ್ಯ ಶಾಲೆ ಮಕ್ಕಳನ್ನು ಸುರಕ್ಷಿತವಾಗಿ ಮನೆಗೆ ತಲುಪಿಸಿದರು.

ಸಿದ್ದಾಪುರ,ಜು.17– ಸಮೀಪದ ಗುಹ್ಯ ಶಾಲೆಯ ಹತ್ತಿರದ ಕಾಫಿ ತೋಟಗಳಲ್ಲಿ ಬೀಡುಬಿಟ್ಟಿದ್ದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ಯಶಸ್ವಿಯಾಗಿ ನಡೆಯಿತು. ಕೆಲವು ದಿನಗಳಿಂದ ಗ್ರಾಮದ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳಿಂದ ವಿದ್ಯಾರ್ಥಿಗಳು, ಪೋಷಕರಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಈ ಹಿನ್ನೆಲೆ ಕಾಡಾನೆ ಹಿಂಡನ್ನು ಕಾಡಿಗಟ್ಟಲು ಅರಣ್ಯ ಇಲಾಖೆಯನ್ನು ಸ್ಥಳೀಯರು ಆಗ್ರ ಹಿಸಿದ್ದರು.

ವಿರಾಜಪೇಟೆ ವಲಯ ಉಪ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಹಾಗೂ ಎಸಿಎಫ್ ಗೋಪಾಲ್ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಶಿವರಾಂ ನೇತೃತ್ವದಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ, ಪಟಾಕಿ ಸಿಡಿಸಿ ಆನೆಗಳನ್ನು ತೋಟಗಳಿಂದ ಅರಣ್ಯಕ್ಕೆ ಅಟ್ಟಿದರು. 10ಕ್ಕೂ ಅಧಿಕ ಕಾಡಾನೆಗಳನ್ನು ವಾಪಸ್ ಅರಣ್ಯಕ್ಕೆ ಅಟ್ಟುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ.

ವಿರಾಜಪೇಟೆ ವಲಯದ ಆರ್‌ಆರ್‌ಟಿ ಹಾಗೂ ಈಟಿಎಫ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಾಚರಣೆ ಸಂದರ್ಭ ಗುಹ್ಯ ಶಾಲೆಗಳಿಂದ ಮನೆಗೆ ತೆರಳುವ ವಿದ್ಯಾರ್ಥಿಗಳನ್ನು ಅರಣ್ಯ ಇಲಾಖೆ ವಾಹನದಲ್ಲಿ ಕರೆದುಕೊಂಡು ಹೋಗಲಾಯಿತು. ವಲಯ ಅರಣ್ಯಾಧಿಕಾರಿ ಶಿವರಾಂ ಖುದ್ದಾಗಿ ತಾವೇ ವಾಹನ ಚಾಲನೆ ಮಾಡಿಕೊಂಡು ಮಕ್ಕಳನ್ನು ಸುರಕ್ಷಿತವಾಗಿ ಅವರುಗಳ ಮನೆಗೆ ತಲುಪಿಸಿದರು.

ರಸ್ತೆ, ಚರಂಡಿ, ಅಭಿವೃದ್ಧಿ ಕಾರ್ಯಗಳಿಗೆ 20 ಕೋಟಿ ರೂ. ಮಂಜೂರು



ರಸ್ತೆ, ಚರಂಡಿ, ತಡೆಗೋಡೆ ಸೇರಿ ಇತರ ಅಭಿವೃದ್ಧಿ ಕಾರ್ಯಗಳ ಸಂಬಂಧ ಶಾಸಕ ಪೊನ್ನಣ್ಣ ಸ್ಥಳ ಪರಿಶೀಲನೆ ನಡೆಸಿದರು

ವಿರಾಜಪೇಟೆ, ಜು.17–ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಚರಂಡಿ, ತಡೆಗೋಡೆ ಸೇರಿಇತರ ಅಭಿವೃದ್ಧಿ ಕಾರ್ಯಗಳಿಗಾಗಿ ಸರಕಾರ 20 ಕೋಟಿ ಅನುದಾನ ನೀಡಿದೆ ಎಂದು ಶಾಸಕಎಎಸ್. ಪೊನ್ನಣ್ಣ ಹೇಳಿದರು.

ಪುರಸಭೆಯ ವಾರ್ಡ್ 12 ರಲ್ಲಿ ಇಳಿಜಾರು ಜಾಗ ಕೆಳಗಡೆ ಮುಖ್ಯ ತೋಡು [ರಾಜ ಕಾಲುವೆ] ಹರಿಯುತ್ತಿದ್ದು ಕುಸಿಯುವ ಸಂಭವಿರುವುದರಿಂದ ತಡೆಗೋಡೆ ಮತ್ತು ಚರಂಡಿಯ ಅವಶ್ಯವಿದೆ ಎಂದು ವಾರ್ಡ್ ಸದಸ್ಯ ಅಬ್ದುಲ್ ಜಲೀಲ್ ಮನವಿ ಮಾಡಿಕೊಂಡ ಮೇರೆಗೆ ಇಂದು ಭೇಟಿ ನೀಡಿ ಇಲ್ಲಿನ ನಿವಾಸಿಗಳಿಗೆ ಅನುಕೂಲವಾಗುವ ರೀತಿ ಕಾಮಗಾರಿಗಳು ನಡೆಯಬೇಕು. ಇದಕ್ಕಾಗಿ ಈ ವಾರ್ಡ್‌ಗೆ ರೂ.25 ಲಕ್ಷ ಅನುದಾನ ನೀಡಲಾಗಿದೆ ಕಾಮಗಾರಿ ಉತ್ತಮ ಗುಣಮಟ್ಟದ್ದಾಗಿರಬೇಕು ಹಾಗು ಪಟಣ ವ್ಯಾಪ್ತಿಯಲ್ಲಿ ಮುಖ್ಯವಾಗಿ ಸ್ವಚ್ಚತೆಯನ್ನು ಕಾಪಾಡುವುದು ಎಲ್ಲರ ಕರ್ತವ್ಯ ಎಂದರು.

ಪುರಸಭೆ ಸದಸ್ಯ ಎಸ್.ಹೆಚ್ ಮತೀನ್ 'ಬಿಸ್ಮಿಲ್ಲಾ ಶಹುಲ್ ಮೋಕನ್' ಅಭಿವೃದ್ಧಿಗೊಳಿಸಲು ತಡೆಗೋಡೆ ನಿರ್ಮಿಸಲು ಸಹಾಯ ನೀಡುವಂತೆ ಕೋರಿದಾಗ ಶಾಸಕರು 50 ಲಕ್ಷ ರೂ. ನೀಡುವುದಾಗಿ ತಿಳಿಸಿದರು. ಬಳಿಕ ಪುರಸಭೆಯ ಪೌರ ಕಾರ್ಮಿಕರಿಗಾಗಿ ಸುಣ್ಣದ ಬೀದಿಯಲ್ಲಿ ನಿರ್ಮಿಸಿರುವ ವಸತಿ ನಿಲಯ ಕಾಮಗಾರಿ ಅರ್ಧಕ್ಕೆ ನಿಂತುಹೋಗಿದ್ದು, ಅನುದಾನದ ಅವಶ್ಯವಿದೆ ಎಂದಾಗ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಿ 40 ಲಕ್ಷ ಅನುದಾನ ನೀಡುವುದಾಗಿ ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಪುರಸಭೆ ಅಧ್ಯಕ್ಷ ದೇಚಮ್ಮ ಕಾಳಪ್ಪ, ಉಪಾಧ್ಯಕ್ಷೆ ಫಸಿಹಾ ತಬ್ಸುಂ, ಸ್ಥಾಯಿ ಸಮಿತಿ ಅಧ್ಯಕ್ಷ ಅಬ್ದುಲ್ ಜಲೀಲ್, ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ, ಸದಸ್ಯರಾದ ಎಸ್. ಹೆಚ್. ಮತೀನ್, ಸಿ.ಕೆ. ಪೃಥ್ವಿನಾಥ್, ಶಾಹುಲ್ ಹಮೀದ್, ಅತಿಫ್ ಮನ್ನ, ಯುವ ಕಾಂಗ್ರೆಸ್‌ನ ಶಬೀರ್, ಪಕ್ಷದ ಜೋಕಿಂ ರಾಡ್ರಿಗಾಸ್, ಎ.ವಿ.ಮಂಜುನಾಥ್, ಮಂಜು ದೇವಯ್ಯ, ಹರೀಶ್, ಮತ್ತಿತರರಿದ್ದರು

ಕಾಡಾನೆಗಳ ಹಾವಳಿ ತಡೆಗೆ ಸಾರ್ವಜನಿಕರ ಸಭೆ



ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ತಡೆಗೆ ಅರಣ್ಯಾಧಿಕಾರಿಗಳು ಸಾರ್ವಜನಿಕ ಸಭೆ ನಡೆಸಿದರು,

ಮಡಿಕೇರಿ,ಜು.17–ಗಡಿ ಭಾಗದ ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆನೆಪಾರೆ, ಬಿಟಿಯಾಡಿ, ಮಡೆಕಾನ, ಫಾರೆಸ್ಟ್ ಐಬಿ, ಪಚ್ಚೆ ಪಿಲಾವ್ ಮುಂತಾದ ಪ್ರದೇಶಗಳಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಕಾಡಾನೆಗಳ ದಾಳಿಯನ್ನು ತಡೆಯಲು ಸೂಕ್ತ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಗ್ರಾಪಂ ಅಧ್ಯಕ್ಷ ಬಾಲಚಂದ್ರನ್ ನಾಯರ್ ಅಧ್ಯಕ್ಷತೆಯಲ್ಲಿ ಪಂಚಾಯಿತಿ ಸಭಾಂಗಣದಲ್ಲಿ ಸಾರ್ವಜನಿಕರ ಸಭೆಯನ್ನು ನಡೆಸಲಾಯಿತು.

ಭಾಗಮಂಡಲ ವಲಯ ಅರಣ್ಯಾಧಿಕಾರಿ ರವೀಂದ್ರ ಹಾಗೂ ವನ್ಯಜೀವಿ ವಲಯ ಅರಣ್ಯಾಧಿಕಾರಿ ತ್ಯಾಗರಾಜ, ಗ್ರಾಮಸ್ಥರ ಅಹವಾಲು ಸ್ವೀಕರಿಸಿದರು. ಆನೆಗಳು ಕಾಡಿನಿಂದ ಕೃಷಿ ಜಮೀನಿಗೆ ಬಂದು ರೈತರು ಬೆಳೆದ ತೆಂಗು, ಅಡಿಕೆ, ಬಾಳೆ ಫಸಲುಗಳನ್ನು ನಾಶಪಡಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಮತ್ತು ಕೃಷಿ ಕೂಲಿ ಕಾರ್ಮಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದರು. ಅರಣ್ಯದಂಚಿನಲ್ಲಿ ಕಂದಕವನ್ನು ನಿರ್ಮಿಸಿದರೆ ಆನೆಗಳ ಹಾವಳಿಯನ್ನು ತಡೆಯಲು ಸಾಧ್ಯ, ಈ ಬಗ್ಗೆ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಪಟ್ಟು ಹಿಡಿದರು.

ಅರಣ್ಯ ಅಧಿಕಾರಿಗಳು ಮಾತನಾಡಿ, ಕಂದಕ ನಿರ್ಮಾಣ ಮಾಡಲು ನಮ್ಮ ಅಭ್ಯಂತರವಿಲ್ಲ, ಆದರೆ ಕರಿಕೆ ಗ್ರಾಮ ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶವಾಗಿದ್ದು, ಭೂ ಕುಸಿತವಾಗುವ ಸಂಭವವಿದೆ ಎಂದು ಸಭೆಯ ಗಮನ ಸೆಳೆದರು. ಗ್ರಾಪಂ ಅಧ್ಯಕ್ಷ ಬಾಲಚಂದ್ರನ್ ನಾಯರ್, ಉಪಾಧ್ಯಕ್ಷೆ ಕಲ್ಪನಾ ಜಗದೀಶ್, ಜಯನ್, ಅರಣ್ಯ ಇಲಾಖೆ ಸಿಬ್ಬಂದಿವರ್ಗ, ಪೊಲೀಸ್ ಅಧಿಕಾರಿಗಳು, ಗ್ರಾಮಸ್ಥರಿದ್ದರು.

ಗ್ಯಾರಂಟಿ ಯೋಜನೆಯಿಂದ ರಾಜ್ಯದ ಜನತೆಗೆ ಅನುಕೂಲ

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್



ಸಭೆಯಲ್ಲಿ ಎ.ಬಿ.ಕುಮಾರ್ ಮಾತನಾಡಿದರು.

ಕೆ.ಆರ್.ಪೇಟೆ, ಜು.17– ರಾಜ್ಯದ ಜನತೆಯ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳಿಂದ ರಾಜ್ಯದ 7 ಕೋಟಿ ಜನತೆಗೆ ಅನುಕೂಲವಾಗಿದೆ ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಮಾಸಿಕ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಿಂಗಳಿಗೆ 2 ಬಾರಿ ಗ್ಯಾರಂಟಿ ಯೋಜನಾ ಸಮಿತಿ ಸಭೆ ನಡೆಸಿ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆ ಅನುಷ್ಠಾನದ ಬಗ್ಗೆ ಗಮನ ಹರಿಸಬೇಕಾಗಿದೆ ಎಂದರು.

ತಾಲೂಕಿನ ಹಲವರಿಗೆ ಗೃಹಲಕ್ಷ್ಮಿ ಹಣ ಡಿಬಿಟಿ ಮೂಲಕ ಸರಿಯಾಗಿ ಪಾವತಿಯಾಗುತ್ತಿಲ್ಲ ಎಂಬ ದೂರು ಕೇಳಿ ಬಂದಿದ್ದು, ಅದನ್ನು ಸರಿಪಡಿಸಬೇಕಿದೆ ಎಂದು ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಪದ್ಮಮ್ಮ ತಿಳಿಸಿದರು.

ಗ್ಯಾರಂಟಿ ಸಮಿತಿ ಕಾರ್ಯದರ್ಶಿ ತಾಪಂ ಇಓ ಸುಷ್ಮಾ ಮಾತನಾಡಿ, ತಾಲೂಕಿನಲ್ಲಿ ಪೋಷಕರು ತಮ್ಮ ಅಪ್ರಾಪ್ತ ಹೆಣ್ಣು ಮಕ್ಕಳಿಗೆ ವಿವಾಹ ಮಾಡುತ್ತಿರುವ ಬಗ್ಗೆ ಸಾಕಷ್ಟು ದೂರುಗಳಿವೆ. ಅದನ್ನು ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಸೂಕ್ತ ಕ್ರಮ ವಹಿಸಬೇಕು. ಆ ಮೂಲಕ ಬಾಲ್ಯ ವಿವಾಹ ತಪ್ಪಿಸಬೇಕು. ಗ್ರಾಪಂ ಮಟ್ಟದಲ್ಲಿ ಬಾಲ್ಯ ವಿವಾಹ ಕುರಿತು ಕಾರ್ಯಾಗಾರ ಹಮ್ಮಿಕೊಂಡು ಪೋಷಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಅಗ್ರಹಾರಬಾಚಹಳ್ಳಿ ಗ್ರಾಮಕ್ಕೆ ಬೆಳಗ್ಗೆ 8 ಗಂಟೆಗೆ ಬಸ್ ಹೋಗಿ ಬರುತ್ತಿದೆ. ಬಸ್ ಸಮಯವನ್ನು 9 ಗಂಟೆಗೆ ನಿಗದಿಪಡಿಸಿದರೇ ಶಾಲಾ–ಕಾಲೇಜು ವಿದ್ಯಾರ್ಥಿಗಳು ಅನುಕೂಲವಾಗಲಿದೆ. ಅಲ್ಲದೇ ವೇಳೆ ಬದಲಾವಣೆ ಮಾಡಿದರೆ ಸದರಿ ಮಾರ್ಗದ ಆದಾಯ ಇನ್ನೂ ಹೆಚ್ಚಾಗಲಿದೆ ಎಂದು ಎ.ಬಿ. ಕುಮಾರ್ ಡಿಪೋ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆ.ಆರ್.ಪೇಟೆಯಿಂದ ತಿರುಪತಿ ಹೋಗುತ್ತಿದ್ದ ಬಸ್ ನಿಲ್ಲಿಸಿರುವ ಬಗ್ಗೆ ಸಾರ್ವಜನಿಕರಿಂದ ದೂರು ಕೇಳಿ ಬರುತ್ತಿದ್ದು, ಪುನರ್ ಆರಂಭಿಸುವಂತೆ ಕೇಳುತ್ತಿದ್ದಾರೆ. ಬಸ್ ಅನ್ನು ಏಕೆ ನಿಲ್ಲಿಸಲಾಗಿದೆ ಎಂದು ಡಿಪೋ ಮ್ಯಾನೇಜರ್ ಉಮಾಮಹೇಶ್ವರಿ ಅವರನ್ನು ಎ.ಬಿ.ಕುಮಾರ್ ಪ್ರಶ್ನಿಸಿದರು.

ಇದಕ್ಕುತ್ತರಿಸಿದ ಉಮಾಮಹೇಶ್ವರಿ ಕೆ.ಆರ್.ಪೇಟೆಯಿಂದ ತಿರುಪತಿಗೆ ಕಳೆದ ಐದಾರು ವರ್ಷಗಳಿಂದ ನಮ್ಮ ಡಿಪೋದಿಂದ ಬಸ್ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸದರಿ ಮಾರ್ಗದಲ್ಲಿ ಶಕ್ತಿ ಯೋಜನೆ ಆರಂಭವಾದ ನಂತರ ನಷ್ಟ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಕಳೆದ 1 ತಿಂಗಳಿಂದ ಸದರಿ ಮಾರ್ಗವನ್ನು ಬಂದ್ ಮಾಡಲಾಗಿದೆ. ಅದೇ ಸಮಯಕ್ಕೆ ಬೆಂಗಳೂರಿನವರೆಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲಿಂದ ತಿರುಪತಿಗೆ ಸಾಕಷ್ಟು ಬಸ್ ವ್ಯವಸ್ಥೆ ಇದ್ದು, ಪ್ರಯಾಣಿಕರಿಗೆ ಮಾರ್ಗ ರದ್ದತಿಯಿಂದ ತೊಂದರೆಯಾಗಿಲ್ಲ ಎಂದರು.

ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮಿ, ತಾಲೂಕು ಆಹಾರ ಇಲಾಖೆ ಅಧಿಕಾರಿ ವಿನೋದ್, ಜಿಲ್ಲಾ ಉದ್ಯೋಗಾಧಿಕಾರಿ ಕುಸುಮ, ತಮ್ಮ ಇಲಾಖೆಯ ಪ್ರಗತಿ ವರದಿಯನ್ನು ಮಂಡಿಸಿದರು.

ಸಭೆಯಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಸಿ.ಆರ್.ಪಿ.ಕುಮಾರ್, ರೂಪಾ, ಲತಾ, ಶಿವಮ್ಮ, ಕೆಎಸ್‌ಆರ್‌ಟಿಸಿ ಶಿವಣ್ಣ ಗೋಪಾಲ್, ಯೋಗೇಶ್, ಶ್ಯಾಮಣ್ಣ, ಬಿ.ಸಿ.ಮಾಧು, ಸೋಮಶೇಖರ್, ಆಫೀಜ್ ಉಲ್ಲಾ, ಶಿವ ಲಿಂಗಪ್ಪ, ಗ್ಯಾರಂಟಿ ವಿಭಾಗೀಯ ನಿರ್ವಾಹಕಿ ಚೈತ್ರ ಇತರರಿದ್ದರು.

ದಕ್ಷಿಣ ಭಾರತದ ರಾಜಮನೆತನಗಳ ಕೊಡುಗೆ ಅವಿಸ್ಮರಣೀಯ

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜು.17– ದಕ್ಷಿಣ ಭಾರತವನ್ನಾಳಿದ ಕದಂಬ, ಚಾಲುಕ್ಯ ಮತ್ತು ರಾಷ್ಟ್ರಕೂಟ ರಾಜಮನೆತನಗಳ ಕೊಡುಗೆ ಅವಿಸ್ಮರಣೀಯ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಕದಂಬ ಸೈನ್ಯ ಕನ್ನಡ ಸಂಘಟನೆ ಆಯೋಜಿಸಿದ್ದ ಕದಂಬ–ಚಾಲುಕ್ಯ ರಾಷ್ಟ್ರಕೂಟ ಚಕ್ರವರ್ತಿಗಳ ಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕದಂಬರು ಕ್ರಿಶ 4ನೇ ಶತಮಾನದಲ್ಲಿ ಬನವಾಸಿಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದರೇ, ಚಾಲುಕ್ಯರು 6ನೇ ಶತಮಾನದಲ್ಲಿ ಬಾದಾಮಿಯನ್ನು ಕೇಂದ್ರವನ್ನಾಗಿ, ರಾಷ್ಟ್ರಕೂಟರು 8ನೇ ಶತಮಾನದಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರವನ್ನು ಕೇಂದ್ರ ವಾಗಿಟ್ಟುಕೊಂಡು ಆಳ್ವಿಕೆ ನಡೆಸಿದರು. ಈ 3 ರಾಜವಂಶಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದ ಅವರು, ಇಂದಿನ ವಿದ್ಯಾವಂತರು ಇತಿಹಾಸ ಮರೆಯಬಾರದು. ಹಿಂದಿನ ರಾಜಮನೆತನಗಳನ್ನು ಸ್ಮರಿಸುತ್ತಿರುವುದು ಶ್ಲಾಘನೀಯ ಎಂದರು.

ಕದಂಬ ಸೈನ್ಯ ಕನ್ನಡ ಸಂಘಟನೆ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಮಾತನಾಡಿ, ಕಾವೇರಿ ಚಳವಳಿ ಮತ್ತು ಕನ್ನಡಪರ ಹೋರಾಟಗಳಲ್ಲಿ ಹೋರಾಟಗಾರರ ರಕ್ಷಣೆ ಮಾಡುವಲ್ಲಿ ಪೊಲೀಸ್ ಇಲಾಖೆ ತನ್ನ ಪಾತ್ರವನ್ನು ಅವಿಸ್ಮರಣೀಯವಾಗಿ ನಿರ್ವಯಿಸಿದೆ. ಸಾಕಷ್ಟು ಬಾರಿ ಹೋರಾಟಗಾರರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆದರೂ ತಾಳ್ಮೆಯಿಂದ ಕರ್ತವ್ಯ ನಿಭಾಯಿಸಿದ್ದಾರೆ ಎಂದು ಸ್ಮರಿಸಿದರು.

ರೈತಪರ–ಕನ್ನಡಪರ ಹೋರಾಟಗಾರರ ಮೇಲೆ ನೂರಾರು ಕೇಸುಗಳನ್ನು ಹಾಕುವುದರೊಂದಿಗೆ ಹೋರಾಟಗಾರರ ರಕ್ಷಣೆಯನ್ನೂ ಮಾಡಿರುವ ಹಿರಿಯ ಪೊಲೀಸ್ ಅಧಿಕಾರಿಗಳ ಸೇವೆ ಅನುಪಮವಾಗಿದೆ. ಇಂತಹ ದಕ್ಷ ಪೊಲೀಸ್ ಅಧಿಕಾರಿಗಳನ್ನು ಸಮಾಜ ಎಂದಿಗೂ ಮರೆಯದು ಎಂದು ನುಡಿದರು.

ಇದೇ ವೇಳೆ ಪೊಲೀಸ್ ಅಧಿಕಾರಿಗಳು, ನಿವೃತ್ತ ಯೋಧರು, ಸಮಾಜ ಸೇವಕರಿಗೆ ಕದಂಬ–ಚಾಲುಕ್ಯ–ರಾಷ್ಟ್ರಕೂಟ ಚಕ್ರವರ್ತಿಗಳ ಸ್ಮರಣೆಯ ಹೆಸರಿನ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಸಮಾಜ ಸೇವಕ ಡಾ.ಎನ್. ನರಸಿಂಹಮೂರ್ತಿ, ವಕೀಲರ ಸಂಘದ ರಾಜ್ಯ ಮಾಜಿ ಅಧ್ಯಕ್ಷ ವಿಶಾಲ್ ರಘು, ಸಮಾಜ ಸೇವಕ ಎಂ.ಜೆ.ಯೋಗೇಶ್, ಕಲಾವಿದೆ ಕೆ.ಟಿ.ಸೌಭಾಗ್ಯ, ಎಎಸ್ಐಗಳಾದ ಈ.ತಿಮ್ಮಯ್ಯ, ಎನ್.ಈ.ಗಂಗಾಧರ ಸ್ವಾಮಿ, ವಕೀಲೆ ಆಶಾಲತಾ, ನಗರಸಭಾ ಸದಸ್ಯ ಶ್ರೀಧರ್, ಮುಖಂಡರಾದ ಮೋಹನ್ ಚಿಕ್ಕಮಂಡ್ಯ, ಅನುಪಮಾಗೌಡ ಮತ್ತಿತರರಿದ್ದರು.

ಚಾಮುಂಡೇಶ್ವರಿ ವರ್ಧಂತಿ: ಭಕ್ತರಿಂದ ವಿಶೇಷ ಪೂಜೆ




ಶ್ರೀಚಾಮುಂಡೇಶ್ವರಿ ದೇವಸ್ಥಾನದಲ್ಲಿ ಭಕ್ತರು ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಪಾಂಡವಪುರ, ಜು.17– ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ಪಟ್ಟಣದ ಶ್ರೀಚಾಮುಂಡೇಶ್ವರಿ ದೇವಸ್ಥಾನದಲ್ಲಿ ಭಕ್ತರು ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಪಟ್ಟಣದ ಹಿರೋಡೆ ಬೀದಿಯಲ್ಲಿರುವ ಮಹಿಷಾಸುರ ಮರ್ಧಿನಿ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಹೂ ಅಲಂಕಾರ ಮಾಡಿ ಪೂಜೆ ಸಲ್ಲಿಸಿದರು. ಬಳಿಕ ಆಗಮಿಸಿದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದರು.

ಯ.ಪಟೇಲ್ ಪ್ರಸಾದ್ ಮಾತನಾಡಿ, ತಾಯಿ ಚಾಮುಂಡೇಶ್ವರಿ ಜನ್ಮ ದಿನದ ಅಂಗವಾಗಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಗಿದ್ದು, ದೇವಸ್ಥಾನಕ್ಕೆ ಬಂದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದ್ದೇವೆ. ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದು ಹಾರೈಸಿದರು.

ಈ ವೇಳೆ ಪಿ.ಎಸ್.ಲಿಂಗರಾಜು, ಚಂದ್ರೇಗೌಡ, ಚನ್ನಕೇಶವ, ದೀಲಿಪ್, ರಘುನಾಥ್, ಲಕ್ಷ್ಮಿನಾರಾಯಣ, ರಾಮ್ಮಣ್ಣಿ, ಗೀರಿಶ್, ಕೆ.ಲಕ್ಷ್ಮಿನಾರಾಯಣ ಹಾಗೂ ಅರ್ಚಕರಾದ ಎನ್.ಗಿರೀಶ್, ಪಿ.ಎನ್.ಪ್ರಕಾಶ್ ಸೇರಿದಂತೆ ಭಕ್ತರು ಹಾಗೂ ಇತರರು ಹಾಜರಿದ್ದರು.

ಕೆಬಿಜಿಯವರ ನಿಧನಕ್ಕೆ ಸಂತಾಪ



ಗುಂಡ್ಲುಪೇಟೆ, ಜು.17– ಹಿರಿಯ ಪತ್ರಕರ್ತರಾದ ಕೆ.ಬಿ.ಗಣಪತಿಯವರ ನಿಧನಕ್ಕೆ ತಾಲೂಕಿನ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ. ಎಲ್.ಐ.ಸಿ. ಅಭಿವೃದ್ಧಿ ಅಧಿಕಾರಿ ಹಾಗೂ ಚಿಂತಕ ಎನ್.ಮಹೇಶ್, ಕಾವಲು ಪಡೆಯ ಅಬ್ದುಲ್ ಮಾಲಿಕ್, ಕರವೇ ಜಿಲ್ಲಾಧ್ಯಕ್ಷ ಆರ್.ಮೋಹನ್, ಗಡಿನಾಡು ರಕ್ಷಣಾ ಸೈನ್ಯದ ರಾಜ್ಯಾಧ್ಯಕ್ಷ ಮುನೀರ್‌ಪಾಷ, ಸಾಹಿತಿ ನಾಗಭೂಷಣ್, ಹಿರಿಯ ಪತ್ರಕರ್ತ ಹುಚ್ಚೇಗೌಡ ಹಾಗೂ ಮೈಸೂರಿನ ದಸಂಸ ಹಿರಿಯ ಹೋರಾಟಗಾರ ಬಿ.ಡಿ.ಶಿವಬುದ್ಧಿ ಹಲವರು ಆದರ್ಶ ಹಿರಿಯ ಪತ್ರಕರ್ತರನ್ನು ನಾವು ಕಳೆದುಕೊಂಡಿದ್ದೇವೆ. ಕೊಡಗಿನ ಶಿಸ್ತಿನ ಸಿಪಾಯಿಯಾಗಿ ಮೈಸೂರಿನಲ್ಲಿ ಪತ್ರಿಕಾ ಭೀಷ್ಮರಾಗಿ ಮೆರೆದವರು ಗಣಪತಿಯವರು ಅಪಾರ ನಿಧನದಿಂದ ಪತ್ರಿಕಾರಂಗಕ್ಕೆ ನಷ್ಟವಾಗಿದೆ ಎಂದು ಸಂತಾಪ ಸೂಚಿಸಿದ್ದಾರೆ.

ಚಾಮುಂಡೇಶ್ವರಿ ವರ್ಧಂತಿ ವಿಶೇಷ ಪೂಜೆ



ಚಾಮುಂಡೇಶ್ವರಿ ಸೇವಾಸಮಿತಿಯಿಂದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು.

ಚಾಮರಾಜನಗರ: ಗುರುವಾರ ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ಚಾಮರಾಜೇಶ್ವರ ದೇವಾಲಯದಲ್ಲಿ ಚಾಮುಂಡೇಶ್ವರಿ ಸೇವಾಸಮಿತಿಯಿಂದ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು. ಅರ್ಚಕ ರಾಮಕೃಷ್ಣ, ನಗರಸಭೆ ಮಾಜಿ ಅಧ್ಯಕ್ಷ ಶಿವನಂಜಯ್ಯ, ಚಾಮುಂಡೇಶ್ವರಿ ಸೇವಾಸಮಿತಿಯ ನಂಜುಂಡಸ್ವಾಮಿ, ನಲ್ಲಿಶಿವಕುಮಾರ್, ಸುರೇಶ್, ಸಿಡಿಶೆಟ್ಟಿ, ಮಹೇಶ್, ಸುರೇಶ್, ಚಂದುಕಟ್ಟೆ ಮೋಳೆ ನಾಗರಾಜು ಹಾಜರಿದ್ದರು.

ಹೃದಯಾಘಾತಕ್ಕೆ ಬಸ್ ನಿಲ್ದಾಣದ ಶೌಚಾಲಯದಲ್ಲಿ ವೃದ್ಧ ಸಾವು

ಕೊಳ್ಳೇಗಾಲ: ಬಸ್ ನಿಲ್ದಾಣದಲ್ಲಿ ಶೌಚ ಗೃಹಕ್ಕೆಂದು ತೆರಳಿದ್ದ ವೃದ್ದರೊಬ್ಬರು ಕುಸಿದು ಬಿದ್ದು ಹೃದಯಾಘಾತದಿಂದ ಸಾವಿಗೀಡಾಗಿರುವ ಘಟನೆ ಗುರುವಾರ ಜರುಗಿದೆ.

ತಾಲೂಕಿನ ಕಾಮಗೆರೆ ಗ್ರಾಮದ ರಾಚಪ್ಪಾಜಿ (64) ಕುಸಿದು ಬಿದ್ದು ಸಾವಿಗೀಡಾದ ದುರ್ದೈವಿ ಮೃತರು ಅನ್ಯ ಕಾರ್ಯನಿಮಿತ್ತ ಮಂಡ್ಯಕ್ಕೆ ತೆರಳಿದ್ದವರು ಕುಟುಂಬ ಸಮೇತ ಪಟ್ಟಣಕ್ಕೆ ವಾಪಸ್ಸಾಗಿದ್ದು ತಮ್ಮ ಜೊತೆಗಿದ್ದವರನ್ನು ಕಾಮಗೆರೆ ಗ್ರಾಮಕ್ಕೆ ಕಳಿಸಿದ್ದಾರೆ. ನಂತರ ಇವರು ನರಸೀಪುರಕ್ಕೆ ಹೋಗುವ ಮೊದಲು ಶೌಚಗೃಹಕ್ಕೆ ತೆರಳಿದ್ದ ರಾಚಪ್ಪಾಜಿ ಕುಸಿದು ಬೀಳುತ್ತಿದ್ದಂತೆ ಸಾವಿಗೀಡಾಗಿದ್ದಾರೆ. ಸ್ಥಳೀಯರು ಆ್ಯಂಬುಲೆನ್ಸ್ ಕರೆಸಿ ಆಸ್ಪತ್ರೆಗೆ ಶವವನ್ನು ಸಾಗಿಸಲಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗೊಬ್ಬರ ಬೆಲೆ ಹೆಚ್ಚಳ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ



ಕೊಳ್ಳೇಗಾಲದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ರಾಸಾಯನಿಕ ಗೊಬ್ಬರದ ಬೆಲೆ ಏರಿಕೆ ಖಂಡಿಸಿ ಪ್ರತಿಭಟಿಸಿದರು.

ಕೊಳ್ಳೇಗಾಲ. ಜು.17–ಕೇಂದ್ರ ಸರ್ಕಾರ ರಾಸಾಯನಿಕ ರಸಗೊಬ್ಬರ ಬೆಲೆಯನ್ನು ಏರಿಕೆ ಮಾಡಿರುವ ಕ್ರಮವನ್ನು ವಿರೋಧಿಸಿ, ಯುವ ಕಾಂಗ್ರೆಸ್ ಪದಾಧಿಕಾರಿಗಳು ಗುರುವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು

ಪಟ್ಟಣದ ಎಡಿಬಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಕೇಂದ್ರ ಸರ್ಕಾರ ಈಗಾಗಲೇ ಜಿಎಸ್ಟಿ ಜಾರಿಗೆ ತರುವ ಮೂಲಕ ಜನರಿಗೆ ಬಹಳಷ್ಟು ಬೆಲೆ ಏರಿಕೆ ಬಿಸಿ ಮುಟ್ಟಿಸಿ ತೊಂದರೆ ಉಂಟಾಗುವಂತೆ ಮಾಡಿದೆ. ಇದರ ಜೊತೆಗೆ ಕೃಷಿ ಬಳಕೆಗೆ ಇರುವ ರಸಗೊಬ್ಬರದ ಬೆಲೆ ಏರಿಕೆ ಮಾಡಿರುವುದು ಖಂಡನೀಯ, ಕೂಡಲೇ ರಸಗೊಬ್ಬರ ಬೆಲೆ ಇಳಿಕೆಗೆ ಮುಂದಾಗಬೇಕು, ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಚಾ.ನಗರ ಜಿಲ್ಲಾಧ್ಯಕ್ಷ ಯೋಗೇಂದ್ರ, ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ದರ್ಶನ್, ಬ್ಲಾಕ್ ಅಧ್ಯಕ್ಷ ಅಜಯ್, ರಾಜ್ಯ ಯುವ ಕಾರ್ಯದರ್ಶಿ ಚೇತನ್, ಉಸ್ತುವಾರಿಗಳಾದ ಸೈಯದ್ ಮುಸೈಬ್, ಯಳಂದೂರು ವಿಜಯ್, ನಂಜುಂಡಶೆಟ್ಟಿ, ಅರುಣ್, ಅಪ್ಪು, ಮಣಿಕಂಠ, ಹಂಪಾಪುರ ಮಹೇಶ್ ಇನ್ನಿತರಿದ್ದರು.

ನೆನಪಿನ ಭವನದ ಆಹ್ವಾನ ಪತ್ರಿಕೆ ಬಿಡುಗಡೆ

ಗುಂಡ್ಲುಪೇಟೆ ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಉದ್ಘಾಟನೆಗೊಳ್ಳಲಿರುವ ಡಾ.ಜಿ.ಪರಮೇಶ್ವರ–75 ನೆನಪಿನ ಭವನದ ಆಹ್ವಾನ ಪತ್ರಿಕೆಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮೈಸೂರಿನಲ್ಲಿ ಬಿಡುಗಡೆ ಮಾಡಿದರು. ಕಾರ್ಯಕ್ರಮದ ರೂವಾರಿ ಪ್ರೊ. ಮಾದೇವ ಭರಣಿ, ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ವಕೀಲ ಕಾಂತರಾಜ್, ಪರಮೇಶ್ವರ ಅಭಿಮಾನಿ ಬಳಗದ ಮೈಸೂರು ಜಿಲ್ಲಾಧ್ಯಕ್ಷ ಗಟ್ಟವಾಡಿ ಸಿ.ಮಂಜುನಾಥ್ ಇದ್ದರು.



ಕಾಲೇಜಿನ ಆಡಳಿತ ಮಂಡಳಿ ವಿರುದ್ಧ ವಿದ್ಯಾರ್ಥಿಗಳ ಪರ, ವಿರೋಧ ಪ್ರತಿಭಟನೆ



ಕಾಲೇಜಿನ ವಿದ್ಯಾರ್ಥಿಗಳು ಆಡಳಿತ ಮಂಡಳಿ ಪರ ವಿರೋಧ ಪ್ರತಿಭಟನೆ ನಡೆಸಿದರು

ಚಾಮರಾಜನಗರ: ನಗರದ ಶಂಕರಪುರ ಬಡಾವಣೆಯಲ್ಲಿರುವ ಸೇವಾ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮುಂಭಾಗ ಸಂಸ್ಥೆ ವಿದ್ಯಾರ್ಥಿಗಳಿಂದ ಪರ ಹಾಗೂ ವಿರೋಧ ಪ್ರತಿಭಟನೆ ನಡೆಯಿತು.

ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹಾಗೂ ಪೋಷಕರು ಆಡಳಿತ ಮಂಡಳಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಂತೆ ಕಾಮರ್ಸ್ ವಿದ್ಯಾರ್ಥಿಗಳು ಪರವಾಗಿ ಪ್ರತಿಭಟನೆ ನಡೆಸಿ, ಕಾಲೇಜಿನ ಪರ ಹಾಗೂ ಜೈ ಶ್ರೀರಾಮ್ ಎಂದು ಘೋಷಣೆ ಕೂಗಿದರು. ಇದರಿಂದ ಕಾಲೇಜಿನ ಆವರಣದಲ್ಲಿ ಉದ್ವಿಗ್ನತೆ ಸೃಷ್ಟಿಯಾಯಿತು.

ಶಾರದ ಅಕಾಡೆಮಿ ಪ್ರಾರಂಭಿಸಲು ಆಗ್ರಹ: ಕಾಲೇಜಿನಲ್ಲಿ ಮೊದಲ ಹಾಗೂ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗವನ್ನು ಶಾರದಾ ಅಕಾಡೆಮಿಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಿಯುಸಿ ಪ್ರಾರಂಭದಲ್ಲೇ ಎನ್‌ಇಟಿ, ಸಿಇಟಿ ಹಾಗೂ ಜೆಇಇ ಕೋರ್ಸ್‌ಗಳಿಗೆ ತರಬೇತಿ ನೀಡಲಾಗುತ್ತದೆ ಎಂದು ಭರವಸೆ ನೀಡಿದ್ದರ ಮೇರೆಗೆ ಸೇವಾ ಭಾರತಿ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಂಡಿದ್ದವು. ಆದರೆ, ಏಕಾಏಕಿ ಶಾರದಾ ಅಕಾಡೆಮಿಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದ ಕೈಬಿಟ್ಟು ನಾವೇ ಉತ್ತಮ ಶಿಕ್ಷಣವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ಆರೋಪಿಸಿದರು. ಶಾರದಾ ಅಕಾಡೆಮಿಯೇ ಮುಂದುವರೆಯಬೇಕು. ಇಲ್ಲವೇ ನಮಗೆ ಟಿಸಿ ಹಾಗೂ ಕಟ್ಟಿರುವ ಶುಲ್ಕವನ್ನು ವಾಪಸ್ ನೀಡಬೇಕು ಎಂದು ಒತ್ತಾಯಿಸಿದರು.

ಕಾಲೇಜಿನ ಪರವಾಗಿ ಪ್ರತಿಭಟನೆ: ಕಾಲೇಜಿನ ಆಡಳಿತ ಮಂಡಳಿ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ವಿಚಾರ ತಿಳಿದ ಕಾಲೇಜಿನ ಕಾಮರ್ಸ್ ವಿಭಾಗದ ವಿದ್ಯಾರ್ಥಿಗಳು ತರಗತಿಯಿಂದ ಹೊರ ಬಂದು ಜೈಶ್ರೀ ರಾಮ್, ಜೈ ಸೇವಾ ಭಾರತಿ ಘೋಷಣೆ ಕೂಗಿದರು. ಈ ವೇಳೆ ಎರಡು ಗುಂಪುಗಳ ನಡುವೆ ಘೋಷಣೆ ಅತಿರೇಕಕ್ಕೆ ಹೋಗುತ್ತಿದ್ದಂತೆ ಕಾಲೇಜಿನ ಉಪನ್ಯಾಸಕರು ಮಧ್ಯ ಪ್ರವೇಶಿಸಿ ವಿದ್ಯಾರ್ಥಿಗಳನ್ನು ತರಗತಿಗೆ ಕಳುಹಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಸಂಸ್ಥೆಯ ಬಾಲಸುಬ್ರಹ್ಮಣ್ಯ ಮಾತನಾಡಿ, ನಮ್ಮ ಸಂಸ್ಥೆಗೂ ಹಾಗೂ ಶಾರದಾ ಅಕಾಡೆಮಿಗೂ ಆಂತರಿಕ ಕಾರಣದಿಂದ ಒಪ್ಪಂದ ರದ್ದಾಗಿದೆ. ಶನಿವಾರ ಕಾಲೇಜಿನಲ್ಲಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಾರದಾ ಅಕಾಡೆಮಿಯೊಂದಿಗೆ ಸಭೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.







ಡಾ.ಬಿ.ಸರೋಜಾದೇವಿ

ಕನ್ನಡ ಚಿತ್ರರಂಗದ ಅನಭಿಷಿಕ್ತ ರಾಣಿ– ತಮಿಳರ ಪಾಲಿನ ಕನ್ನಡದ ಅರಗಿಣಿ

ಸುಮಾರು ಏಳು ದಶಕಗಳವರೆಗೆ ತಮ್ಮ ಮನೋಜ್ಞ ಅಭಿನಯ, ಚಾತುರ್ಯ ದಿಂದ ಕೋಟ್ಯಾಂತರ ಸಿನಿರಸಿಕರ ಹೃದಯದಲ್ಲಿ ಅಳಿಸಲಾಗದ ಛಾಪು ಮೂಡಿಸಿದ್ದ, ಅಭಿನಯ ಸರಸ್ವತಿ, ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತೆ ಡಾ.ಬಿ.ಸರೋಜಾದೇವಿ ಅವರದು ತುಂಬು ಜೀವನೋತ್ಸವ. ರಾಮನಗರ ಜಿಲ್ಲೆ(ಬೆಂಗಳೂರು ದಕ್ಷಿಣ ಜಿಲ್ಲೆ) ಚನ್ನಪಟ್ಟಣ ತಾಲೂಕಿನ ದಶವಾರ ಗ್ರಾಮದ ಭೈರಪ್ಪ ಮತ್ತು ರುದ್ರಮ್ಮ ದಂಪತಿಯ ಪುತ್ರಿಯಾದ ಸರೋಜಾದೇವಿ ಅವರು ಬಾಲ್ಯದಿಂದಲೂ ಹಾಡುಗಾರಿಕೆ, ನೃತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡವರು.

ತಮ್ಮ 17ನೇ ವಯಸ್ಸಿನಲ್ಲೇ ಮಹಾಕವಿ ಕಾಳಿದಾಸ(1955) ಚಿತ್ರದ ಮೂಲಕ ನಟನೆಗೆ ಪಾದಾರ್ಪಣೆ ಮಾಡಿದ ಅವರು ಕನ್ನಡ ಅಲ್ಲದೆ ತಮಿಳು, ತೆಲುಗು, ಹಿಂದಿ ಭಾಷೆಯ ಚಿತ್ರಗಳಲ್ಲೂ ಅಭಿನಯಿಸಿ ಚತುರ್ಭಾಷಾ ತಾರೆ ಅನಿಸಿಕೊಂಡಿದ್ದರು. ದಕ್ಷಿಣಭಾರತ ಚಿತ್ರರಂಗದ ಮೊದಲ ಮಹಿಳಾ ಸೂಪರ್‌ಸ್ಟಾರ್ ಕೀರ್ತಿಗೂ ಪಾತ್ರರಾದ ಇವರು ಆಗಿನ ಕಾಲದ ಅತ್ಯಧಿಕ ಸಂಭಾವನೆ ಪಡೆಯುವ ಕಲಾವಿದೆ ಎಂಬ ಹೆಗ್ಗಳಿಕೆಗೂ ಪಾತ್ರರಾದವರು.

1957ರಲ್ಲಿ ಪಾಂಡುರಂಗ ಮಹಾತ್ಮಂ ಮೂಲಕ ತೆಲುಗು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಇವರು ನಂತರ ಎನ್‌ಟಿಆರ್, ನಾಗೇಶ್ವರರಾವ್‌ರಂತಹ ದಿಗ್ಗಜರ ಚಿತ್ರಗಳಲ್ಲೂ ಅಭಿನಯಿಸಿದರು. 1958ರಲ್ಲಿ ತಮಿಳು ಸೂಪರ್‌ಸ್ಟಾರ್ ಎಂಜಿಆರ್ ನಿರ್ಮಿಸಿ, ನಿರ್ದೇಶಿಸಿ, ನಾಯಕನಾಗಿ ನಟಿಸಿದ 'ನಾಡೋಡಿ ಮನ್ನನ್' ಚಿತ್ರದಲ್ಲಿ ನಾಯಕಿಯಾಗುವ ಮೂಲಕ ತಮಿಳು ಚಿತ್ರರಂಗಕ್ಕೂ ಎಂಟ್ರಿ ಕೊಟ್ಟರು. ಅವರ ಜತೆ ಸತತವಾಗಿ 26 ಯಶಸ್ವೀ ಚಿತ್ರಗಳನ್ನು ಕೊಟ್ಟ ಖ್ಯಾತಿ ಸರೋಜಾದೇವಿ ಅವರದ್ದು. ಅಲ್ಲದೆ ಶಿವಾಜಿಗಣೇಶನ್ ಜೊತೆ 22, ಜೆಮಿನಿ ಗಣೇಶನ್ ಜೊತೆಗೆ 17 ತಮಿಳು ಸಿನಿಮಾಗಳಲ್ಲಿ ಅಭಿನಯಿಸಿದ್ದ ಸರೋಜಾದೇವಿ ಈ ಎಲ್ಲಾ ಚಿತ್ರಗಳ ಯಶಸ್ಸಿಗೆ ಕಾರಣರಾದರು.

ಕನ್ನಡದಲ್ಲಿ ಅಭಿನಯ ಸರಸ್ವತಿಯಾಗಿದ್ದ ಇವರನ್ನು ತಮಿಳಿನಲ್ಲಿ 'ಕನ್ನಡತ್ತು ಪೈಂಗಿಳಿ'(ಕನ್ನಡದ ಅರಗಿಣಿ) ಎಂದು ಅಲ್ಲಿನ ಚಿತ್ರರಂಗ ಮತ್ತು ಅಭಿಮಾನಿಗಳು ಗೌರವದಿಂದ ಕರೆಯುತ್ತಿದ್ದರು. ಅವರು ನಟಿಸುವಾಗಲೂ ನಿಜವಾದ ಬಂಗಾರದ ಆಭರಣಗಳನ್ನೇ ಮನೆಯಿಂದ ತರುತ್ತಿದ್ದರು.

ಕನ್ನಡದ ಕುಮಾರತ್ರಯರಾದ ಡಾ.ರಾಜ್‌ಕುಮಾರ್, ಉದಯಕುಮಾರ್, ಕಲ್ಯಾಣ್‌ಕುಮಾರ್ ಮೂವರ ಜತೆಗೂ ಸರೋಜಾದೇವಿ ನಟಿಸಿದ್ದರು. 70–80ರ ದಶಕದಲ್ಲಿ ಡಾ.ರಾಜ್‌ಕುಮಾರ್– ಡಾ.ಸರೋಜಾದೇವಿ ಅವರ ಜೋಡಿ ಜನಪ್ರಿಯವಾಗಿತ್ತು ಅಣ್ಣತಂಗಿ, ಮಲ್ಲಮ್ಮನ ಪವಾಡ, ನ್ಯಾಯವೇ ದೇವರು, ಬಬ್ರುವಾಹನ, ಭಾಗ್ಯವಂತರು ಚಿತ್ರಗಳಲ್ಲಿ ಈ ಜೋಡಿ ಕನ್ನಡ ಪ್ರೇಕ್ಷಕರನ್ನು ಮೋಡಿ ಮಾಡಿತ್ತು.

ಇವರು ಪ್ರತಿ ಪಾತ್ರದ ಆಳ ಅರಿತು ಪರಕಾಯ ಪ್ರವೇಶ ಮಾಡಿ ಅಭಿನಯಿಸುತ್ತಿದ್ದರು. ಕಿತ್ತೂರು ರಾಣಿ ಚೆನ್ನಮ್ಮ ಚಿತ್ರದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ, 'ನಿಮಗೇಕೆ ಕೊಡಬೇಕು ಕಪ್ಪ?' ಎಂದು ಕಣ್ಣರಳಿಸಿ ಘರ್ಜಿಸುವ ಅವರ ಡೈಲಾಗ್, ಅಭಿನಯ ಇಂದಿಗೂ ಜನಪ್ರಿಯ, ಶಾಲಾ ಕಾಲೇಜು ವಿದ್ಯಾರ್ಥಿಗಳು ಕಿತ್ತೂರುರಾಣಿ ಚೆನ್ನಮ್ಮನ ಪಾತ್ರ ಎಂದಾಗ ಬಿ.ಸರೋಜಾದೇವಿ ಪಾತ್ರ, ಸಂಭಾಷಣೆಯನ್ನೇ ಈಗಲೂ ಅನುಕರಿಸುತ್ತಾರೆ. ಕನ್ನಡದ ಮೊದಲ ವರ್ಣಚಿತ್ರ ಅಮರಶಿಲ್ಪಿ ಜಕಣಾಚಾರಿಯಲ್ಲಿ ಇವರ ನಟನೆ ಅಮೋಘ, ಅಲ್ಲದೆ ಹಿಂದಿಯಲ್ಲಿ ದಿಲೀಪ್‌ಕುಮಾರ್, ರಾಜೇಂದ್ರ ಕುಮಾರ್, ಶಮ್ಮಿಕಪೂರ್ ಹಾಗೂ ಸುನಿಲ್ ದತ್‌ರೊಂದಿಗೂ ಸರೋಜಾದೇವಿ ನಟಿಸಿದ್ದರು.

ಸರೋಜಾದೇವಿಯವರ ವ್ಯಕ್ತಿತ್ವ ಮತ್ತು ವೃತ್ತಿಜೀವನವನ್ನು ರೂಪಿಸುವಲ್ಲಿ ಅವರ ತಂದೆ–ತಾಯಿಯ ಪಾತ್ರ ದೊಡ್ಡದು. ತಂದೆ ಭೈರಪ್ಪನವರು ಮಗಳಲ್ಲಿನ ಕಲಾಪ್ರತಿಭೆಯನ್ನು ಗುರುತಿಸಿ, ಆಕೆಯ ನೃತ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದರು. ತಂದೆಯ ಪ್ರೋತ್ಸಾಹವೇ ಅವರನ್ನು ಚಿತ್ರರಂಗಕ್ಕೆ ಕರೆತಂದಿತೆನ್ನಬಹುದು.

ಕೊನೆಯವರೆಗೂ ಅವರು ಈಜುಡುಗೆ, ತೋಳಿಲ್ಲದ ರವಿಕೆಯನ್ನು ಸಹ ಯಾವುದೇ ಚಿತ್ರಗಳಲ್ಲಿ ಧರಿಸಿಲ್ಲ, ಇದು ಅವರ ತಾಯಿಯ ಕಟ್ಟಪ್ಪಣೆ ಕೂಡ ಆಗಿತ್ತು. ತಾಯಿಯ ಶಿಸ್ತು ಅವರನ್ನು ಪ್ರೇಕ್ಷಕರು ಮೆಚ್ಚುವ ಸಾಂಪ್ರದಾಯಿಕ ನಾಯಕಿಯ ಚೌಕಟ್ಟಿನಲ್ಲಿರಿಸಿತು.





"ಸು ಫ್ರಮ್ ಸೋ" ಟ್ರೈಲರ್ ಬಿಡುಗಡೆ







ಲೈಟರ್ ಬುದ್ಧ ಫಿಲಂಸ್ ಅಡಿ ಶಶಿಧರ ಶೆಟ್ಟಿ ಬರೋಡಾ, ರವಿರೈ ಕಳಸ ಹಾಗೂ ರಾಜ್ ಬಿ.ಶೆಟ್ಟಿ ಅವರ ನಿರ್ಮಾಣದ, ಜೆಪಿ ತುಮಿನಾಡು ನಿರ್ದೇಶನದ "ಸು ಫ್ರಮ್ ಸೋ" ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ಕಾಮಿಡಿ ಹಾರರ್ ಕಥಾಹಂದರ ಇರುವ ಈ ಚಿತ್ರ ಜು.25ರಿಂದ ರಾಜ್ಯಾದ್ಯಂತ ತೆರೆಗೆ ಬರಲಿದೆ.

ರಂಗಭೂಮಿಯಲ್ಲಿ ಸಾಕಷ್ಟು ಹೆಸರು ಮಾಡಿರುವ ಗೆಳೆಯ ಜೆಪಿ ತುಮಿನಾಡು ಅವರ ನಿರ್ದೇಶನದ ಚಿತ್ರವಿದು. ಆರು ವರ್ಷಗಳ ಹಿಂದೆಯೇ ಅವರು ಸಿದ್ಧಮಾಡಿಕೊಂಡಿದ್ದ ಕಥೆ ಇದೀಗ ಸಿನಿಮಾ ರೂಪ ಪಡೆದುಕೊಂಡಿದೆ. ನಾನು ಬಹಳ ಇಷ್ಟಪಡುವ ಕಾಮಿಡಿ ಜಾನರ್ ಚಿತ್ರವಿದು. "ಸು ಫ್ರಮ್ ಸೋ: ಎಂದರೆ ಸುಲೋಚನ ಹಾಗೂ ಸೋಮೇಶ್ವರ ಎಂಬ ಪಾತ್ರ ಹಾಗೂ ಸ್ಥಳದ ಹೆಸರು. ಬಹುತೇಕ ಹೊಸತಂಡವೇ ಸೇರಿ ಮಾಡಿರುವ ಈ ಚಿತ್ರಕ್ಕೆ ಬೆಳ್ತಂಗಡಿ, ವೇಣೂರು, ಕಕ್ಯಪದವು ಸುತ್ತಮುತ್ತ 50 ದಿನಗಳವರೆಗೆ ಚಿತ್ರೀಕರಣ ನಡೆದಿದೆ. ನಿರ್ದೇಶಕ ಜೆಪಿ ತುಮಿನಾಡು, ಶನೀಲ್ ಗೌತಮ್, ಪ್ರಕಾಶ್ ಕೆ ತುಮಿನಾಡು, ದೀಪಕ್ ರೈ ಪಣಜೆ, ಮೈಂ ರಾಮದಾಸ್, ಅರ್ಜುನ್ ಕಜೆ ಮುಂತಾದವರು ನಟಿಸಿದ್ದಾರೆ. ಚಂದ್ರಶೇಖರ್ ಅವರ ಛಾಯಾಗ್ರಹಣ, ಸುಮೇಧ್ ಕೆ. ಅವರ ಸಂಗೀತ ನಿರ್ದೇಶನ ಈ ಚಿತ್ರದ ಹೈಲೈಟ್ ಎಂದರೆ ತಪ್ಪಾಗಲಾರದು. ಹಿನ್ನೆಲೆ ಸಂಗೀತ ಸಂದೀಪ್ ತುಳಸಿದಾಸ್ ಅವರದು. ಈಗಾಗಲೇ ಚಿತ್ರದ ಫಸ್ಟ್‌ಲುಕ್ ಪೋಸ್ಟರ್, ಡಾಕ್ಸ್ ಅಂಥವ್ ಹಾಡು ಹಾಗೂ ಟ್ರೇಲರ್ ಈಗಾಗಲೇ ಜನರ ಮನ ತಲುಪಿದೆ ಎಂದು ನಿರ್ಮಾಪಕರಲ್ಲೊಬ್ಬರಾದ ರಾಜ್ ಬಿ. ಶೆಟ್ಟಿ ತಿಳಿಸಿದರು.

ನಿರ್ದೇಶಕ ಜೆಪಿ ತುಮಿನಾಡು ಮಾತನಾಡುತ್ತಾ, ನಿರ್ದೇಶಕನಾಗಬೇಕೆಂದು ಚಿತ್ರರಂಗಕ್ಕೆ ಬಂದ ನಾನು, ನಟನಾದೆ. ಈಗ ಕೆಲ ವರ್ಷಗಳ ನಂತರ ಮೊದಲ ಬಾರಿಗೆ ನಿರ್ದೇಶನ ಮಾಡಿದ್ದೇನೆ. ಇದೊಂದು ಕಾಲ್ಪನಿಕ ಕಥಾಹಂದರ. ಸುಲೋಚನಳಿಗೂ ಹಾಗೂ ಸೋಮೇಶ್ವರಕ್ಕೂ ಏನು ಸಂಬಂಧ ಎನ್ನುವುದು ಚಿತ್ರನೋಡಿದಾಗ ಅರ್ಥವಾಗುತ್ತೆ. ನೋಡುಗರನ್ನು ನಗೆಗಡಲಿನಲ್ಲಿ ತೇಲಿಸುವ ಕಥೆಯೂ ಹೌದು. ಜುಲೈ 25ಕ್ಕೆ ಒಂದೊಳ್ಳೆ ಚಿತ್ರ ನಿಮ್ಮ ಮುಂದೆ ಬರುತ್ತಿದೆ ಎಂದರು

ಚಿತ್ರದಲ್ಲಿ ಆರು ಹಾಡುಗಳಿರುವುದಾಗಿ ಸಂಗೀತ ನಿರ್ದೇಶಕ ಸುಮೇಧ್ ಅವರು ತಿಳಿಸಿದರು. ಕಲಾವಿದರಾದ ದೀಪಕ್ ರೈ ಪಣಜೆ, ಶನೀಲ್ ಗೌತಮ್, ಸಂಧ್ಯಾ ಅರಕೆರೆ, ಮೈಮ್ ರಾಮದಾಸ್ ಇವರೆಲ್ಲ ತಂತಮ್ಮ ಪಾತ್ರಗಳ ಬಗ್ಗೆ ಚಿಕ್ಕದಾಗಿ ಮಾಹಿತಿ ನೀಡಿದರು. ಎಕ್ಸಕ್ಯೂಟಿವ್ ಪ್ರೊಡ್ಯೂಸರ್ ಬಾಲು ಕುಮಟಾ ಕೂಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ನೀ ಹೋದ ಮೇಲೆ...' ಭಟ್ಟರ ಶೃಂಗಾರಗೀತೆ



ಹಿರಿಯಕವಿ ಜಯಂತ್ ಕಾಯ್ಕಿಣಿ ಅವರು ಮತ್ತೆ ಮೊದಲಿಂದ ಎಂಬ ಗೀತಗುಚ್ಛದ ಸುಂದರ ಭಾವಗೀತೆ ನೀ ಹೋದಮೇಲೆ ಹಾಡನ್ನು ಬಿಡುಗಡೆ ಮಾಡಿದರು, ಯೋಗರಾಜ್ ಭಟ್ ಅವರ ರಚನೆಯ ಈ ಗೀತೆಗೆ ವಿ.ಹರಿಕೃಷ್ಣ ಸಂಗೀತ ಸಂಯೋಜಿಸಿದ್ದಾರೆ, ವಾಸುಕಿ ವೈಭವ್ ಸುಶ್ರಾವ್ಯವಾಗಿ ಹಾಡಿದ್ದಾರೆ. ಈ ಹಾಡಿನಲ್ಲಿ ನಟ ಸಂಜನ್ ಕಜೆ ಹಾಗೂ ಅಂಜಲಿಗೌಡ ಅಭಿನಯಿಸಿದ್ದಾರೆ.


'ಮತ್ತೆ ಮೊದಲಿಂದ' ಗೀತಸಂಕಲನದಲ್ಲಿ ನಾಲ್ಕು ವಿಭಿನ್ನ ಭಾವನೆಯ ಪ್ರೇಮಗೀತೆಗಳಿವೆ. ಪ್ರತಿಯೊಂದು ಹಾಡಿಗೂ ಬಣ್ಣಗಳ ಮೂಲಕ ಪ್ರತ್ಯೇಕ ವಿಶಿಷ್ಟತೆ ನೀಡಲಾಗಿದೆ. ಬಿಳಿ, ನೀಲಿ, ಕೆಂಪು ಮತ್ತು ಕೊನೆಯ ಹಾಡಿಗೆ ಹಸಿರು. ಈ ಪ್ರಯೋಗಕ್ಕೆ ಸಾಂಗತಿಕ ಪ್ರತಿಕ್ರಿಯೆ ದೊರಕಿದ್ದು, ಪ್ರೇಕ್ಷಕರ ಹೃದಯ ಗೆದ್ದಿದೆ.

ವೇದಿಕೆಯಲ್ಲಿ ಜಯಂತ್ ಕಾಯ್ಕಿಣಿ ಮಾತನಾಡುತ್ತಾ, ಪ್ರೇಮದಲ್ಲಿ ತೀವ್ರತೆಗೆ ತಲುಪುವ ಗೀತೆಗಳ ಬಹುಪಾಲು ಮನುಷ್ಯ ಪ್ರೀತಿಯ ಅಂತರದಲ್ಲಿ ಮೂಡಿಸುವ ತೀವ್ರತೆಯಿಂದ ಜನಪ್ರಿಯವಾಗುತ್ತವೆ. ಯೋಗರಾಜ್ ಭಟ್ ಅವರು ಅಂತಹ ಭಾವನೆಗಳನ್ನು, ಗಂಭೀರವಾಗಿ ಹಿಡಿದು ಹಾಡುಗಳಲ್ಲಿ ತೋರಿಸುತ್ತಾರೆ. ಈ ಹಾಡು ಕೂಡ ಆ ಸಾಲಿಗೆ ಸೇರಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗಾಯಕ ವಾಸುಕಿ ವೈಭವ್ ಮಾತನಾಡಿ, ಯೋಗರಾಜ್‌ಭಟ್ ಅವರ ಸಾಹಿತ್ಯದಲ್ಲಿ ಹಾಡುಗಳು ಗಂಭೀರ ಅರ್ಥ ಹೊಂದಿರುತ್ತವೆ. ಈ ಹಾಡು ನನಗೂ ವಿಶೇಷ ಅನುಭವ ನೀಡಿದೆ ಎಂದರು. ನಟ ಸಂಜನ್ ಕಜೆ ಮಾತನಾಡಿ, ಈ ಹಾಡಿನಲ್ಲಿ ನಟಿಸುವ ಅವಕಾಶ ಸಿಕ್ಕಿದ್ದು ತಮ್ಮ ಪಾಲಿನ ಅದೃಷ್ಟ ಎಂದರು. ಈ ಪ್ರಯೋಗಾತ್ಮಕ ಗೀತಗೋಷ್ಠಿಗೆ ರೇಣುಕಾ ಯೋಗರಾಜ್ ಭಟ್, ಶ್ರೀನಿಧಿ ದರ್ಬೆ ಮತ್ತು ಶಿಲ್ಪಪ್ರಸನ್ನ ಅವರು ನಿರ್ಮಾಪಕರಾಗಿ ಸಾಥ್ ನೀಡಿದ್ದಾರೆ.

ನಾಲ್ಕು ಭಾಷೆಗಳಲ್ಲಿ 'ರಾಜ ನಿವಾಸ' ಟ್ರೈಲರ್





ಕಾಂತಾರ ಶೈಲಿಯ ದೇವರು, ದೈವದ ಮಹಿಮೆಯ ಕಥಾಹಂದರ ಒಳಗೊಂಡ ಚಿತ್ರ ರಾಜನಿವಾಸ. ಡಿ.ಪಿ.ಆಂಜನಪ್ಪ ಅವರ ನಿರ್ಮಾಣದ ಈ ಚಿತ್ರಕ್ಕೆ ಮಿಥುನ್ ಅವರ ನಿರ್ದೇಶನವಿದೆ. ಇತ್ತೀಚೆಗೆ ರಾಜನಿವಾಸ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ನೆರವೇರಿತು. ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರು ಟ್ರೇಲರ್‌ಗೆ ಚಾಲನೆ ನೀಡಿದರು, ಈ ಚಿತ್ರದಲ್ಲಿ ನಾಯಕನಾಗಿ ರಾಘವ್ ಹಾಗೂ ನಾಯಕಿಯಾಗಿ ಕೃತಿಕಾ ರವೀಂದ್ರ ಅಭಿನಯಿಸಿದ್ದಾರೆ. ವಿಶೇಷ ಪಾತ್ರದಲ್ಲಿ ಶ್ರೀನಗರ ಕಿಟ್ಟಿ ಕಾಣಿಸಿಕೊಂಡಿದ್ದಾರೆ.

ಕನ್ನಡ ಚಿತ್ರರಂಗದ ಇಂದಿನ ಪರಿಸ್ಥಿತಿ ಬಗ್ಗೆ ನೋಡಿದಾಗ ಬಹಳ ಬೇಸರವಾಗುತ್ತದೆ. ಹಿಂದೆ ಡಾ.ರಾಜಕುಮಾರ್ ಅವರ ಜೊತೆಗೆ ಚಿತ್ರರಂಗದ ಪರವಾಗಿ ಸಾಕಷ್ಟು ಹೋರಾಟಗಳಲ್ಲಿ ಭಾಗಿಯಾಗಿದ್ದೆ. ನಿರ್ಮಾಪಕ ಆಂಜನಪ್ಪ ಅವರು ಬಹಳ ವರ್ಷಗಳಿಂದ ನಮ್ಮ ಜತೆ ಇದ್ದಾರೆ. ಕನ್ನಡಪರ ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ಅವರ ನಿರ್ಮಾಣದ ರಾಜನಿವಾಸ ಚಿತ್ರ ದೊಡ್ಡಮಟ್ಟದ ಯಶಸ್ಸನ್ನು ಕಾಣಲಿ ಎಂದು ಹಾರೈಸಿದರು.


ನಿರ್ದೇಶಕ ಮಿಥುನ್ ಮಾತನಾಡುತ್ತಾ, ಟ್ರೈಲರ್ ನೋಡಿದಾಗ ಕೆಲವರಿಗೆ ಕಾಂತಾರ ಚಿತ್ರ ನೆನಪಾಗಬಹುದು. ಆದರೆ ಆ ಚಿತ್ರಕ್ಕೂ ಮೊದಲೇ ಆರಂಭವಾದ ಚಿತ್ರವಿದು. ಕಾಂತಾರ ಮೊದಲು ಬಿಡುಗಡೆಯಾಯಿತು. ಆ ಚಿತ್ರ ನೋಡಿದ ಮೇಲೆ ನಮ್ಮ ಚಿತ್ರದಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಂಡೆವು. ಕನ್ನಡ, ತಮಿಳು, ತೆಲುಗು ಸೇರಿದಂತೆ ನಾಲ್ಕು ಭಾಷೆಗಳಲ್ಲಿ ರಾಜನಿವಾಸ ಬಿಡುಗಡೆಯಾಗಲಿದೆ. ಸದ್ಯದಲ್ಲೇ ಮೊದಲ ಹಾಡನ್ನು ರಿಲೀಸ್ ಮಾಡಲಿದ್ದೇವೆ ಎಂದರು. ನಿರ್ಮಾಪಕ ಆಂಜನಪ್ಪ ಮಾತನಾಡುತ್ತಾ, ನಮ್ಮ ಚಿತ್ರದ ಟ್ರೇಲರ್ ಎಲ್ಲರಿಗೂ ಇಷ್ಟವಾಗಿದೆ. ಚಿತ್ರ ಅದಕ್ಕಿಂತ ಚೆನ್ನಾಗಿದೆ. ಸಿನಿಮಾ ಚೆನ್ನಾಗಿ ಮೂಡಿ ಬರಲು ನಿರ್ದೇಶಕರು ಹಾಗೂ ಚಿತ್ರತಂಡದ ಶ್ರಮ ಬಹಳಷ್ಟಿದೆ ಎಂದರು.

ಸಹ ನಿರ್ಮಾಪಕ ಲೋಕೇಶ್‌ಗೌಡ, ನಾಯಕ ರಾಘವ ಹಾಗೂ ನಾಯಕಿ ಕೃತಿಕಾ ರವೀಂದ್ರ ತಮ್ಮ ಪಾತ್ರದ ಬಗ್ಗೆ ಮಾತನಾಡಿದರು. ಕಲಾವಿದರಾದ ನೀನಾಸಂ ಅಶ್ವಥ್, ಯಮುನಾ ಶ್ರೀನಿಧಿ, ಸಹನ ಹಾಗೂ ಸಂಗೀತ ನಿರ್ದೇಶಕ ವಿಜಯ್ ಯಾರ್ಡ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿನಿಪದಬಂಧ-585



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ನಾಲ್ಕು ದಿಕ್ಕುಗಳಲ್ಲಿ ಸುದ್ದಿ ಅಡಗಿದೆ 2
2. ಶಂಕರ್‌ನಾಗ್ – ಮಹಾಲಕ್ಷ್ಮಿ ಕುಟುಂಬದಲ್ಲಿನ ರಹಸ್ಯ 6
4. ಟೈಗರ್ ಪ್ರಭಾಕರ್ ಅಭಿನಯದಲ್ಲಿ ಹರಿದಾಡಿದ ರುಧಿರ 5
7. ವಿಷ್ಣುವರ್ಧನ್ – ಮಂಜುಳಾ ಜೊತೆಯಾಗಲು ಜೋಸೈಮನ್ ನಿರ್ದೇಶಕ 4
8. ಟಿ. ಎಸ್. ನಾಗಾಭರಣ ಚಿತ್ರ ಇನ್ನೊಬ್ಬರ ಶಕ್ತಿಯಿಂದ "ಬಿಡುಗಡೆ"ಯಾಗಿದೆ 4
10. ಕನ್ನಡದ ಲೇಡಿ ಟೈಗರ್ 4
11. ಶಿವರಾಜ್‌ಕುಮಾರ್ ಕಂಡ ಸ್ವಪ್ನ ಪಲ್ಲವಿಸಿದೆ 7
14. ಪುಂಗಿ ಹಿಡಿದವನು 4
15. ರವಿಚಂದ್ರನ್‌ನ ತಂದೆಯ ತಂದೆ 4
17. ಪಲ್ಲವಿ ಅನುಪಲ್ಲವಿ ಚಿತ್ರದ ನಾಯಕ 6
19. ಪ್ರಣಯ ರಾಜ ಈ ನಟ 3

ಮೇಲಿನಿಂದ ಕೆಳಕ್ಕೆ

1. ನಮ್ಮ ದೇಶದ ರಾಜಧಾನಿ ಹೊಸದಾಗಿದೆ 3
2. ಶಿವಣ್ಣ – ವೀಣಾ ಅಭಿನಯದ ಚಿತ್ರವಿದು 3
3. ಕನ್ಯಾದಾನಕ್ಕೂ ಮುನ್ನ ವರನ ಬಗ್ಗೆ ವಿಚಾರಿಸಿ ಎನ್ನುವರ್ಥದ ಚಿತ್ರ 8
4. ನಿರ್ದೇಶಕ ಎಸ್. ನಾರಾಯಣ್ ಪುತ್ರನ ಹಕ್ಕಿಗಳ ಗಾನ 8
5. " ಏನೋ ಮೋಹ ಏಕೋ _ _ ಸುಡುತಿದೆ ವಿರಹ ಬಯಸಿ ಸನಿಹ..... ", 2
6. ಯಶ್ – ಮೇಘನಾರಾಜ್ ಅಭಿನಯದ ಚಿತ್ರ 4
7. ಸಿ. ಆರ್. ಸಿಂಹನ ಅಧಿಕಾರದ ಪೀಠ 4
9. ಚಂದ್ರನಿಂದ ಆಕರ್ಷಿತವಾದ ಪಕ್ಷಿ 3
12. ಇಂದ್ರಜಿತ್ ವಿಷ್ಣುವಿನ ಕೊನೆಯ ವೇಷ ತೊಟ್ಟಿದ್ದಾನೆ 2
13. ಅಮೃತವರ್ಷಿಣಿ ಚಿತ್ರದ ನಾಯಕಿ 4
16. ಬಾನು ಮುಸ್ತಾಕ್ ಅವರ ಮುಸ್ಲಿಂ ಮಹಿಳೆಯ ಕಥೆ ಇರುವ ಚಿತ್ರ 3
18. ವಿಷ್ಣುವರ್ಧನ್ ಇನ್ನೊಂದು ಜೀವಕೆ ಆಧಾರವಾದ ತ್ಯಾಗಮಯಿ 2

ಸಿನಿ ಪದಬಂಧ 584ರ ಉತ್ತರ

ಚೆ	ಲು	ವಿ	ನ	ಚಿ	ತ್ತಾ	ರ			ಭಿ	ಅ
ನ್ನಿ				ರಂ				ಪ		ರು
ಗ		ಹೊ	ಸ	ಜೀ	ವ	ನ		ರ	ಮ	ಣ
ರಾ				ವಿ		ಮ್ಮೂ		ಸಂ		ರಾ
ಯ	ಮ	ರಾ	ಜ		ಶ	ರ	ವೇ	ಗ		ಗ
			ನ			ಬ			ಜ	
	ಲೋ	ಕ	ನಾ	ಥ್		ಸ	ಪ್ತ	ಸಾ	ಗ	ರ
			ಯ			ವಿ			ದೇ	
ಸು	ಭ	ದ್ರಾ	ಕ	ಲ್ಯಾ	ಣ		ನಾ	ಗ	ಕ	ನ್ಯೆ
	ವಾ					ಸ್ವಾ			ವೀ	
ಮಾ	ನಿ	ನಿ		ಸ	ವ	ತಿ	ಯ	ನೆ	ರ	ಳು

ವಿಜೇತರು: ರವಿ.ಆರ್. ಮೋತಿಲಾಲ್ ಓಸ್ವಾಲ್, ಫೈನಾನ್ಷಿಯಲ್ ಸರ್ವಿಸಸ್ ಅಮಿಟೆಡ್, ನಂ.267, ರಮಾವಿಲಾಸ ರಸ್ತೆ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ನಾಳೆ ನಡೆಯುವ ಸಾಧನಾ ಸಮಾವೇಶ ಯಶಸ್ವಿಗೊಳಿಸಿ

ಕಾರ್ಯಕರ್ತರಿಗೆ ಸಂಸದ ಸುನೀಲ್ ಬೋಸ್ ಕರೆ

ತಿ.ನರಸೀಪುರ, ಜು.17– ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಹಾಗೂ ಜನಪರ ಯೋಜನೆಗಳೊಂದಿಗೆ ಉತ್ತಮ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಕೀಯ ಶಕ್ತಿ ತುಂಬಲು ಮೈಸೂರಿನಲ್ಲಿ ಜು.19 ರಂದು ಆಯೋಜಿಸಿರುವ ಸಾಧನಾ ಸಮಾವೇಶವನ್ನು ಕಾಂಗ್ರೆಸ್ ಕಾರ್ಯಕರ್ತರು ಯಶಸ್ವಿಗೊಳಿಸಬೇಕು ಎಂದು ಸಂಸದ ಸುನೀಲ್ ಬೋಸ್ ಕರೆ ನೀಡಿದರು.

ರಾಜ್ಯ ಸರ್ಕಾರದ 2 ವರ್ಷಗಳ ಸಾಧನಾ ಸಮಾವೇಶದ ಅಂಗವಾಗಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಪಂಚ ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನ ಹಾಗೂ ಅಭೂತಪೂರ್ವ ಅಭಿವೃದ್ಧಿ ಸಾಧನೆ ಪ್ರತೀಕವಾಗಿ ಆಯೋಜನೆಗೊಳ್ಳುತ್ತಿರುವ ಸಾಧನಾ ಸಮಾವೇಶಕ್ಕೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಜನರನ್ನು ಕರೆ ತರಬೇಕೆಂದು ಕಾರ್ಯಕರ್ತರು ಹಾಗೂ ಮುಖಂಡರಲ್ಲಿ ಮನವಿ ಮಾಡಿದರು.

ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಿನಲ್ಲಿ ಸಾಧನಾ ಸಮಾವೇಶ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಿದ್ದು, ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡ ಫಲಾನುಭವಿಗಳನ್ನು ಕಾರ್ಯಕರ್ತರು



ಸಭೆಯಲ್ಲಿ ಸಂಸದ ಸುನೀಲ್ ಬೋಸ್ ಮಾತನಾಡಿದರು.

ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಬೇಕು. ಜನರನ್ನು ಕರೆದೊಯ್ಯುವ ಬಸ್ಸುಗಳು ಖಾಲಿ ಇರದಂತೆ ನೋಡಿಕೊಳ್ಳಬೇಕು. ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೈ ಬಲಪಡಿಸುವ ಅಗತ್ಯತೆ ಇದೆ. ಹಾಗಾಗಿ ನರಸೀಪುರ ಹಾಗೂ ವರುಣ ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ತಮ್ಮ ಶಕ್ತಿ ಪ್ರದರ್ಶಿಸಬೇಕೆಂದು ಕರೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ಸರ್ಕಾರಿ ಸಾರಿಗೆ ಬಸ್ಸುಗಳಲ್ಲಿ ಮಹಿಳೆಯರ ಉಚಿತ ಪ್ರಯಾಣದ ಶಕ್ತಿ ಯೋಜನೆ 500 ಕೋಟಿ ದಾಟಿರುವುದು ದಾಖಲೆಯಾಗಿದೆ. ಇದೇ ರೀತಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲ ಆಗಿದೆ. ಹೀಗಾಗಿ ಹಳ್ಳಿಗಳಲ್ಲಿ ಸರ್ಕಾರದ ಸಾಧನೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು ಹೆಚ್ಚಿನ ಜನರನ್ನು ಸಾಧನಾ ಸಮಾವೇಶಕ್ಕೆ ಕರೆ ತರಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚಲುವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ. ವಜ್ರೇಗೌಡ, ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್, ಸೋಸಲೆ ಮಹದೇವಸ್ವಾಮಿ, ತಾಪಂ ಮಾಜಿ ಅಧ್ಯ ಕ್ಷರಾದ ಕುಕ್ಕೂರು ಗಣೇಶ್, ಎಂ.ಮಲ್ಲಿಕಾರ್ಜುನ ಸ್ವಾಮಿ, ಹೆಚ್.ಎನ್. ಉಮೇಶ್, ಮಾಜಿ ಸದಸ್ಯರಾದ ರಾಮಲಿಂಗಯ್ಯ, ನರಸಿಂಹಮಾದನಾಯಕ, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಯಚೇನಹಳ್ಳಿ ಅಶೋಕ್, ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಗ್ಗಲೀಪುರ ಕೆ.ಎಂ. ಮಧುಕುಮಾರ್, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ. ಜ್ಞಾನ ಪ್ರಕಾಶ್, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಪಿಎ ಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ, ಮುಖಂಡರಾದ ಹೆಮ್ಮಿಗೆ ಶೇಷಾದ್ರಿ, ಸೋಮಣ್ಣ, ಬೆನಕನಹಳ್ಳಿ ಶಿವಮಲ್ಲಪ್ಪ, ಪರಮೇಶ್ ಪಟೇಲ್, ದೊಡ್ಡನಹುಂಡಿ ನಂಜುಂಡಸ್ವಾಮಿ, ಜೆ. ಅನೂಪ್‌ಗೌಡ, ಉಕ್ಕಲಗೆರೆ ರಾಜು, ಮಲ್ಲಾಜಮ್ಮ, ಎನ್.ಕೋಕಿಲ, ವೀಣಾ ಶಿವಕುಮಾರ್, ಪಾರ್ವತಮ್ಮ, ಕುರುಬೂರು ಡಾ.ಬಸವರಾಜು, ಕಲಿಯೂರು ಶಿವಣ್ಣ, ಚಿದರವಳ್ಳಿ ಚಂದ್ರಶೇಖರ್, ಕೆಬ್ಬೆ ರಂಗಸ್ವಾಮಿ, ಕೆಬ್ಬೆಹುಂಡಿ ಶಿವರಾಮ್, ಮಹೇಶ್, ಶಿವಸಿದ್ದು ಹಾಗೂ ಇತರರಿದ್ದರು.

ಕಳೆದೆರಡು ವರ್ಷಗಳಲ್ಲಿ ಕೆ.ಆರ್.ನಗರಕ್ಕೆ 600 ಕೋಟಿ

ವಿವಿಧ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ: ಶಾಸಕ ರವಿಶಂಕರ್



ಬಳ್ಳೂರು ಅಣೆಕಟ್ಟೆ ಮೂಲಕ ಚಾಮರಾಜ ನಾಲೆಗಳಿಗೆ ನೀರು ಹರಿಸಲು ಕ್ರಸ್ಟ್ ಗೇಟ್‌ಗಳಿಗೆ ಪೂಜೆ ಸಲ್ಲಿಸಲಾಯಿತು.

ಚುಂಚನಕಟ್ಟೆ, ಜು.17– ಕಳೆದೆರಡು ವರ್ಷಗಳಲ್ಲಿ ಕೆ.ಆರ್.ನಗರ ಕ್ಷೇತ್ರಕ್ಕೆ 600 ಕೋಟಿ ರೂ. ಅನುದಾನ ತಂದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಸಕ್ಕರೆ ಗ್ರಾಮದ ಸಮೀಪ ಕಾವೇರಿ ನದಿಯಿಂದ ಬಳ್ಳೂರು ಅಣೆಕಟ್ಟೆ ಮೂಲಕ ಚಾಮರಾಜ ನಾಲೆಗಳಿಗೆ ನೀರು ಹರಿಸಲು ಕ್ರಸ್ಟ್ ಗೇಟ್‌ಗಳಿಗೆ ಪೂಜೆ ಸಲ್ಲಿಸಿ, ನಂತರ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಂದ ಅನುದಾನದಲ್ಲಿ 166 ಕೋಟಿ ನೀರಾವರಿ ಇಲಾಖೆಗೆ ಮತ್ತು 100 ಕೋಟಿಯಷ್ಟು ಸಣ್ಣ ನೀರಾವರಿ ಇಲಾಖೆಗೆ ನೀಡಲಾಗಿದೆ. ಹಾಡ್ಯ ಗ್ರಾಮಕ್ಕೆ 4 ಕೋಟಿ, ಕೊಳೂರು ಗ್ರಾಮಕ್ಕೆ 5 ಕೋಟಿ, ಹನಸೋಗೆ ಗ್ರಾಮಕ್ಕೆ 6 ಕೋಟಿ ವಿಶೇಷ ಅನುದಾನ ನೀಡಿರುವುದಾಗಿ ತಿಳಿಸಿದರು.

ಕ್ಷೇತ್ರದಲ್ಲಿರುವ ಚಾಮರಾಜ, ರಾಮಸಮುದ್ರ, ಕಟ್ಟೇಪುರ, ಹಾರಂಗಿ ಸೇರಿದಂತೆ ಎಲ್ಲಾ ನಾಲೆಗಳ ಕೊನೆ ಹಂತದವರಿಗೂ ತೂಬು ಮತ್ತು ಏರಿಗಳನ್ನು ಸರಿಪಡಿಸಿ, ಹೂಳು ಮತ್ತು ಗಿಡಗಂಟೆಗಳು ಇದ್ದರೆ ತೆಗಿಸಿ ನೀರು ಸರಾಗ ಹರಿಸುವ ಮೂಲಕ ರೈತರ ಹಿತ ಕಾಯಲು ನೀರಾವರಿ ಇಲಾಖೆ ಅಧಿಕಾರಿಗಳು ಮುಂದಾಗಬೇಕು. ರೈತರಿಂದ ದೂರು ಬಂದರೆ ತಾವು ಸಹಿಸುವುದಿಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ನೋಂದಣಿ ಕಾರ್ಯ ಪೂರ್ಣಗೊಂಡಿದ್ದರೂ, ಕೆಲವು ತಾಂತ್ರಿಕ ತೊಂದರೆಗಳು ಎದುರಾಗಿದ್ದು ಮುಖ್ಯ ಮಂತ್ರಿಗಳೊಂದಿಗೆ ಚರ್ಚಿಸಿ ಅದಷ್ಟು ಬೇಗ ಕಾರ್ಖಾನೆ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಕಬ್ಬು ಬೆಳೆಗಾರ ರೈತರು ಆಸತಂಕಪಡಬೇಡ ಎಂದರು.

ಇದೇ ವೇಳೆ ನೀರಾವರಿ ಇಲಾಖೆಯಿಂದ ಶಾಸಕ ಡಿ.ರವಿಶಂಕರ್ ಮತ್ತು ಸುನೀತಾ ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು. ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಉದಯಶಂಕರ್, ಎಂ.ಎಸ್.ಮಹದೇವ್, ಎಂ.ಜೆ. ರಮೇಶ್, ವಕ್ತಾರ ಸಯ್ಯದ್ ಜಾಬೀರ್, ಗ್ರಾಪಂ ಅಧ್ಯಕ್ಷೆ ಶೋಭಾ, ಸದಸ್ಯೆ ವಂದನಾ, ಕಾವ್ಯ ಬೀರೇಗೌಡ, ಗೌಡಯ್ಯ, ಮಹದೇವ, ನೂತನ್‌ಗೌಡ, ಗೌರಮ್ಮ, ರೈತರ ಸಂಘದ ಅಧ್ಯಕ್ಷ ನಾಗೇಶ್, ತಿಮ್ಮಪ್ಪ, ಶ್ರೀನಿವಾಸ್, ನೇತ್ರಾ ವತಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಪ್ರಸಾದ್, ಸೊಸೈಟಿ ಅಧ್ಯಕ್ಷರಾದ ಶಿವಕುಮಾರ್, ಪಾಪಣ್ಣ ಕಾಂಗ್ರೆಸ್ ಮುಖಂಡರಾದ ಸರಿತಾ, ಉಷಾ, ಲತಾ, ರಾಣಿ, ಸುಮಾ, ಚೈತ್ರ, ಎಲ್.ಐ.ಸಿ.ಜಗದೀಶ್, ಮಂಜಣ್ಣ, ಷಣ್ಮುಖ, ಯತೀಶ್, ಮಹೇಶ್, ರಂಗಸ್ವಾಮಿ, ಶಿವನಂದ್, ತ್ರಿತಂಬ ಕಸ್ವಾಮಿ, ಜಲೇಂದ್ರ, ಇಇ ಕುಶುಕುಮಾರ್, ಎಎಇ ಆಯಾಜ್ ಪಾಷ, ಆದರ್ಶ್, ರಾಜೇಂದ್ರಕುಮಾರ್, ಇಂಜಿನಿಯರ್‌ಗಳಾದ ಕಿರಣ್ ಕುಮಾರ್, ಕನ್ನಿಕಾ, ಉದಯ್, ಸಿಬ್ಬಂದಿಗಳಾದ ಪುಟ್ಟರಾಜ ನಾಯಕ್, ಸುಷ್ಮಿತಾ, ರವಿಕುಮಾರ್, ಆಪ್ತ ಸಹಾಯಕ ಮಹದೇವ್, ನವೀನ್, ಪುನೀತ್ ಇದ್ದರು.

ಬೈಕ್‌ಗೆ ಕೇರಳ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು



ಹುಣಸೂರು, ಜು.17– ಬೈಕ್‌ಗೆ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಮಂಟಿಬಿಳುಗಲಿ ಗ್ರಾಮದ ನಿವಾಸಿ ಗಣೇಶ್ ಅವರ ಪುತ್ರ ದರ್ಶನ್ (21) ಸಾವನ್ನಪ್ಪಿದವರು. ಈತ ಹುಣಸೂರು ಬೈಪಾಸ್ ರಸ್ತೆಯ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ತಜ್ಞನಾಗಿ ಕೆಲಸ ಮಾಡುತ್ತಿದ್ದ. ಬುಧವಾರ ರಾತ್ರಿ ಕರ್ತವ್ಯ ಮುಗಿಸಿ ಆಸ್ಪತ್ರೆಯಿಂದ ಬುಲೆಟ್ ಬೈಕ್‌ನಲ್ಲಿ ಹುಣಸೂರು ನಗರದ ಕಡೆಗೆ ತೆರಳಲು ಹೆದ್ದಾರಿಗೆ ಬರುತ್ತಿದ್ದ ವೇಳೆ ಮೈಸೂರು ಕಡೆಯಿಂದ ಕೇರಳಕ್ಕೆ ತೆರಳುತ್ತಿದ್ದ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಪೆಟ್ಟು ಬಿದ್ದು ದರ್ಶನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಅಪಘಾತದ ರಭಸಕ್ಕೆ ಬಸ್‌ನ ಮುಂಭಾಗ ಜಖಂಗೊಂಡಿದೆ. ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಬ್ರೌನ್ ಶುಗರ್ ಮಾರಲು ಯತ್ನ: ನಾಲ್ವರ ಬಂಧನ



ಬೈಲಕುಪ್ಪೆ, ಜು.17– ಇಲ್ಲಿನ ಟಿಬೆಟಿಯನ್ ಕ್ಯಾಂಪ್‌ನಲ್ಲಿ ಬ್ರೌನ್ ಶುಗರ್ (ಎಂಡಿಎಂಎ) ಮಾರಾಟ ಮಾಡಲು ಯತ್ನಿಸುತ್ತಿದ್ದ ನಾಲ್ವರು ಯುವಕರನ್ನು ಬೈಲಕುಪ್ಪೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಮೇಟಗಳ್ಳಿ ನಿವಾಸಿ ಹಾಗೂ ಸರ್ವೋಸ ವ್ಯಾಪಾರಿ ಅಖಿಲೇಶ್(22), ಕೊಡಗು ಮೂಲದ, ಬೈಲಕುಪ್ಪೆ ಶಾಂಗ್ರಿಲಾ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದ ಕಿಶನ್ (22), ಕೊಡಗು ಮೂಲದ ಪ್ರಥಮ ಎಂಸಿಎ ವಿದ್ಯಾರ್ಥಿ ಉಲ್ಲಾಸ್ (22), ಕುಶಾಲನಗರ ಮೂಲದ ವಿದ್ಯಾರ್ಥಿ ಚೇರಿಷ್ (24) ಬಂಧಿತ ಆರೋಪಿಗಳು. ಇವರೆಲ್ಲರೂ ಬೆಂಗಳೂರಿನಿಂದ ಬ್ರೌನ್ ಶುಗರ್ ತಂದು ಮಾರಾಟ ಮಾಡುತ್ತಿದ್ದ ವೇಳೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಮಾಲು ಸಮೇತ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಸಂಬಂಧ ಬೈಲುಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯ ಚರಣೆಯಲ್ಲಿ ಬೈಲಕುಪ್ಪೆ ಕ್ರೈಂ ಎಸ್‌ಐ ಹೆಚ್.ಎಸ್.ರವಿ, ಸಿಬ್ಬಂದಿಗಳಾದ ಸುರೇಶ್, ಮುದ್ದುರಾಜು, ತ್ರಿನೇಶ್, ವಿಜಯ್ ಪವಾರ್ ಭಾಗಿಯಾಗಿದ್ದರು.

ಶ್ರೀಚಾಮುಂಡೇಶ್ವರಿ ವರ್ಧಂತಿ: ಕೋಟೆ, ಸರಗೂರಲ್ಲಿ ವಿಶೇಷ ಪೂಜೆ





ಹೆಚ್.ಡಿ.ಕೋಟೆ, ಸರಗೂರಲ್ಲಿ ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ/ಸರಗೂರು, ಜು.17– ಶ್ರೀಚಾಮುಂಡೇಶ್ವರಿ ವರ್ಧಂತಿ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆ ಹಾಗೂ ಸರಗೂರಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ: ಪಟ್ಟಣದ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಗುರುವಾರ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ತಾಯಿ ಚಾಮುಂಡೇಶ್ವರಿಗೆ ಅರ್ಚಕರಾದ ಸತೀಶ್, ಸೋಮಶೇಖರ್ ಹೋಮ ಹವನ, ಪಂಚಾಮೃತ, ಎಳನೀರು, ತುಪ್ಪ, ಕುಂಕುಮ, ಅರಿಶಿನ, ಪುಷ್ಪ ಅಭಿಷೇಕ ಹಾಗೂ ಮಹಿಳೆಯರಿಂದ ಸಾಮೂಹಿಕ ಕುಂಕುಮಾರ್ಚನೆ, ಮಹಾ ಮಂಗಳಾರತಿ ನಡೆಯಿತು. ಬಳಿಕ ಸಾವಿರಾರು ಭಕ್ತರು ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಬಳಿಕ ಪ್ರಸಾದ ವಿತರಿಸಲಾಯಿತು.

ಸರಗೂರು: ಶ್ರೀಚಾಮುಂಡೇಶ್ವರಿ ವರ್ಧಂತಿ ಹಿನ್ನೆಲೆಯಲ್ಲಿ ಪಟ್ಟಣದ 8ನೇ ವಾರ್ಡ್ ಅಪ್ಪು ಸರ್ಕಲ್‌ನಲ್ಲಿ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮುಂಜಾನೆಯೇ ಶಾಮಿಯಾನ ಹಾಕಿ ತಳಿರು ತೋರಣ ಕಟ್ಟಿ, ರಂಗೋಲಿ ಬಿಡಿಸಿ ತಾಯಿ ಶ್ರೀಚಾಮುಂಡೇಶ್ವರಿ ಭಾವಚಿತ್ರ ಪ್ರತಿಷ್ಠಾಪಿಸಿ ಪೂಜೆ ನೆರವೇರಿಸಿದರು. ಮಹಾ ಮಂಗಳಾರತಿ, ತೀರ್ಥ ಪ್ರಸಾದ ನೀಡಿ, ಭಕ್ತರಿಗೆ ಅನ್ನ ಸಂತರ್ಪಣೆ ನಡೆಸಲಾಯಿತು. ಈ ವೇಳೆ ಪುರೋಹಿತರಾದ ವಿರೂಪಾಕ್ಷ, ಪುನೀತ್ ರಾಜ್‌ಕುಮಾರ್ ಅಭಿಮಾನಿ ಎಸ್.ಎಲ್. ಸಂತೋಷ್, ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಎಸ್.ಬಿ.ಧರಣೇಶ್, ಪಪಂ ಸದಸ್ಯರಾದ ನೂರಾಳಸ್ವಾಮಿ, ನವೀನ್ ಕುಮಾರ್, ಸ್ವಾಮಿ, ಸುರೇಶ್, ಪುಟ್ಟಸ್ವಾಮಿಗೌಡ, ಕಲಾವಿದ ಮಹೇಶ್, ಮಂಜುನಾಥ್, ಭರತ್ ಸಿಂಗ್, ಮಹದೇವ, ನಟರಾಜು, ಮಹದೇವಸ್ವಾಮಿ, ಮಂಜು, ನಿಂಗರಾಜು ಇದ್ದರು.

ಯುವ ಮುಖಂಡ ಕಾಯಿ ಶೇಖರ್ ಹುಟ್ಟುಹಬ್ಬ ಆಚರಣೆ

ಹುಣಸೂರು, ಜು.17– ಉದ್ಯಮಿ ಹಾಗೂ ಕಾಂಗ್ರೆಸ್ ಯುವ ಮುಖಂಡ, ಕಾಯಿ ಶೇಖರ್ ಅವರು ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ 50ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡರು.

ಇದೇ ವೇಳೆ ಬಡವರಿಗೆ ಹಣ್ಣು ಹಂಪಲು ವಿತರಿಸಿ ಮಾತನಾಡಿದ ಶೇಖರ್, ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿಕೊಳ್ಳುವ ಬದಲು ನಮ್ಮ ನಡುವೆ ಹಸಿವಿನಿಂದ ಬದುಕುವ ಬಡಜನರ ಹಸಿವು ನೀಗಿಸುವುದರ ಜೊತೆಗೆ ಆರ್ಥಿಕ ನೆರವು ನೀಡುವ ಕೆಲಸವಾಗಬೇಕೆಂದರು.

ಈ ವೇಳೆ ಮರದ ವ್ಯಾಪಾರಿ ಗುಂಡುಮಣಿ, ಉದ್ಯಮಿ ಹೆಚ್.ಎನ್.ಪ್ರಜ್ವಲ್, ಕಾಯಿ ವ್ಯಾಪಾರಿ ಚಲುವರಾಜ್, ಜೆಡಿಎಸ್ ಯುವ ಮುಖಂಡ ಮಧು ಆಚಾರ್, ಬಿಳಿಗೆರೆ ಚೇತನ್ ಕುಮಾರ್, ರವಿಕುಮಾರ್, ಅವರ ಪುತ್ರ ಇದ್ದರು.



ಉದ್ಯಮಿ ಹಾಗೂ ಕಾಂಗ್ರೆಸ್ ಯುವ ಮುಖಂಡ, ಕಾಯಿ ಶೇಖರ್ ಹುಟ್ಟುಹಬ್ಬ ಆಚರಿಸಕೊಂಡರು.

ಕಿಶೋರ್ ಕುಮಾರ್‌ಗೆ ಪಿಎಚ್.ಡಿ ಪದವಿ



ಮೈಸೂರು, ಜು. 17– ಡಾ. ಪ್ರಭು ಸಿ. ಬಾಸ್ಕರ್‌ಕೋಡ್ ಅವರ ಮಾರ್ಗದರ್ಶನದಲ್ಲಿ ಕಿಶೋರ್ ಕುಮಾರ್ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಂಸದ ಸುನೀಲ್ ಬೋಸ್‌ಗೆ ಸನ್ಮಾನ



ತಿ.ನರಸೀಪುರ ತಾಲೂಕಿನ ಬೆನಕನಹಳ್ಳಿಯಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ವೇಳೆ ಸಂಸದ ಸುನೀಲ್ ಬೋಸ್ ಅವರನ್ನು ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಸನ್ಮಾನಿಸಿದರು. ಬಸವ ಬಳಗದ ಪರಮೇಶ್ ಪಟೇಲ್, ದೊಡ್ಡನಹುಂಡಿ ನಂಜುಂಡಸ್ವಾಮಿ, ಚಂದ್ರದರ ಇತರರಿದ್ದರು.

ಮೂರನೇ ಪುಟದಿಂದ

ವಿಜೃಂಭಣೆಯ ಚಾಮುಂಡೇಶ್ವರಿ ವರ್ಧಂತಿ ಉತ್ಸವ

ಮಾಡಲಾಯಿತು. ಸಂಪ್ರದಾಯದಂತೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಅವರು ಪಲ್ಲಕ್ಕಿಯನ್ನು ಎಳೆಯುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ರಾಜವಂಶಸ್ಥರೊಂದಿಗೆ ಶಾಸಕ ಜಿ.ಟಿ.ದೇವೇಗೌಡ ಸಾಥ್ ನೀಡಿದರು.

ಬಳಿಕ ಮಂಗಳವಾದ್ಯ, ಪೊಲೀಸ್ ಬ್ಯಾಂಡ್ ವಾದನ, ಬಿರುದು, ಬಾವಲಿ, ಛತ್ರಿ, ಚಾಮರದೊಂದಿಗೆ ದೇವಾಲಯದ ಸುತ್ತಲೂ ನಾಡದೇವಿ ಚಾಮುಂಡೇಶ್ವರಿ ಉತ್ಸವಮೂರ್ತಿ ಪ್ರತಿಷ್ಠಾಪಿಸಿದ್ದ ಚಿನ್ನದ ಅಡ್ಡ ಪಲ್ಲಕ್ಕಿ ಉತ್ಸವ ನೆರವೇರಿಸಲಾಯಿತು.

ಬೆಳಗ್ಗೆ 8 ಕ್ಕೆ ಬೆಟ್ಟ ಪ್ರವೇಶ: ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಾಲಯವನ್ನು ಬೆಳಗ್ಗೆ 8 ಗಂಟೆಗೆ ತೆರೆಯಲಾಯಿತು. ಬೆಟ್ಟದಲ್ಲಿ ಭಕ್ತರ ಜಂಗುಳಿ ಹೆಚ್ಚಾಗುವ ಸಾಧ್ಯತೆಯಿಂದ ಬೆಳಗ್ಗೆ 8 ಗಂಟೆಯಿಂದಲೇ ನಗರ ಬಸ್ ನಿಲ್ದಾಣ ಹಾಗೂ ಲಲಿತ ಮಹಲ್ ಪ್ಯಾಲೇಸ್ ಮೈದಾನದಿಂದ ಚಾಮುಂಡಿಬೆಟ್ಟಕ್ಕೆ ಬಸ್ ಸಂಚಾರ ಆರಂಭಿಸಲಾಯಿತು. ಅಲ್ಲದೆ, ಮೆಟ್ಟಿಲು ಮೂಲಕ ಬೆಟ್ಟ ಹತ್ತುವ ಭಕ್ತರಿಗೂ ಬೆಳಗ್ಗೆ 8 ಗಂಟೆ ನಂತರವಷ್ಟೇ ಅವಕಾಶ ಕಲ್ಪಿಸಲಾಯಿತು. ಆದರೆ, ಮುಂಜಾನೆ ಯಿಂದಲೇ ಬೆಟ್ಟಕ್ಕೆ ಬರಲು ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಪರದಾಡಿದರು.

ಅಡ್ಡ ಪಲ್ಲಕ್ಕಿ ಉತ್ಸವದಲ್ಲಿ ಭಕ್ತರ ಕೊರತೆ: ವರ್ಧಂತಿ ಮಹೋತ್ಸವ ವೇಳೆ ಚಾಮುಂಡಿ ಬೆಟ್ಟದಲ್ಲಿ ಜರುಗುವ ಚಿನ್ನದ ಅಡ್ಡ ಪಲ್ಲಕ್ಕಿ ಉತ್ಸವ ಕಣ್ತುಂಬಿಕೊಳ್ಳಲೆಂದೇ ವಿವಿಧೆಡೆಯಿಂದ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸುತ್ತಿದ್ದರು. ಆದರೆ, ಈ ಬಾರಿ ಬೆಟ್ಟದಲ್ಲಿ ಬ್ಯಾರಿಕೇಡ್ ಭದ್ರಕೋಟೆ ನಿರ್ಮಿಸಿದ್ದರಿಂದ ಬೆಟ್ಟಕ್ಕೆ ಬಂದರೂ ಭಕ್ತರು ಅಡ್ಡ ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಹಾಗಾಗಿ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಭಕ್ತರ ಕೊರತೆ ಎದ್ದು ಕಾಣುತ್ತಿತ್ತು.

ಶಿಫಾರಸ್ಸು ಪತ್ರವುಳ್ಳವರ ದಂಡು: ವರ್ಧಂತಿ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧೆಡೆಯಿಂದ ಶಾಸಕರು, ಸಚಿವರ ಕಚೇರಿಯಿಂದ ಶಿಫಾರಸ್ಸು ಪತ್ರ ತಂದಿದ್ದ ಭಕ್ತರು ಬೆಟ್ಟಕ್ಕೆ ಖಾಸಗಿ ವಾಹನಗಳಲ್ಲಿ ತೆರಳಲು ಅವಕಾಶ ನೀಡುವಂತೆ ದುಂಬಾಲು ಬೀಳುತ್ತಿದ್ದು. ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸುತ್ತಿದ್ದ ದೃಶ್ಯವೂ ಕಂಡು ಬಂದಿತು.

ದರ್ಬಾರ್ ಉತ್ಸವದೊಂದಿಗೆ ತೆರೆ: ಚಾಮುಂಡೇಶ್ವರಿಯ ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ರಾತ್ರಿ 8.30ಕ್ಕೆ ನಾಡದೇವಿಗೆ ಉತ್ಸವ ಫಲಪೂಜೆ ನೆರವೇರಿತು. 8.45ಕ್ಕೆ ದರ್ಬಾರ್ ಉತ್ಸವ ನೆರವೇರಿಸ ಲಾಯಿತು. ಈ ವೇಳೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭಾಗಿಯಾಗಿದ್ದರು. ರಾತ್ರಿ 10 ಗಂಟೆಗೆ ದೇವಾಲಯವನ್ನು ಮುಚ್ಚಲಾಯಿತು.



ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ನಡೆದ ಉತ್ಸವಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ. ದೇವೇಗೌಡ ಇನ್ನಿತರರು ಚಾಲನೆ ನೀಡಿದರು.

> ಆಷಾಢ ಮಾಸದ ಕೃಷ್ಣ ಪಕ್ಷದ ಅಷ್ಟಮಿಯ ರೇವತಿ ನಕ್ಷತ್ರದ ದಿನದಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವ ಆಚರಿಸುತ್ತಾ ಬರಲಾಗಲಿ, ನಾಡಿಗೆ ಶುಭವಾಗಲೆಂದು ಪ್ರಾರ್ಥಿಸಲಾಗಿದೆ.
>
> – ಡಾ.ಎನ್.ಶಶಿಶೇಖರ್ ದೀಕ್ಷಿತ್, ಪ್ರಧಾನ ಆಗಮಿಕ

ಎಲ್ಲೆಲ್ಲೂ ಸಿಹಿ ವಿತರಣೆ

ಮೈಸೂರು, ಜು.17(ಎಂಟಿವೈ)–ಚಾಮುಂಡೇಶ್ವರಿ ವರ್ಧಂತಿ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಹರಕೆ ಹೊತ್ತ ಭಕ್ತರು ಸಿಹಿ ವಿತರಿಸಿದರು. ಶಕ್ತಿಯಾನುಸಾರ ಕೆಜಿ ಗಟ್ಟಲೆ ಲಾಡು, ಬಾದುಷ, ಜಿಲೇಬಿ, ಪೇಡ ತಂದು ಭಕ್ತರಿಗೆ ಹಂಚುತ್ತಿದ್ದರು. ಅದರಲ್ಲೂ ಮೈಮುಲ್ ವತಿಯಿಂದ 50 ಸಾವಿರ ಗೋದಿ ಲಡ್ಡು ತಯಾರಿಸಿ ತಂದು ದರ್ಶನ ಮುಗಿಸಿ ಹೊರಗೆ ಬರುವ ಭಕ್ತರಿಗೆ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯ್ಕ ಸೇರಿದಂತೆ ಸಿಬ್ಬಂದಿ ಹಂಚಿದರು.

ಚಾಮುಂಡಿಬೆಟ್ಟದಲ್ಲಿ ಸಾರಿಗೆ ಬಸ್ ಇಂಜಿನ್‌ನಲ್ಲಿ ಬೆಂಕಿ

ಮೈಸೂರು, ಜು.17(ಎಂಟಿವೈ)– ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ 300 ರೂ. ಟಿಕೆಟ್ ಪಡೆದ ಭಕ್ತರನ್ನು ಚಾಮುಂಡಿಬೆಟ್ಟಕ್ಕೆ ಕರೆದೊಯ್ಯುತ್ತಿದ್ದ ಸಾರಿಗೆ ಸಂಸ್ಥೆಯ ಬಸ್‌ನ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕ ಸಮಯ ಪ್ರಜ್ಞೆ ಮೆರೆದು ಸಂಭವಿಸಬಹುದಾದ ಅನಾಹುತ ತಪ್ಪಿಸಿರುವ ಘಟನೆ ಬೆಟ್ಟದ ಗಾಳಿಗೋಪುರದ ಬಳಿ ನಡೆದಿದೆ.

ಚಾಮುಂಡೇಶ್ವರಿ ವರ್ಧಂತಿ ಹಿನ್ನೆಲೆಯಲ್ಲಿ ಲಲಿತಮಹಲ್ ಪ್ಯಾಲೆಸ್ ಮೈದಾನದಿಂದ ಭಕ್ತರನ್ನು ಬೆಟ್ಟಕ್ಕೆ ಕರೆದೊಯ್ಯಲು 35 ಬಸ್ ವ್ಯವಸ್ಥೆ ಮಾಡಲಾಗಿತ್ತು. ಬೆಳಗ್ಗೆ 9.35ರಲ್ಲಿ ಲಲಿತಮಹಲ್ ಮೈದಾನದಿಂದ ಭಕ್ತರನ್ನು ಬೆಟ್ಟಕ್ಕೆ ಕರೆದೊಯ್ಯುತ್ತಿದ್ದ ನಗರ ಸಾರಿಗೆ ಸಂಸ್ಥೆಯ ಕೆಎ.09, ಎಫ್.5585 ಸಂಖ್ಯೆಯ ಬಸ್ ಗಾಳಿ ಗೋಪುರದಿಂದ 500 ಮೀಟರ್ ಹಿಂದೆ ಬರುತ್ತಿದ್ದಾಗ ಇಂಜಿನ್ ಬಳಿ ಹೊಗೆ ಕಾಣಿಸಿಕೊಂಡಿದೆ. ಕೂಡಲೆ ಅಪಾಯದ ಮುನ್ಸೂಚನೆ ಅರಿತ ಚಾಲಕ ಬಸ್ ಅನ್ನು ತಕ್ಷಣವೇ ರಸ್ತೆ ಬದಿ ನಿಲ್ಲಿಸಿ, ಭಕ್ತರನ್ನು ಕೆಳಗೆ ಇಳಿಯುವಂತೆ ಸೂಚನೆ ನೀಡಿದ್ದಾರೆ. ಇದೇ ವೇಳೆ ಭದ್ರತಾ ಕಾರ್ಯ

ಚಾಲಕನ ಸಮಯ ಪ್ರಜ್ಞೆಯಿಂದ ತಪ್ಪಿದ ಅನಾಹುತ

ಪರಿಶೀಲನೆಗಾಗಿ ಚಾಮುಂಡಿಬೆಟ್ಟಕ್ಕೆ ಹೋಗುತ್ತಿದ್ದ ಡಿಸಿಪಿ ಬಿಂಧುಮಣಿ ಅವರು ಬಸ್‌ನಲ್ಲಿ ಹೊಗೆ ಗಮನಿಸಿ, ತಮ್ಮ ವಾಹನವನ್ನು ನಿಲ್ಲಿಸಿದ್ದಾರೆ. ಬಸ್‌ನಲ್ಲಿದ್ದ ಎಲ್ಲರೂ ಕೆಳಗಿಳಿದ ಬಳಿಕ ಗಾಬರಿಯಾಗದಂತೆ ಧೈರ್ಯ ತುಂಬಿದರು. ಅಷ್ಟರಲ್ಲಾಗಲೇ ಚಾಲಕ ಗೇರ್ ಬಾಕ್ಸ್ ತೆರೆದು ನೋಡಿದಾಗ ಇಂಜಿನ್ ಮೇಲೆ ಸಂಗ್ರಹವಾಗಿದ್ದ ಒಣ ಎಲೆಗಳು ಬಿಸಿಯಿಂದ ಕಮರಿ ಬೆಂಕಿ ಹೊತ್ತಿಕೊಂಡಿದ್ದನ್ನು ಗಮನಿಸಿ, ನೀರು ಸುರಿದು ಬೆಂಕಿ ಆರಿಸಿದರು. ಇದು ಹೊಸ ಬಸ್ ಆಗಿರುವುದರಿಂದ ವೈರಿಂಗ್ ಸರಿಯಾಗಿತ್ತು. ಆದರೆ, ಒಳ ಎಲೆಗಳಿಗೆ ಇಂಜಿನ್ ಬಿಸಿ ಶಾಖ ಬೆಂಕಿ ಹೊತ್ತಿಸಿತ್ತು. ಬೆಂಕಿ ನಂದಿಸಿದ ಬಳಿಕ ಮತ್ತೆ ಬಸ್ ಸ್ಟಾರ್ಟ್ ಮಾಡಿ ಕೆಲ ಸಮಯ ಪರಿಶೀಲಿಸಲಾಯಿತು. ತೊಂದರೆ ಏನಿಲ್ಲ ಎಂದು ಖಚಿತವಾದ ಬಳಿಕ ಮತ್ತೆ ಭಕ್ತರನ್ನು ಅದೇ ಬಸ್‌ನಲ್ಲಿ ಬೆಟ್ಟಕ್ಕೆ ಕರೆದೊಯ್ಯಲಾಯಿತು. ಅಲ್ಲಿ, ಮೆಕ್ಯಾನಿಕ್‌ಗಳಿಂದ ಮತ್ತೊಮ್ಮೆ ಪರಿಶೀಲಿಸಲಾಯಿತು.

ಮೈಸೂರು ಭಾರತದ 3ನೇ ಸ್ವಚ್ಛ ನಗರ

ಮುನ್ಸಿಪಲ್ ಕೌನ್ಸಿಲ್‌ಗೆ ಪ್ರಥಮ ಸ್ಥಾನ ಲಭಿಸಿದ್ದರೆ, ತಿರುಪತಿಗೆ ಎರಡನೇ ಸ್ಥಾನ, ಅಂಬಿಕಾಪುರಕ್ಕೆ ಮೂರನೇ ಸ್ಥಾನ ಹಾಗೂ ಲೋನ್ವಾಲಗೆ ನಾಲ್ಕನೆ ಸ್ಥಾನ ಬಂದಿದೆ.

20ರಿಂದ 50 ಸಾವಿರ: ಸ್ವಚ್ಛತಾ ಸ್ಪರ್ಧೆಯಲ್ಲಿ 20ರಿಂದ 50 ಸಾವಿರ ಜನಸಂಖ್ಯೆಯುಳ್ಳ ಪಟ್ಟಣದ ವಿಭಾಗದಲ್ಲಿ ವಿಟಾ ಪ್ರಥಮ, ಸಾಸ್ವದ್ ದ್ವಿತೀಯ, ಡಿಯೋಲಾಲಿ ಪ್ರವಾರ ಮೂರನೇ, ಡುಂಗಾಪುರ ನಾಲ್ಕನೇ ಸ್ಥಾನ ಪಡೆದಿದೆ.

ಕೊನೆ ವಿಭಾಗ: ಸ್ಪರ್ಧೆ ಕೊನೆ ವಿಭಾಗವಾದ 20 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರ, ಪಟ್ಟಣಗಳ ವಿಭಾಗದಲ್ಲಿ ಪಂಚಗಣಿ ಪ್ರಥಮ, ಪಠಾಮ್ ದ್ವಿತೀಯ, ಫನ್ಹಲಾ ಮೂರನೇ, ಬಿಶ್ರಾಮರಂ ನಾಲ್ಕನೆ ಹಾಗೂ ಬುದ್ನಿ ನಗರ ಐದನೇ ಸ್ಥಾನ ಪಡೆದಿದೆ

ಮೈಸೂರು ಮೂರನೇ ಸ್ವಚ್ಛನಗರಿ; ಹೋಟೆಲ್ ಮಾಲೀಕರ ಸಂಘದಿಂದ ಪಾಲಿಕೆಗೆ ಅಭಿನಂದನೆ

ಮೈಸೂರು, ಜು.17– ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ನಗರಕ್ಕೆ ಮೂರನೇ ಸ್ಥಾನ ದಕ್ಕಿರುವ ಹಿನ್ನೆಲೆಯಲ್ಲಿ ಮೈಸೂರು ಹೋಟೆಲ್ ಮಾಲೀಕರ ಸಂಘವು, ನಗರ ಪಾಲಿಕೆಗೆ ಅಭಿನಂದನೆ ತಿಳಿಸಿದೆ.



ನಾರಾಯಣ ಗೌಡ

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಸ್ವಚ್ಛ ಸರ್ವೇಕ್ಷಣೆಯ 2024–25ನೇ ಸಾಲಿನಲ್ಲಿ ಮೈಸೂರು ನಗರಕ್ಕೆ 3ನೇ ಸ್ಥಾನ ಸಿಕ್ಕಿರುವುದಕ್ಕೆ ತುಂಬಾ ಸಂತಸವಾಗಿದೆ. ಮಹಾನಗರ ಪಾಲಿಕೆ ಆಯುಕ್ತರು ಸೇರಿದಂತೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ, ನೌಕರರ ಪರಿಶ್ರಮ, ವರ್ತಕರು, ವ್ಯಾಪಾರಿಗಳು, ಉದ್ಯಮಿಗಳು ಸೇರಿದಂತೆ ಪ್ರತಿಯೊಬ್ಬರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರೂ ಈ ನಿಟ್ಟಿನಲ್ಲಿ ಹುರಿದುಂಬಿಸಿದ್ದರು. ಈ ಪ್ರಶಸ್ತಿ ಗರಿಯಿಂದ ಪ್ರವಾಸೋದ್ಯಮ ಅಭಿವೃದ್ಧಿಗೂ ಸಹಕಾರಿಯಾಗಲಿದೆ. ಈ ಸಂದರ್ಭದಲ್ಲಿ ಪ್ರಶಸ್ತಿಗೆ ಕಾರಣರಾದ ಎಲ್ಲರಿಗೂ ಅಭಿನಂದನೆಗಳು ಎಂದು ತಿಳಿಸಿದ್ದಾರೆ.



ಪೌರ ಕಾರ್ಮಿಕರ 'ಸಿಹಿ' ಸಂಭ್ರಮ

ಸ್ವಚ್ಛ ಸರ್ವೇಕ್ಷಣೆಯ 'ಸೂಪರ್ ಸ್ವಚ್ಛ ಲೀಗ್ ಸಿಟಿ' ವಿಭಾಗದಲ್ಲಿ ಮೈಸೂರು, ಮೂರನೇ ಸ್ವಚ್ಛ ನಗರಿ ಪ್ರಶಸ್ತಿಗೆ ಭಾಜನವಾದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರ ಸಂಘದ ವತಿಯಿಂದ ಪಾಲಿಕೆ ಕಚೇರಿ ಮುಂಭಾಗ ಸಿಹಿ ಹಂಚಿ, ಸಂಭ್ರಮಾಚ ರಿಸಲಾಯಿತು. ಎನ್.ಮಾರಾ, ಶ್ರೀನಿವಾಸ್, ದೊರೆ, ಉಮಾ ಸೇರಿದಂತೆ ಮುಖಂಡರು, ಕಾರ್ಮಿಕರು ಪಾಲ್ಗೊಂಡಿದ್ದರು.

ಮೈಸೂರಿಗೆ ಸ್ವಚ್ಛ ನಗರಿ ಗರಿ; ಸಂಸದ ಯದುವೀರ್ ಹೆಮ್ಮೆ

ಮೈಸೂರು, ಜು.17– ದೇಶದ 'ಸ್ವಚ್ಛ ಸರ್ವೇಕ್ಷಣೆ'ಯಲ್ಲಿ ನಮ್ಮ ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ ಮತ್ತೊಂದು ಪ್ರಶಸ್ತಿ ಗರಿಮೆ ಬಂದಿರುವುದು ಹೆಮ್ಮೆ ಎನಿಸಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಂತಸ ವ್ಯಕ್ತಪಡಿಸಿದ್ದಾರೆ.




ಯದುವೀರ್

2024–25ನೇ ಸಾಲಿನ ಸ್ವಚ್ಛ ಸರ್ವೇಕ್ಷಣಾ ಅಭಿಯಾನದ 3 ರಿಂದ 10 ಲಕ್ಷ ಜನಸಂಖ್ಯೆಯ ವಿಭಾಗದಲ್ಲಿ ಮೈಸೂರು ನಗರಕ್ಕೆ ಮೂರನೇ ಸ್ಥಾನ ಲಭಿಸಿದ್ದು, ನೋಯ್ಡಾ ಪ್ರಥಮ ಹಾಗೂ ಚಂಡೀಗಢ ತೃತೀಯ ಸ್ಥಾನ ಪಡೆದಿವೆ. ಕಳೆದ ಸಾಲಿನಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಮೈಸೂರು ಈ ಬಾರಿ ನಮ್ಮ ಮಹಾನಗರ ಪಾಲಿಕೆಯ ಸಿಬ್ಬಂದಿ ಹಾಗೂ ಸಾರ್ವಜನಿಕರ ಸಹಯೋಗದಿಂದ ಮೂರನೇ ಸ್ಥಾನ ದೊರೆತಿದೆ. ರೆಡ್ಯೂಸ್, ರಿಯಾಸ್, ರೀ ಸೈಕಲ್ ಥೀಮ್‌ನಲ್ಲಿ ಸಮೀಕ್ಷೆ ನಡೆಸಲಾಗಿದ್ದು, ಒಳಚರಂಡಿ ವ್ಯವಸ್ಥೆ, ನಗರದ ಸೌಂದರ್ಯೀಕರಣವನ್ನೂ ಪರಿಗಣಿಸಲಾಗಿದೆ ಎಂದು ತಿಳಿಸಿದ್ದಾರೆ. ಈ ಹಿಂದೆ ನಮ್ಮ ಮೈಸೂರು ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೊದಲ ಸ್ಥಾನ ಪಡೆದಿತ್ತು. ಆದರೆ ಕಾಲ ನಂತರದಲ್ಲಿ ಹಿನ್ನೆಡೆಯಾಗಿತ್ತು. ಆದರೆ ಈಗ ಸಾಂಘಿಕ ಪ್ರಯತ್ನದಿಂದ ನಮ್ಮ ಊರು ಅಂದದೂರು ಆಗಿದೆ. ನಾವು ಇದೇ ರೀತಿ ನಮ್ಮ ಊರನ್ನು ಸ್ವಚ್ಛವಾಗಿಟ್ಟುಕೊಳ್ಳೋಣ. ಪಾಲಿಕೆಯೊಂದಿಗೆ ನಾವೂ ಕೈ ಜೋಡಿಸಿ ಮೈಸೂರನ್ನು ಸ್ವಚ್ಛವಾಗಿಡೋಣ. ಮುಂದಿನ ದಿನಗಳಲ್ಲಿ ನಮ್ಮ ಮೈಸೂರು ನಂಬರ್ ಒನ್ ಸ್ಥಾನ ಗಳಿಸಲು ಶ್ರಮಿಸೋಣ ಎಂದು ಮನವಿ ಮಾಡಿದ್ದಾರೆ.

ಮಹಾರಾಜ ಟ್ರೋಫಿ ಟಿ-20 ಕ್ರಿಕೆಟ್ ಟೂರ್ನಿಗೆ ಆಟಗಾರರ ಬಿಡ್

ಮತ್ತೆ ಮೈಸೂರು ವಾರಿಯರ್ಸ್ ಪಾಲಾದ ಮನೀಷ್ ಪಾಂಡೆ

MAHARAJA TROPHY KSCA T20



ಮೈಸೂರು, ಜು.17(ಎಂಕೆ)- ಕೆಎಸ್‌ಸಿಎ ಮಹಾರಾಜ ಟ್ರೋಫಿ-2025 ಕ್ರಿಕೆಟ್ ಟೂರ್ನಿಯ ಮುಂಬರುವ ಆವೃತ್ತಿಗಾಗಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ಅನುಭವಿ ಮನೀಷ್ ಪಾಂಡೆ ಮೈಸೂರು ವಾರಿಯರ್ಸ್ ಪಾಲಾದರೆ, ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಹುಬ್ಬಳ್ಳಿ ಟೈಗರ್ಸ್ ತಂಡ ಸೇರಿಕೊಂಡಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬಿಡ್‌ನಲ್ಲಿ ಅಭಿನವ್ ಮನೋಹರ್ ಮತ್ತು ಮನೀಷ್ ಪಾಂಡೆ ತಲಾ 12.20 ಲಕ್ಷ ರೂ.ಬಿಡ್ ಆಗುವ ಮೂಲಕ ಪಡಿಕ್ಕಲ್‌ಗಿಂತ 1 ಲಕ್ಷ ರೂ. ಕಡಿಮೆ ಮೊತ್ತ ಪಡೆದರು. ಪಡಿಕ್ಕಲ್ ಜೊತೆ ಅಭಿನವ್ ಕೂಡ ಹುಬ್ಬಳ್ಳಿ ತಂಡಕ್ಕೆ ಸೇರ್ಪಡೆಯಾದರೆ, ಕಳೆದ ಆವೃತ್ತಿಯಲ್ಲಿ ಹುಬ್ಬಳ್ಳಿ ಟೈಗರ್ಸ್‌ನಲ್ಲಿದ್ದ ಮನೀಷ್ ಪಾಂಡೆ ಈ ಸಲ ಮೈಸೂರು ವಾರಿಯರ್ಸ್ ಬಳಗಕ್ಕೆ ಸೇರಿಕೊಂಡಿದ್ದಾರೆ.

ವೇಗದ ಬೌಲರ್ ವಿದ್ವತ್ ಕಾವೇರಪ್ಪ ಅವರನ್ನು ಸೆಳೆದುಕೊಳ್ಳಲು ನಡೆದ ಪೈಪೋಟಿಯಲ್ಲಿ ಪಟ್ಟು ಬಿಡದ ಶಿವಮೊಗ್ಗ ಲಯನ್ಸ್ 10.80 ಲಕ್ಷ ರೂ.ಕೊಟ್ಟು ವಿದ್ವತ್ ಅವರನ್ನು ಖರೀದಿಸಿದೆ. ಇನ್ನೊಂದೆಡೆ ವೇಗಿ ವಿದ್ಯಾಧರ್ ಪಾಟೀಲ ಅವರನ್ನು ಬೆಂಗಳೂರು ಬ್ಲಾಸ್ಟರ್ಸ್ ತಂಡವು 8.30 ಲಕ್ಷ ರೂ. ನೀಡಿ ತನ್ನದಾಗಿಸಿಕೊಂಡಿದೆ.

ಆಲ್‌ರೌಂಡರ್‌ಗಳನ್ನು ಖರೀದಿಸುವಲ್ಲಿ ಹೆಚ್ಚು ಆಸಕ್ತಿ ತೋರಿದ ಮೈಸೂರು ವಾರಿಯರ್ಸ್ ಕೆ.ಗೌತಮ್(4.40ಲಕ್ಷ ರೂ.), ಯಶೋವರ್ಧನ್ ಪರಂತಾಪ್ (2 ಲಕ್ಷ ರೂ.), ಎಲ್.ಆರ್.ಕುಮಾರ್ (1.50ಲಕ್ಷ ರೂ.), ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ (4.70ಲಕ್ಷ ರೂ.), ವೇಗಿ ಎಂ. ವೆಂಕಟೇಶ್ (2 ಲಕ್ಷ ರೂ.) ಮತ್ತು ಗೌತಮ್ ಮಿಶ್ರಾ (2.25ಲಕ್ಷ ರೂ.) ಅವರನ್ನು ಸೆಳೆದುಕೊಂಡಿತು. ಜೊತೆಗೆ ಉದಯೋನ್ಮುಖ ಕೀಪರ್ ಹರ್ಷಿಲ್ ಧರ್ಮಾನಿ ಕೂಡ ಮೈಸೂರು ಪಾಲಾದರು.

ಬೆಂಗಳೂರು ತಂಡವು ಈ ಮೊದಲೇ 14 ಲಕ್ಷ ರೂ.ಕೊಟ್ಟು ಮಯಾಂಕ್ ಅಗರವಾಲ್ ಅವರನ್ನು ರಿಟೇನ್ ಮಾಡಿಕೊಂಡಿದ್ದರಿಂದ 'ಎ' ಕೆಟಗರಿ ಆಟಗಾರರತ್ತ ಒಲವು ತೋರಲಿಲ್ಲ. ಭರವಸೆಯ ಆಟಗಾರರ ಮೇಲೆ ವಿಶ್ವಾಸವಿಟ್ಟಿತು. ಎಲ್.ಆರ್.ಚೇತನ್, ರೋಹನ್ ಪಾಟೀಲ, ವಿದ್ಯಾಧರ್ ಪಾಟೀಲ, ರೋಹನ್ ನವೀನ್ ಮತ್ತು 16 ವರ್ಷ ವಯಸ್ಸಿನ ಮಾಧವ ಪ್ರಕಾಶ್ ಬಜಾಜ್ ಅವರನ್ನು ತಂಡಕ್ಕೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಹುಬ್ಬಳ್ಳಿ ತಂಡವು ಅಗ್ರಕ್ರಮಾಂಕದ ಬ್ಯಾಟಿಂಗ್ ವಿಭಾಗವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಆಟಗಾರರನ್ನು ಖರೀದಿಸಿದರೆ, ಗುಲ್ಬರ್ಗ ತಂಡವು ವಿಕೆಟ್ ಕೀಪರ್ ಕೆ.ವಿ.ಸಿದ್ಧಾರ್ಥ್, ವೇಗಿ ಮೊನಿಷ್ ರೆಡ್ಡಿ, ಕಳೆದ ಟೂರ್ನಿಯಲ್ಲಿ ಹೆಚ್ಚು ವಿಕೆಟ್ ಗಳಿಸಿದ್ದ ಲವಿಶ್ ಕೌಶಿಲ್ ಅವರಿಗೆ ಮಣೆ ಹಾಕಿತು. ಹಾಗೆಯೇ 1 ಲಕ್ಷ ರೂ. ನೀಡಿ ಕರ್ನಾಟಕ ತಂಡದ ನಿಕಿನ್ ಜೋಶ್ ಅವರನ್ನು ಖರೀದಿಸಿತು. ಹಾಗೆಯೇ ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ 8.60 ಲಕ್ಷ ರೂ.ಗಳಿಗೆ ಮಂಗಳೂರು ಡ್ರ್ಯಾಗನ್ಸ್ ಪಾಲಾದರು.

ಆ.11ರಿಂದ 27ರವರೆಗೆ ಪಂದ್ಯಾವಳಿ; ಪ್ರೇಕ್ಷಕರಿಗೆ ನಿರ್ಬಂಧ...!

ಮಹಾರಾಜ ಟ್ರೋಫಿ-2025ರ ಎಲ್ಲಾ ಪಂದ್ಯಗಳು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆ.11 ರಿಂದ 27ರವರೆಗೆ ನಡೆಯಲಿದ್ದು, ಪ್ರೇಕ್ಷಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಟೂರ್ನಿಯಲ್ಲಿ ಭಾಗವಹಿಸುವ ತಂಡಗಳ ಆಟಗಾರರು

ಮೈಸೂರು ವಾರಿಯರ್ಸ್: ಮನೀಷ್ ಪಾಂಡೆ, ಕರುಣ್ ನಾಯರ್, ಶಿಖರ್ ಶೆಟ್ಟಿ, ಕೆ.ಗೌತಮ್, ಸಿ.ಎ.ಕಾರ್ತಿಕ್, ಹರ್ಷಿಲ್ ಧರ್ಮಾನಿ, ಗೌತಮ್ ಮಿಶ್ರಾ, ಪ್ರಸಿದ್ಧ ಕೃಷ್ಣ, ಯಶೋವರ್ಧನ್ ಪರಂತಾಪ್, ಎಂ.ವೆಂಕಟೇಶ್, ಕುಮಾರ್ ಎಲ್.ಆರ್, ಶರತ್ ಶ್ರೀನಿವಾಸ್, ಸುಮೀತ್ ಕುಮಾರ್, ಕೆ.ಎಸ್.ಲಂಕೇಶ್, ಕಾರ್ತಿಕ್ ಎಸ್.ಯು, ಧನುಷ್ ಗೌಡ, ಕುಶಾಲ್ ಎಂ.ವಾಧ್ವಾನಿ, ಶಮಂತ್ ಎಸ್.ಎಂ.

ಬೆಂಗಳೂರು ಬ್ಲಾಸ್ಟರ್ಸ್: ಮಯಾಂಕ್ ಅಗರವಾಲ್, ವಿದ್ಯಾಧರ್ ಪಾಟೀಲ, ಎಲ್.ಆರ್.ಚೇತನ್, ಶುಭಾಂಗ್ ಹೆಗಡೆ, ರೀಹನ್ ನವೀನ್, ಮಾಧವ ಪ್ರಕಾಶ್ ಬಜಾಜ್, ಎ.ರೋಹನ್ ಪಾಟೀಲ, ಎಂ.ಜೆ.ನವೀನ್, ಸೂರಜ್ ಅಹುಜಾ, ಮೊಹಸೀನ್ ಖಾನ್, ಪ್ರತೀಕ್ ಜೈನ್, ಸಿದ್ಧಾರ್ಥ್ ಅಖಿಲ್, ಕೃತಿಕ್ ಕೃಷ್ಣ, ಎಸ್.ಇಶಾನ್, ಅದ್ವೈತ್ ಎಂ.ಶೆಟ್ಟಿ, ಭುವನ್ ಮೋಹನ ರಾಜು, ರೋಹನ್ ಎಂ.ರಾಜು, ನಿರಂಜನ್ ನಾಯಕ್.

ಗುಲ್ಬರ್ಗ ಮಿಸ್ಟಿಕ್ಸ್: ವೈಶಾಖ ವಿಜಯ್‌ಕುಮಾರ್, ಲವಿಶ್ ಕೌಶಲ್, ಲವನೀತ್ ಸಿಸೊಡಿಯಾ, ಪ್ರವೀಣ ದುಬೆ, ಕೆ.ವಿ.ಸಿದ್ಧಾರ್ಥ್, ಮೋನಿಷ್ ರೆಡ್ಡಿ, ಆರ್.ಸ್ಮರಣ್, ಎಸ್.ಜೆ.ನಿಕಿನ್ ಜೋಸ್, ಲಿಖಿತ್ ಎಂ.ಬೆನ್ನೂರ, ಪೃಥ್ವಿರಾಜ್, ಪ್ರಜ್ವಲ್ ಪವನ್, ಈ.ಜೆ.ಜಾಸ್ಪರ್, ಬಿ.ಎ.ಮೋಹಿತ್, ಫೈಜನ್ ರೈಝ್, ಸೌರಭ್ ಎಂ.ಮುತ್ತೂರ, ಶೀಥಲ್ ಕುಮಾರ್, ಹರ್ಷವರ್ಧನ್ ಖೂಬಾ, ಯೂನಿಸ್ ಅಲಿ ಬೇಗ್.

ಹುಬ್ಬಳ್ಳಿ ಟೈಗರ್ಸ್: ದೇವದತ್ತ ಪಡಿಕ್ಕಲ್, ಅಭಿನವ್ ಮನೋಹರ್, ಮೊಹಮದ್ ತಹಾ, ಕೆ.ಸಿ.ಕಾರಿಯಪ್ಪ, ಸಮರ್ಥ್ ನಾಗರಾಜ್, ಕೆ.ಎಲ್.ಶ್ರೀಜಿತ್, ಕೆ.ಪಿ.ಕಾರ್ತಿಕೇಯ, ಶ್ರೀಶಾ ಎಸ್.ಆಚಾರ್, ರಿತೇಶ್ ಎಲ್.ಭಟ್ಕಳ್, ಎಲ್.ಮನ್ವಂತ್‌ಕುಮಾರ್, ಬಿ.ವಿಜಯರಾಜ್, ಪ್ರಖರ್ ಚತುರ್ವೇದಿ, ಎಸ್.ಎಸ್.ಸಂಕಲ್ಪ, ಎಸ್.ರಕ್ಷಿತ್, ನಿತಿನ್ ಶಾಂತವೇರಿ ನಾಗರಾಜ, ಯಶ್‌ರಾಜ್ ಪೂಂಜಾ, ನೇಥನ್ ಜೋಕಿಮ್ ಫ್ರಾನ್ಸಿಸ್ ಡಿಮೆಲೊ, ನಿಶ್ಚಿತ್ ಪೈ.

ಶಿವಮೊಗ್ಗ ಲಯನ್ಸ್: ವಿದ್ವತ್ ಕಾವೇರಪ್ಪ, ಅನೀಶ್ವರ್ ಗೌತಮ್, ವಾಸುಕಿ ಕೌಶಿಕ್, ಹಾರ್ದಿಕ್ ರಾಜು, ಅವಿನಾಶ್ ಡಿ, ಅನಿರುದ್ಧ ಜೋಶಿ, ನಿಹಾಲ್ ಉಲ್ಲಾಳ, ದೀಪಕ್ ದೇವಾಡಿಗ, ಎಂ.ಬಿ.ದರ್ಶನ್, ತುಷಾರ್ ಸಿಂಗ್, ಧ್ರುವ ಪ್ರಭಾಕರ್, ಸಂಜಯ್ ಅಶ್ವಿನ್ ಸಿ, ಆನಂದ ದೊಡ್ಡಮನಿ, ಸಾಹಿಲ್ ಶರ್ಮಾ, ಭರತ್ ಧೂರಿ, ರೋಹಿತ್ ಕುಮಾರ್ ಕೆ, ಮರಿಬಸವ ಚಂದ್ರಶೇಖರಗೌಡ, ಸಿರೀಶ್ ಬಲ್ಗಾರ್.

ಮಂಗಳೂರು ಡ್ರ್ಯಾಗನ್ಸ್: ಶ್ರೇಯಸ್ ಗೋಪಾಲ್, ಎಸ್.ಶಿವರಾಜ್, ಅಭಿಲಾಶ್ ಶೆಟ್ಟಿ, ಮೇಲು ಕ್ರಾಂತಿಕುಮಾರ್, ಮೆಕ್ನಿಲ್ ಹ್ಯಾಡ್ಲಿ ನೊರೊನಾ, ರೋನಿತ್ ಮೋರೆ, ಆದರ್ಶ ಪ್ರಜ್ವಲ್, ಅಭಿಷೇಕ್ ಪ್ರಭಾಕರ್, ಬಿ.ಆರ್.ಶರತ್, ಆದಿತ್ಯ ನಾಯರ್, ಸಚಿನ್ ಶಿಂಧೆ ಕೆ.ವಿ.ಅನೀಶ್, ಪಲ್ಲವ ಕುಮಾರ್ ದಾಸ್, ತಿಪ್ಪಾರೆಡ್ಡಿ, ಲೋಚನ್ ಎಸ್.ಗೌಡ, ಪಾರಸ್ ಗುರುಭಕ್ಷ್ ಆರ್ಯ.

ಎಂಕೆಎಸ್ ಅಭಿಮಾನಿ ಬಳಗದಿಂದ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ



ಮೈಸೂರಿನ ಜೆ.ಪಿ.ನಗರದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ಪತ್ರಗಳನ್ನು ವಿತರಣೆ ಮಾಡಲಾಯಿತು.

ಮೈಸೂರು, ಜು.17(ಎಂಕೆ)- ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೆ.ಪಿ.ನಗರದ ನಾಚನಹಳ್ಳಿ ಪಾಳ್ಯದಲ್ಲಿ ಎಂ.ಕೆ.ಎಸ್ ಅಭಿಮಾನಿ ಬಳಗದ ವತಿಯಿಂದ ಸರ್ಕಾರದ ವಿವಿಧ ಯೋಜನೆಗಳ ನೂರಾರು ಮಂದಿ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ಪತ್ರಗಳನ್ನು ವಿತರಣೆ ಮಾಡಲಾಯಿತು.

ಬಳಿಕ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದಲ್ಲಿ ಯಾರೊಬ್ಬರು ಹಸಿದು ಮಲಗಬಾರದು. ಯಾರು ಕತ್ತಲೆಯಲ್ಲಿ ಬದುಕು ನಡೆಸಬಾರದು, ಆರ್ಥಿಕವಾಗಿ ಹಿನ್ನಡೆ ಅನುಭವಿಸಬಾರದು. ಎಲ್ಲರೂ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ಉದ್ದೇಶದಿಂದ ಪಂಚ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತಂದು ಎಲ್ಲರ ಬಾಳಲ್ಲಿ ಬೆಳಕು ಚೆಲ್ಲಿದ್ದಾರೆ ಎಂದು ಶ್ಲಾಘಿಸಿದರು.

ಜು.19ರಂದು ಮೈಸೂರಿನಲ್ಲಿ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ ನಡೆಯಲಿದ್ದು, ಜೆ.ಪಿ.ನಗರ ಭಾಗದ ವಿವಿಧ ಯೋಜನೆಗಳ ಫಲಾನುಭವಿಗಳು ತಪ್ಪದೆ ಭಾಗವಹಿಸಬೇಕು. ಈ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮುಖಂಡರಾದ ಮಹೇಂದ್ರ, ಜಗನ್ನಾಥ್ ಭೋವಿ, ಶ್ರೀಕಾಂತ್, ಜಗದೀಶ್ ಗೌಡ, ಕಿರಣ್, ಚೇತನ್, ಪುನೀತ್, ಸುರೇಶ್, ಮಂಜು ಉಪ್ಪಾರ್, ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯ ತಪಾಸಣಾ ಶಿಬಿರ



ಮೈಸೂರಿನ ವಿಜಯನಗರ 4ನೇ ಹಂತ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ನಾರಾಯಣ ಆಸ್ಪತ್ರೆಯ ಸಹಯೋಗದಲ್ಲಿ ಇತ್ತೀಚೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು. ಕ್ಲಬ್ ಅಧ್ಯಕ್ಷ ಮಹಾದೇವ, ಉಪಾಧ್ಯಕ್ಷ ಬಿ.ರಮೇಶ್, ಕಾರ್ಯದರ್ಶಿ ಬಿ.ಆರ್.ರಮೇಶ್, ಸಹ ಕಾರ್ಯದರ್ಶಿ ನವೀನ್, ಖಜಾಂಚಿ ಎಸ್.ಎಂ.ತುಳಸೀದಾಸ್, ನಿರ್ದೇಶಕರಾದ ಬಿ. ಮಂಚೇಗೌಡ, ಬಿ.ಕುಮಾರ್, ಎಸ್.ಎಸ್.ಕೀರ್ತಿ, ಹೆಚ್.ಎಂ.ಭೋಜೇಗೌಡ, ಪ್ರಕಾಶ್. ಸಿ, ಮತ್ತು ಎಸ್.ಕೆ.ಗೋಪಾಲ್ ಉಪಸ್ಥಿತರಿದ್ದರು


ಚಾಮುಂಡಿಬೆಟ್ಟದ ದೇವಾಲಯದಲ್ಲಿ ವಿಜೃಂಭಣೆಯ ದರ್ಬಾರ್ ಉತ್ಸವ

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭಾಗಿ

ಮೈಸೂರು,ಜು.17(ಎಂಟಿವೈ)- ನಾಡದೇವಿ ಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವದ ಅಂಗವಾಗಿ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಗುರುವಾರ ಸಂಜೆ ದರ್ಬಾರ್ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಬೆಟ್ಟದ ದೇವಾಲಯದ ಪ್ರಾಂಗಣದಲ್ಲಿರುವ ರುದ್ರಾಕ್ಷಿ ಮಂಟಪದಲ್ಲಿ ನಾಡದೇವಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಶಾಸ್ತ್ರೋಕ್ತವಾಗಿ ಪೂಜಾ ಕಾರ್ಯಕ್ರಮ ನೆರವೇರಿಸಿ, ದರ್ಬಾರ್ ಉತ್ಸವ ನೆರವೇರಿಸಲಾಯಿತು. ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ನಡೆದ ದರ್ಬಾರ್ ಉತ್ಸವದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪಾಲ್ಗೊಂಡಿದ್ದರು.

ರುದ್ರಾಕ್ಷಿ ಮಂಟಪದಲ್ಲಿ ರಾತ್ರಿ 8.30ಕ್ಕೆ ನಾಡದೇವಿಗೆ ಉತ್ಸವ ಫಲಪೂಜೆ ನಡೆಸಲಾಯಿತು. ಎಲ್ಲಾ ಧಾರ್ಮಿಕ ಕೈಂಕರ್ಯ ನೆರವೇರಿದ ಬಳಿಕ, ರಾತ್ರಿ 8.45ಕ್ಕೆ ದರ್ಬಾರ್ ಉತ್ಸವ ನೆರವೇರಿಸಲಾಯಿತು. ನಂತರ ಪ್ರಮೋದಾದೇವಿ ಒಡೆಯರ್ ಅವರು ಪೂಜೆ ಸಲ್ಲಿಸಿದರು. ಆ ಮೂಲಕ ವರ್ಧಂತಿ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು.



ಚಾಮುಂಡೇಶ್ವರಿ ದೇವಾಲಯದಲ್ಲಿ ಗುರುವಾರ ರಾತ್ರಿ ನಡೆದ ದರ್ಬಾರ್ ಉತ್ಸವದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪಾಲ್ಗೊಂಡಿದ್ದರು.

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಜಾಗೃತಿ ಅಗತ್ಯ

ಸಾಲುಮರದ ತಿಮ್ಮಕ್ಕ ಅಭಿಪ್ರಾಯ

ಮೈಸೂರು, ಜು.17(ಬಿಎಲ್‌ಯು)- ವ್ಯಸನ ಸಮಾಜಕ್ಕೆ ಮಾರಕವಾಗಿದ್ದು, ಇದರ ನಿರ್ಮೂಲನೆ ಆಗಬೇಕು. ಈ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ವೃಕ್ಷ ಮಾತೆ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲುಮರದ ತಿಮ್ಮಕ್ಕ ಸಲಹೆ ನೀಡಿದರು.

ಮೈಸೂರಿನ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿದ ವೇಳೆ ಮಾತನಾಡಿದ ಅವರು, ವ್ಯಸನ ಮುಕ್ತ ಮಾಡುವ ನಿಟ್ಟಿನಲ್ಲಿ ಬಸವ ಮಾರ್ಗ ಸಂಸ್ಥೆ ಕೈಗೊಂಡಿರುವ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು.


ಇದೇ ವೇಳೆ ಮಾತನಾಡಿದ ಬಸವ ಮಾರ್ಗ ಸಂಸ್ಥೆಯ ಅಧ್ಯಕ್ಷ ಎಸ್.ಬಸವರಾಜ್, ಸಾಲುಮರದ ತಿಮ್ಮಕ್ಕ ಅವರ ವೃಕ್ಷ ಪ್ರೇಮದಿಂದ ಉತ್ತೇಜಿತರಾಗಿ ನಾವು ಕೂಡ ಮೈಸೂರಿನಲ್ಲಿ ಸಸಿಗಳನ್ನು ನೆಟ್ಟಿದ್ದು, ಅವು ಈಗ ಮರಗಳಾಗಿ ಜನರಿಗೆ ನೆರಳು ನೀಡುತ್ತವೆ ಎಂದರು.

ಸಾಲುಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ಪ್ರತಿ ವರ್ಷ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗುವುದು. ಆ ವೇಳೆ ನಮ್ಮ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದು ವ್ಯಸನಮುಕ್ತರಾಗಿ ಮನೆಗೆ ಹೋಗುವವರಿಗೆ ಸಸಿಗಳನ್ನು ವಿತರಿಸಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಸಾಲುಮರದ ತಿಮ್ಮಕ್ಕ ಅವರ ಪುತ್ರ ಉಮೇಶ್, ಚಲನಚಿತ್ರ ನೃತ್ಯ ನಿರ್ದೇಶಕ ನಂದಕುಮಾರ್ ಹಾಜರಿದ್ದರು.



ಮೈಸೂರಿನ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲು ಮರದ ತಿಮ್ಮಕ್ಕ ಅವರು ಸಸಿ ನೆಟ್ಟು ಪರಿಸರ ದಿನ ಉದ್ಘಾಟಿಸಿದರು.

ಮೈಸೂರಿನ ವಿವಿಧೆಡೆ ವಿಜೃಂಭಣೆಯ ಚಾಮುಂಡೇಶ್ವರಿ ವರ್ಧಂತಿ ಉತ್ಸವ



ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಮಹಾರಾಜ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಚಾಮುಂಡೇಶ್ವರಿ ಪೂಜಾ ಮಹೋತ್ಸವ ಆಯೋಜಿಸಿ, ಕಾಲೇಜಿನ ವಿದ್ಯಾರ್ಥಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಯಿತು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪ ಸಮಾನ ಮನಸ್ಕರು ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವದ ಅಂಗವಾಗಿ ಅನ್ನದಾಸೋಹ ಏರ್ಪಡಿಸಿದ್ದರು.

ಮೈಸೂರಿನ ದೊಡ್ಡ ಒಕ್ಕಲಗೇರಿಯಲ್ಲಿ 150ನೇ ವರ್ಷದ ವರ್ಧಂತಿ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಬಡಾವಣೆಯ ಹಿರಿಯರೊಂದಿಗೆ ಯುವಕರು ವರ್ಧಂತಿ ಮಹೋತ್ಸವ ಆಯೋಜಿಸಿ, ತಾಯಿ ಚಾಮುಂಡೇಶ್ವರಿ ಪೂಜೆ ನೆರವೇರಿಸಿದರು. ಕಳೆದ 150 ವರ್ಷದಿಂದಲೂ ಈ ಬಡಾವಣೆಯಲ್ಲಿ ಚಾಮುಂಡೇಶ್ವರಿ ಪೂಜಾ ಮಹೋತ್ಸವ ಆಚರಿಸುವ ಪದ್ಧತಿ ಅನುಸರಿಸಲಾಗುತ್ತಿದ್ದು, ಅದನ್ನು ಯುವ ಪೀಳಿಗೆ ಮುಂದುವರೆಸಿಕೊಂಡು ಸಾಗುತ್ತಿರುವುದು ಗಮನಾರ್ಹ. ಕಾರ್ಯಕ್ರಮದ ಅಂಗವಾಗಿ ಜು.20ರಂದು ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಮೈಸೂರು,ಜು.17(ಎಂಟಿವೈ)- ಮೈಸೂರಿನ ವಿವಿಧೆಡೆ ನಾಡದೇವಿ ಚಾಮುಂಡೇಶ್ವರಿಯ ವರ್ಧಂತಿ ಮಹೋತ್ಸವವನ್ನು ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ನೆರವೇರಿಸಿ, ಸಾವಿರಾರು ಮಂದಿಗೆ ಪ್ರಸಾದ ವಿತರಿಸಲಾಯಿತು.

ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ಚಾಮುಂಡೇಶ್ವರಿ ದೇವಾಲಯಗಳಲ್ಲಿ ವಿಶೇಷ ಪೂಜಾ ಕಾರ್ಯ ಜರುಗಿಸಿದರೆ, ವಿವಿಧ ಸಂಘ ಸಂಸ್ಥೆಗಳ ವತಿಯಿಂದಲೂ ಚಾಮುಂಡೇಶ್ವರಿ ದೇವಿಯ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ಏರ್ಪಡಿಸುವ ಮೂಲಕ ಭಕ್ತಿ ಪಸರಿಸಿದರು. ಬಹುತೇಕ ಎಲ್ಲಾ ಬಡಾವಣೆಗಳಲ್ಲೂ ನಾಡದೇವಿಯ ಫೋಟೋ ಪ್ರತಿಷ್ಠಾಪಿಸಿ, ಅಲಂಕಾರ ಮಾಡಿ ಪೂಜೆ ನಡೆಸಿದ್ದು ಗಮನ ಸೆಳೆಯಿತು.

ಕುವೆಂಪುನಗರ, ದೇವರಾಜ ಮೊಹಲ್ಲಾ, ನಂಜುಮಳಿಗೆ, ಚಾಮುಂಡಿಪುರಂ, ಕುರುಬಾರಹಳ್ಳಿ, ಸಿದ್ಧಾರ್ಥನಗರ, ಜನತಾನಗರ, ಟಿ.ಕೆ.ಲೇಔಟ್, ಪಡುವಾರಹಳ್ಳಿ, ಕೆ.ಜಿ.ಕೊಪ್ಪಲು, ಹೆಬ್ಬಾಳು, ಕುಂಬಾರಕೊಪ್ಪಲು, ವಿದ್ಯಾನಗರ, ಇಟ್ಟಿಗೆಗೂಡು, ತಿಲಕ್‌ನಗರ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಚಾಮರಾಜ ಮೊಹಲ್ಲಾ, ವಾಣಿವಿಲಾಸ ರಸ್ತೆ, ಒಂಟಿಕೊಪ್ಪಲು, ಯಾದವಗಿರಿ, ನಜರ್‌ಬಾದ್, ಗಾಯತ್ರಿಪುರಂ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಚಾಮುಂಡೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅನ್ನ ಸಂತರ್ಪಣೆ ಮಾಡಲಾಯಿತು.

ದೇವಾಲಯಗಳಲ್ಲೂ ರಶ್: ವರ್ಧಂತಿ ಹಿನ್ನೆಲೆಯಲ್ಲಿ ವಿಜಯನಗರದ ಯೋಗಾನರಸಿಂಹ ಸ್ವಾಮಿ ದೇವಾಲಯ, ಸಪ್ತಮಾತೃಕೆ ದೇವಾಲಯ, ಚಾಮರಾಜ ಮೊಹಲ್ಲಾದ ಕುರುಬರ ಶ್ರೀರಾಮ ಮಂದಿರ, ಸರಸ್ವತಿ ಪುರಂ ಬಂದಂತಮ್ಮ ಕಾಳಮ್ಮ ದೇವಾಲಯ ಸೇರಿದಂತೆ ಇನ್ನಿತರ ಕಡೆಗಳಲ್ಲೂ ವಿಶೇಷ ಪೂಜೆಯನ್ನು ದೇವಿಗೆ ಸಲ್ಲಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬನ್ ಬಟರ್ ಜಾಮ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ತಮ್ಮುಡು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೂರನೇ ಪುಟದಿಂದ

ಆರ್‌ಸಿಬಿ ವಿರುದ್ಧ ಕ್ರಿಮಿನಲ್ ಕೇಸ್

ಮಹಾನಗರ ಪಾಲಿಕೆ (ಬಿಬಿಎಂಪಿ)ಯನ್ನು ಐದು ಭಾಗಗಳಾಗಿ ವಿಂಗಡಿಸಲಾಗುವುದು

ಎಂದ ಅವರು, ಮೈಸೂರು ವಿಶ್ವವಿದ್ಯಾಲಯದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ಪೀಠ ಸ್ಥಾಪಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದರು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ ಕೇಂದ್ರ ಪ್ರಾಯೋಜಿತ 3779.06 ಕೋಟಿ ರೂ. ವೆಚ್ಚದಲ್ಲಿ ರಿವ್ಯಾಂಪ್ಡ್ ಡಿಸ್ಟ್ರಿಬ್ಯೂಷನ್ ಸೆಕ್ಟರ್ ಯೋಜನೆ ಅನುಷ್ಠಾನಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ರಾಜ್ಯದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಲು ತಾತ್ವಿಕ ಅನುಮೋದನೆ ಹಾಗೂ ಎನ್‌ಟಿಪಿಸಿ ಸಂಸ್ಥೆಯು ಪರಮಾಣು ವಿದ್ಯುತ್ ಸ್ಥಾಪನೆಗೆ ಗುರುತಿಸಿರುವ ಸಂಭಾವ್ಯ ಸ್ಥಳಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲು ಸಮ್ಮತಿಸಿದೆ ಎಂದು ಅವರು ವಿವರಿಸಿದರು.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಹಾಗೂ ಹೊಸನಗರ ವ್ಯಾಪ್ತಿಯ ಅರಣ್ಯ ಪ್ರದೇಶಗಳನ್ನು ಒಳಗೊಂಡ ಶೆಟ್ಟಿಹಳ್ಳಿ ವನ್ಯಜೀವಿಧಾಮದ ವಿಸ್ತೀರ್ಣ ಪರಿಷ್ಕರಿಸಲು ಅನುಮತಿ ನೀಡಿದೆ. ಜೊತೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021ರಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ್ದ ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಭರ್ತಿಯಾಗದೆ ಉಳಿದಿರುವ 'ಉರ್ದು ಭಾಷಾ ಸಹಾಯಕ ಪ್ರಾಧ್ಯಾಪಕರ' ಹುದ್ದೆಗಳನ್ನು ಒಂದು ಬಾರಿಗೆ ಅನ್ವಯವಾಗುವಂತೆ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿಗೆ ಅವಕಾಶ ಕಲ್ಪಿಸಲು ಸಂಪುಟ ಅನುಮತಿ ನೀಡಿದೆ.

ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸದ 1,530 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳ ಉಪಕರಣಗಳನ್ನು 20 ಕೋಟಿ ರೂ. ವೆಚ್ಚದಲ್ಲಿ ಬದಲಿಸಿ ಹೊಸದಾಗಿ ಸ್ಥಾಪಿಸುವುದಕ್ಕೆ ಸಂಪುಟ ಅನುಮೋದನೆ ನೀಡಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗೆ ಭೂಸ್ವಾಧೀನಕ್ಕೆ ಸ್ಥಳೀಯ ಮುಖಂಡರು ಮತ್ತು ಜನ ಪ್ರತಿನಿಧಿಗಳೊಂದಿಗೆ ಚರ್ಚಿಸಲು ಒಪ್ಪಿಗೆ ಸೂಚಿಸಲಾಯಿತು ಎಂದರು.

ಭೂಕುಸಿತ: ಸಂಚಾರ ಬಂದ್

ಕಾರು, ಬೈಕ್‌ಗಳು ಬದಲಿ ಮಾರ್ಗ ಬಳಸಲು ಎಸ್‌ಪಿ ಡಾ.ಅರುಣ್ ಮನವಿ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ 75ರ ಧರ್ಮಸ್ಥಳ ಕ್ರಾಸ್‌ನಿಂದ ಸ್ವಲ್ಪ ಮುಂದೆ ಗುಡ್ಡ ಕುಸಿತ ಉಂಟಾಗಿದ್ದು, ಹೀಗಾಗಿ ಬೆಂಗಳೂರಿನಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯಕ್ಕೆ ಸಂಚಾರಕ್ಕೆ ಯಾವುದೇ ಅಡಚಣೆಗಳು ಎದುರಾಗಿಲ್ಲ. ಆದರೆ, ಮಂಗಳೂರಿನಿಂದ ಬೆಂಗಳೂರಿಗೆ ಹೋಗುವವರು ಬದಲಿ ಮಾರ್ಗ ಬಳಸಬೇಕಾಗಿದೆ.

ಆರ್‌ಸಿಬಿ ಸೇವಕರಂತೆ ವರ್ತಿಸಿದ್ದರು

ವಿಜಯೋತ್ಸವದ ಕುರಿತು ಪೊಲೀಸ್ ಅಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ ಎಂದು ರಾಜ್ಯದ ಪರವಾಗಿ ಹಾಜರಾದ ಹಿರಿಯ ವಕೀಲ ಪಿ.ಎಸ್.ರಾಜಗೋಪಾಲ್ ನ್ಯಾಯಾಲಯಕ್ಕೆ ತಿಳಿಸಿದರು. ಇಷ್ಟು ದೊಡ್ಡ ಸಾರ್ವಜನಿಕ ಸಭೆಗೆ ಅನುಮತಿ ಪಡೆಯುವ ಬದಲು, ಪೊಲೀಸ್ ಅಧಿಕಾರಿಗಳು ತಮ್ಮ ಮೇಲಧಿಕಾರಿಗಳನ್ನು ಸಂಪರ್ಕಿಸದೆ ಅಥವಾ ಅಗತ್ಯ ಅನುಮತಿಗಳನ್ನು ದೃಢೀಕರಿಸದೆ ಭದ್ರತಾ ವ್ಯವಸ್ಥೆಗಳನ್ನು ಮಾಡಲು ಪ್ರಾರಂಭಿಸಿದರು. ಎಂದು ರಾಜಗೋಪಾಲ್ ಹೇಳಿದರು. ಈ ವರದಿಯಲ್ಲಿ ಬೆಂಗಳೂರು ಕಾಲ್ತುಳಿತಕ್ಕೆ ಕರ್ನಾಟಕ ಸರ್ಕಾರ ಆರ್‌ಸಿಬಿಯನ್ನು ದೂಷಿಸಿದ್ದು, ಇದೇ ವರದಿಯಲ್ಲಿ ವಿರಾಟ್ ಕೊಹ್ಲಿ ಹೆಸರನ್ನೂ ಉಲ್ಲೇಖಿಸಲಾಗಿದೆ. ಕ್ರೀಡಾಂಗಣದಲ್ಲಿ ವಿಜಯೋತ್ಸವದಲ್ಲಿ ಪಾಲ್ಗೊಳ್ಳುವಂತೆ ಅಭಿಮಾನಿಗಳನ್ನು ಆಹ್ವಾನಿಸಲಾಗಿತ್ತು. ಆದರೆ ಇದಕ್ಕೆ ತಂಡದ ಆಡಳಿತ ಮಂಡಳಿಯು ರಾಜ್ಯ ಸರ್ಕಾರದಿಂದಾಗಲೀ ಪೊಲೀಸ್ ಇಲಾಖೆಯಿಂದಾಗಲೀ ಅನುಮತಿ ಪಡೆದಿರಲಿಲ್ಲ. ದಿಢೀರ್ ಕಾರ್ಯಕ್ರಮ ಘೋಷಣೆ ಮಾಡಿದ್ದರಿಂದ ಹಠಾತ್ತನೆ ಜಮಾಯಿಸಿದ ಜನಸಮೂಹದಿಂದ ನೂಕು-ನುಗ್ಗಲು ಉಂಟಾಯಿತು ಎಂದು ಸರ್ಕಾರದ ವರದಿ ಹೇಳುತ್ತದೆ.

ಎರಡನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಹೃದಯದಲ್ಲಿ ಇಂದಿಗೂ ಅಮರವಾಗಿದೆ

ದುಃಖತಪ್ತರು: ಕುಟುಂಬವರ್ಗದವರು, ಕುರಬಗೇರಿ, ಮೈಸೂರು

ಶ್ರೀ ಹೊನ್ನಪ್ಪನವರು (ಚಿಕ್ಕಣ್ಣ)

ಜನನ: 19.10.1945 ನಿಧನ: 18.07.2023

2ನೇ ವರ್ಷದ ಸವಿನೆನಪು



ಸದಾ ನಿಮ್ಮ ನೆನಪಿನಲ್ಲಿರುವ,

ಶ್ರೀಮಾನ್ ಪೈಲ್ವಾನ್ ಕ್ಲಾಸಿಕ್ ಬೈರಪ್ಪ

ದುಃಖತಪ್ತರು: ಅಮ್ಮನಾದ ಸರೋಜಮ್ಮ ಪತ್ನಿಯಾದ ಶ್ರೀಮತಿ ರೇಖಾ ಅವರ ಮಕ್ಕಳು ಅಪೂರ್ವ ಅಮೂಲ್ಯ, ವರುಣ್ ಅವರ ಅತ್ತೆಯಾದ ಗೌರಮ್ಮ ಹಾಗೂ ಕುಟುಂಬದವರು ಪಡುವಾರಳ್ಳಿ, ಮೈಸೂರು

Ready to Register DTCP Approved Sites in Mysuru- Hunsuru Highway Starts From 8 Lakhs

9620997711
9663767711

The Best WATER PROOF Plywood



9148991267 | 9901291267

SITE FOR SALE
40'x30' E/F
Site No. 442 C, in 3rd Phase, Saptamatruka Layout, near Lal Bahaddur Shastri Nagar.
Contact : 82773 43031 / 98860 73199

FOR SALE RENAULT DUSTER
2017 Model
Good Condition
Exp. Price Rs. 6 Lakhs
Call : 94480 77985

SITES FOR SALE
9 and 11A Khata Sites are Available
Mysore-Madikeri Road
Call:- 74833 38488



ಖ್ಯಾತ ವಕೀಲರಾದ
ಕಳಸ್ತವಾಡಿ ಮಹೇಶ್. ಎಂ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು

ಶುಭಕೋರುವವರು :
ಎಂ. ಎಂ. ವಕೀಲರ ಸ್ನೇಹ ಬಳಗ ಮೈಸೂರು

MONTESSORI / KINDERGARTEN NURSERY TEACHERS TRAINING

SIX MONTHS COURSE, REGUALAR/CORRESPONDENCE

SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD

100 % JOB ASSURED @ ANY PUBLIC OR PRIVATE SCHOOLS

JNANA GANGOTRI CONVENT
Rajendra Nagara Mysore-570 007. CALL: 9243580672

---

mysoerae KALENI SILK INDUSTRY

FACTORY SALE

ಅಪ್ಪಟ ಚಿನ್ನದ ಜರಿಯ ಸೀರೆಗಳು

100% PURE SILK / GOLD ZARI SAREES

UP TO 30% DISCOUNT

Woven on traditional looms exclusively with pure silk from the historic region of Mysore.

KALENI SILK INDUSTRY
#263, Hebbal Industrial Area, Opp. to Annapurna Aahar Hotel, Mysore-570018
9019949145 / 9845817295 / 9019348989

ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ದೂರವಾಣಿ : 0821-2424246

ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಆಹ್ವಾನ ಪತ್ರಿಕೆ

ದಿನಾಂಕ : 19.07.2025 ನೇ ಶನಿವಾರ ಸಮಯ : ಸಂಜೆ 5–00 ಗಂಟೆ

ದಿವ್ಯ ಸಾನಿಧ್ಯ :
ಶ್ರೀ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರು
ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆಯ ಮುಖ್ಯಸ್ಥರು.

ಅಧ್ಯಕ್ಷತೆ : ಸನ್ಮಾನ್ಯ ಶ್ರೀ. ಮಹಾಲಿಂಗಂ ರವರು
ಅಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಮುಖ್ಯ ಅತಿಥಿಗಳು : ಸನ್ಮಾನ್ಯ ಶ್ರೀ. ಟಿ. ಎಸ್. ಶ್ರೀವತ್ಸ ರವರು
ಶಾಸಕರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ಮೈಸೂರು.

ಮುಖ್ಯ ಭಾಷಣಕಾರರು : ಸನ್ಮಾನ್ಯ ಶ್ರೀ. ಚೇತನ್ ರಾಮ್ ಆರ್. ಎ. ರವರು
ಕಲಿಕಾ ಗುರು, ಸಂಸ್ಥಾಪಕರು, ಪರಿವರ್ತನಾ ಶಿಕ್ಷಣ ಸಂಸ್ಥೆಗಳು, ಶ್ರೀರಂಗಪಟ್ಟಣ.

ಸನ್ಮಾನ್ಯ ಶ್ರೀ. ವಿ. ಕುಮಾರ್ ರವರು
ಉಪಾಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಸ್ಥಳ :
ರಿಯೋ ಮೆರಿಡಿಯನ್ ಸಭಾಂಗಣ
ಯೂನಿಟ್ ಆಫ್ ರಿಯೋ ಮೆರಿಡಿಯನ್ ಹೋಟೆಲ್ಸ್ ಪ್ರೈ. ಲಿ.,
ನ್ಯೂ ಸಯ್ಯಾಜಿರಾವ್ ರಸ್ತೆ, ಹೈವೇ ಸರ್ಕಲ್, ಮೈಸೂರು.

ತಮ್ಮೆಲ್ಲರಿಗೂ ಸ್ವಾಗತ ಕೋರುವ
ಆಡಳಿತ ಮಂಡಳಿ ಸದಸ್ಯರು

ಸೊಸೈಟಿಯ ಆಡಳಿತ ಮಂಡಳಿ :
ಶ್ರೀ. ಮಹಾಲಿಂಗಂ, ಅಧ್ಯಕ್ಷರು, ಶ್ರೀ. ವಿ. ಕುಮಾರ್, ಉಪಾಧ್ಯಕ್ಷರು,

ನಿರ್ದೇಶಕರುಗಳು :
ಶ್ರೀ. ಸಿ.ಡಿ.ಕೃಷ್ಣ, ಶ್ರೀ.ಕೆ.ರವಿ, ಶ್ರೀ. ಕೆ.ವಿ.ಚಿನ್ನಯ್ಯ, ಶ್ರೀ.ದೇವೇಂದ್ರ, ಶ್ರೀ. ಕೆ. ನಾಗರಾಜು, ಶ್ರೀ. ಕೆ. ದಶರಥ್, ಶ್ರೀ. ಹೆಚ್.ಎಂ. ಪರಶಿವಮೂರ್ತಿ, ಶ್ರೀ.ರಾಚೇಗೌಡ, ಶ್ರೀ. ಎಂ.ಎಸ್. ರೇವಣ್ಣ, ಶ್ರೀ.ಜಿ.ಅಶೋಕ್, ಶ್ರೀ.ಸಿ.ವೆಂಕಟಪ್ಪ, ಶ್ರೀ.ಎ. ಕುಮಾರ್, ಶ್ರೀಮತಿ, ಜಯಲಕ್ಷ್ಮಿ, ಶ್ರೀಮತಿ, ಟಿ. ಅನುಸೂಯ, ಶ್ರೀ. ರೇವನಾಯಕ

ವಿಶೇಷ ಸಲಹೆಗಾರರು :
ಶ್ರೀ. ಬಿ. ಪುಟ್ಟಸ್ವಾಮಿ, ಶ್ರೀ. ಮಾದೇಗೌಡ

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ),

CA-12, 2ನೇ ಹಂತ, ವಿಜಯನಗರ, ಮೈಸೂರು–570017, PH:0821-2514823

ಪ್ರಕಟಣೆ

ಮೇಲ್ಕಂಡ ವಿಳಾಸದಲ್ಲಿ ಕ್ಲಬ್‌ನ ನಿಯಮಾವಳಿಗನುಗುಣವಾಗಿ ಕ್ಯಾಂಟೀನ್ (ಸಸ್ಯಾಹಾರ ಮತ್ತು ಮಾಂಸಾಹಾರ (ನಾಟಿ ಶೈಲಿಗೆ ಆದ್ಯತೆ) ನಡೆಸಲು ಅರ್ಹ ಅಡುಗೆ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ನಿಮ್ಮ ಮನವಿ ಪತ್ರದೊಂದಿಗೆ, ದರಪಟ್ಟಿಯನ್ನು ಲಗತ್ತಿಸಿ, ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 25–07–2025ನೇ ಶುಕ್ರವಾರದೊಳಗೆ, ಖುದ್ದಾಗಿ ಕಚೇರಿಯಲ್ಲಿ ಅಥವಾ ಅಂಚೆ ಮೂಲಕ ಮೇಲ್ಕಂಡ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕ್ಲಬ್‌ನ ಕಛೇರಿಯನ್ನು ಸಂಪರ್ಕಿಸಿ.

ಸಹಿ/– ಹೆಚ್.ಎಂ.ರಾಮಚಂದ್ರ, ಅಧ್ಯಕ್ಷರು
ಸಹಿ/– ಎನ್.ಎಲ್. ಶೇಖರ್, ಕಾರ್ಯದರ್ಶಿ

ಸೂಚನೆ: ಗುತ್ತಿಗೆದಾರರ ಆಯ್ಕೆ ಕುರಿತಂತೆ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

MYSORE DIOCESAN EDUCATIONAL SOCIETY (R)

ST. PHILOMENA'S COLLEGE

(Autonomous) Estd.:1946
Accredited by NAAC and Approved by AICTE, New Delhi
Mysore-Bangalore Highway, Bannimantap, Mysore-570 015

ADMISSIONS OPEN FOR 2025 - 2026

POST GRADUATE PROGRAMMES
with Outcome Based Education Curriculum (OBE)

M.Sc. Programmes
- Chemistry
- Physics
- Mathematics
- Biochemistry
- Computer Science
- Criminology & Forensic Science
- Psychology
- Food Science and Nutrition

M.A. Programmes
- English
- Economics
- Journalism and Mass Communication

Ph.D Programmes
- Chemistry
- Social Work
- Physics
- Journalism & Mass Communication

Other Programmes
M.Com › MSW › MCA* › MBA*
* AICTE approved programmes

SEPARATE HOSTEL FACILITY AVAILABLE FOR BOYS & GIRLS

Contact :
Mob : 70223 71285, 93808 84523, 98446 08662, 78297 95727, 63641 18983, 90085 80707, 9741831619
E-mail: stphilos1946@gmail.com | Website: www.stphilos.ac.in

